
ಕಲ್ಯಾಣ ಕಿರಣ

ಋ





ತರಂಗಿಣಿ ಗ್ರಂಥದ ಬಿಡುಗಡೆ ಚಿಕ್ಕನಾಯ್ಕನಹಳ್ಳಿಯಲ್ಲಿ: ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಪ್ರವಚನ ಸಮಾರಂಭದಲ್ಲಿ ಭಾಗವಹಿಸಿ ನ್ಯಾಯಾಧೀಶರಾದ ಶ್ರೀ ಚಂದ್ರಶೇಖರಯ್ಯ ಬಿಡುಗಡೆಮಾಡಿದರು.

ಕಲ್ಯಾಣ ಕಿರಣ

ನುಡಿ-ನೈವೇದ್ಯ **ಕೃತಜ್ಞತಾ ಸಮರ್ಪಣೆ**

ಕರ್ತ ನಿನ್ನ ಕರುಣೆಯನ್ನು ಹೇಗೆ ನಾನು ಸ್ಮರಿಸಲಿ ? —
ಅರ್ತಿಯಿಂದ ಕಳುಹಿದಿರಿ ನಿಮ್ಮೊಲಿಮೆಯ ಕಂದನ ॥ ॥ಪ॥

ನೊಂದ ಎದೆಯ ಪಿಸುದನಿಯ ಮೌನದಿಂದ ಆಲಿಸಿದ
ತಂದೆಯಾಗಿ ಅಭಯ ನೀಡಿ ಬೆಂದಮನವ ತಣಿಸಿದ ॥
ಅಮೃತಾಂಶುಕರನೆ ಆಗಿ ಶಾಂತಿ ಹೊನಲ ಹರಿಸಿದ
ಆ ಮೃತಜೀವಿಗಳ ಜೀವ ತುಂಬಿ ಆಡಿಸಿದ ॥ ॥೧॥

ಜಾತಿಭೇದ ಮನುಜಗೈದ ತಂತ್ರವೆಂದು ಸಾರಿದ
ನೀತಿಸಿರಿಯು ಒಂದೆ ನಿಜದ ಸೂತ್ರವೆಂದು ತೋರಿದ
ಶತಶತ ಮಾನದಿಂ ಜಡೆಗಟ್ಟಿದತಲೆ ತಿಕ್ಕಿತಿಕ್ಕಿ ತೊಳೆದ
ಮಾನವೀಯ ತತ್ತ್ವ ಹಣಿಗೆ ಹಿಡಿದು ಮುಡಿಯ ಬಾಚಿದ ॥೨॥

ಶಾಸ್ತ್ರದಾಸ್ಯ ಮೂಢಶ್ರದ್ಧೆ ಸಂಪ್ರದಾಯ ಅಂಧನಿಷ್ಠೆ
ಬೆಸ್ತು ಬೀಳುವಂತೆ ಮಾಡಿ ಜನಮನದಿ ಕಾಲ್ತೆಗಿಸಿದ
ದುಡಿವವಗೆ ದೇವನೊಲಿಮೆ ದಯವೆ ಮೂಲ ಧರ್ಮಕ್ಕೆ
ಮೃಡನ ಕರುಣೆ ಪಡೆದ ಮನುಜ ಶ್ರೇಷ್ಠನಹುದು ಎಂದನು ॥೩॥

ಬಸವನೆಂಬ ಕಾಮಧೇನು ಎಮ್ಮ ಬಳಿಗೆ ಸಾರಿರೆ
ವಿಶ್ವಧರ್ಮ ಸವಿಹಾಲನ್ನು ಜಗಕ್ಕೆ ತಾನು ನೀಡಿರೆ
ಅಸಮಶಕ್ತಿಯಾಗಿ ನಿಂತು ಮುಂದೆ ನಮ್ಮ ನಡೆಸಲು
ಯಶದಿ ನಾವು ಕಟ್ಟುವೆವು ಸಚ್ಚಿದಾನಂದ ಮಂದಿರವ ॥೪॥

—ಮಾತಾಜಿ.

ಕಲ್ಯಾಣ ಕಿರಣ

ಬಿಡಿಪ್ರತಿ : ಒಂದು ರೂಪಾಯಿ

ವಾರ್ಷಿಕ ಚಂದಾ : ಹನ್ನೆರಡು ರೂಪಾಯಿ

ಸಂಪುಟ ೩
ಸಂಚಿಕೆ ೧೧

ಮಾಸಪತ್ರಿಕೆ

ಮಾರ್ಚ್ ೧೯೭೮
ಬಸವ ಶಕೆ ೮೭೧

ಈ ಸಂಚಿಕೆಯಲ್ಲಿ ಏನಿದೆ ?

ಮುಖಪುಟ : ಮಹಾಯೋಗಿ ಮಹಾದೇವ.

ನಾಲ್ಕನೆ ಹೊದ್ದಿಕೆ : ಪೂಜ್ಯ ಮಾತಾಜಿ

ಹೃತ್ಪೂರ್ವಕ ಧನ್ಯವಾದ

ಕನ್ನಡ ನುಡಿ ಬನದಲ್ಲಿ ಕವಿ ಕೋಗಿಲೆಯಾಗಿ ಹಾಡಿ, ಕನ್ನಡ ಡಿಂಡಿಮವ ಕಳಕಳಿಯಿಂದ ಬಾರಿಸಿ, ಅಸಂಖ್ಯಾತ ಚೇತನಗಳನ್ನು ಉದ್ದೀಪಿಸಿದ ರಾಷ್ಟ್ರಕವಿ, ರಸಋಷಿ, ಕಾವ್ಯಸಹ್ಯಾದ್ರಿ ಕುವೆಂಪುರವರಿಗೆ ಕಲ್ಯಾಣ ಕಿರಣ ಡಿಸೆಂಬರ್ ಪತ್ರಿಕೆ ಕಳಿಸಿ, ೭೪ನೇ ಹುಟ್ಟು ಹಬ್ಬದ ಶುಭಾಶಯ ಸಲ್ಲಿಸಿ ಬರೆದ ಪತ್ರಕ್ಕೆ ಸನ್ಮಾನ್ಯ ಶ್ರೀ ಕುವೆಂಪುರವರಿಂದ ಬಂದಿತು ಮಾರೋಲೆ. ಈ ಔದಾರ್ಯಕ್ಕಾಗಿ ಅವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದ.

—ಸಂಪಾದಕರು

ಡಾ|| ಕುವೆಂಪು

"ಉದಯರವಿ"
ವಾಣೀವಿಲಾಸಪುರಂ
ಮೈಸೂರು –2

ದಿನಾಂಕ: 9.1.1978.

ತಾಯಿಗೆ ವಂದನೆಗಳು.

ತಾವು ಶಿವಮೊಗ್ಗೆಯಿಂದ 28.12.77ರಂದು ಬರೆದ ಪತ್ರವೂ 'ಕಲ್ಯಾಣ ಕಿರಣ'ದ ಪ್ರತಿಯೂ ತಲುಪಿದುವು. ನನ್ನ ಬಗ್ಗೆ ಒಳ್ಳೆಯ ಮಾತಾಡಿದ್ದೀರಿ. ಅದಕ್ಕಾಗಿ ಕೃತಜ್ಞನಾಗಿದ್ದೇನೆ. ಲೇಖನವನ್ನು ನೋಡಿದೆ. ವಂದನೆಗಳು.

ಯಾವ ಕೃತುಶಕ್ತಿ 'ಶ್ರೀರಾಮಾಯಣ ದರ್ಶನ'ವನ್ನು ನನ್ನಿಂದ ಮೂಡಿಯಿಸಿತೋ ಅದೇ ಶಕ್ತಿ ಕ್ರಾಂತಿಪುರುಷ ಬಸವಣ್ಣನವರ ಬಗೆಗೂ ಮೂಡಿಸೀತು. ಜನದ ಇಚ್ಛೆ ಕವಿಯ ಲೇಖನಿಯಿಂದ ಮೂಡಿ ಬಂದೀತು. ಆ ದಿವ್ಯಕ್ಷಣಕ್ಕಾಗಿ ಕವಿಯೂ ಕಾಯುತ್ತಾನೆ.

ನಮಸ್ಕಾರ,

ಇಂತೀ ತಮ್ಮ,
ಕುವೆಂಪು



ಜಯಂತಿಯ ಸಂದೇಶ

ಮೂವತ್ತು ಮೂರನೆಯ ಜಯಂತಿಯನ್ನು ಇದೇ ತಿಂಗಳಿನ ಹದಿಮೂರರಂದು ಈ ಜೀವನವು ಕಾಣುತ್ತಲಿದೆ. ಹುಟ್ಟು ಹಬ್ಬವೆಂದರೆ ಬೇವು-ಬೆಲ್ಲಗಳ ಸಮ್ಮಿಶ್ರಣ ದಿನ, ಅಂತರಾವಲೋಕನ ಮಾಡಿಕೊಳ್ಳುವ ಚಿಂತನೆಯ ದಿನ. ಇಲ್ಲಿ ನೋವು-ನಲಿವುಗಳೆರಡರ ಸಮ್ಮಿಳಿತ ಭಾವವಿದೆ. ಕೆಲವರು ಸೋಜಿಗ ಪಡಬಹುದು, ನೋವಿನಿಂದಲೂ ಕೂಡಿದ ದಿವಸವೆಂದು ನಾನೆಂದಾಗ. ಏಕೆಂದರೆ ಅನೇಕ ಬಂಧು-ಬಾಂಧವರು, ಸ್ನೇಹಿತರು ಗೃಹಸ್ಥರನ್ನು ಹುಟ್ಟು ಹಬ್ಬದಂದು ಹರಸಿದರೆ, ಅಸಂಖ್ಯಾತ ಅಭಿಮಾನಿಗಳು, ಸದ್ಭಕ್ತರು ಸಂಭ್ರಮದಿಂದ ಕಾಣಿಕೆಗಳನ್ನಿತ್ತು ನಮ್ಮಂತಹವರನ್ನು ಹರಸುವಾಗ ನೋವೆತ್ತಣದು ಎಂಬುದು ನಿಮ್ಮ ಸಂದೇಹವಲ್ಲವೆ?

ನಿಜ, ಹುಟ್ಟು ಹಬ್ಬ ಎಲ್ಲರನ್ನು ಹತ್ತಿರ ತರಿಸುವ, ಶುಭಾಶಯ-ಕಾಣಿಕೆಗಳನ್ನು ಪಡೆಯುವ ನಲಿವಿನ ದಿನ. ಆದರೆ ಚಿಂತನೆಗೆ ಕುಳಿತರೆ ನೋವಿನ ನೆರಳು ಹಾಯದಿರದು. ಕಾರಣ, "ದೇವಾ ಆಯುಷ್ಯದ ಅಮೂಲ್ಯ ಕ್ಷಣಗಳು ಕಾಲನ ಗರ್ಭ ಸೇರಿದುವೆ? ಎಷ್ಟೊಂದು ವರುಷಗಳು ಸರಿದು ಹೋದವು. ಹಾಕಿಕೊಂಡ ಯೋಜನೆ, ಸಾಧಿಸಬೇಕಾದ ಗುರಿ, ಮಾಡಬೇಕಾದ ಕರ್ತವ್ಯ ಭೂಮವಾಗಿರುವಾಗ ಬಾಳಿನ ಬಹುಭಾಗ ಸರಿದು ಹೋಯಿತೇ" ಎಂಬ ವಿಷಾದ ಸುಳಿಯದಿರದು. ಜಗನ್ಮಾತೆ ಅಕ್ಕಮಹಾದೇವಿ ಹೇಳುವಳು: "ಜಗತ್ತೆಂಬ ಕಣದಲ್ಲಿ ನಮ್ಮ ಜೀವನಾಯುಷ್ಯವೆಂಬ ಕಾಳ ರಾಶಿ ಬಿದ್ದಿರುವುದು. ಒಂದೊಂದು ನಿಮಿಷ ಒಂದೊಂದು ಕಾಳು. ಅದನ್ನು ಹಗಲು ರಾತ್ರಿಗಳೆಂಬ ಈರ್ವರು ಮಾಪಕರು ಸೂರ್ಯೋದಯ, ಸೂರ್ಯಾಸ್ತ ಎಂಬ ಎರಡು ಕೊಳಗಗಳನ್ನು ಹಿಡಿದು, ಅಳೆಯುತ್ತ ಕಾಲನ ಗರ್ಭವೆಂಬ ಚೀಲದೊಳಕ್ಕೆ ಸುರಿಯುತ್ತಲಿಹರು.

ಆಯುಷ್ಯದ ರಾಶಿ ತೀರಿದಾಗ ಸಾವೆಂಬ ಚೀಲ ಹಿಡಿದವನ ಬಾಯೊಳಗೆ ಈ ಇಹದ ಬಾಳು. ಅಲ್ಲಿಗೆ ಹುಟ್ಟಿನಿಂದ ಸಾವಿನವರೆಗಿನ ಈ ಪಯಣಕ್ಕೆ ಕೊನೆ. ನಾವು ಏನೇ ಯತ್ನಿಸಿದರೂ ಹರಿಯುವ ನೀರಿನಂತಿಹ ಆಯುಷ್ಯ ಪ್ರವಾಹಕ್ಕೆ ತಡೆ ಹಾಕಲಾರೆವು. ಸಾಧ್ಯವಾದಷ್ಟೂ ಆತುರದಿಂದ ಕ್ಷಣಗಳನ್ನು ಸಾರ್ಥಕಗೊಳಿಸುವುದೊಂದೇ ನಮಗೆ ಉಳಿದ ದಾರಿ."

ಒಂದೊಂದು ವರುಷ ಸರಿದಂತೆ ಬಾಳು ಬಲಿತ ಹೆಮ್ಮೆಯೊಂದೆಡೆ; ಅದು ಕ್ಷಯಿಸುವ ಖಿನ್ನತೆ ಮತ್ತೊಂದೆಡೆ. ಬೇವು-ಬೆಲ್ಲಗಳನ್ನು ಒಟ್ಟಾಗಿ ಸವಿವ 'ವ್ಯಕ್ತಿಗತ ಯುಗಾದಿ.'

ದೇಶಕ್ಕೆ ಯೋಜನೆ ಇರುವುದು ಅವಶ್ಯವಿದ್ದಂತೆ ಬಾಳಿಗೂ ಯೋಜನೆ ಇರಬೇಕು. ಲಭ್ಯವಿರುವ ಸಂಪನ್ಮೂಲಗಳನ್ನು ಕಣ್ಣೆದುರಿಗಿರಿಸಿಕೊಂಡು ಮುಂದಿನ ವರುಷದ ಅಥವಾ ಐದು ವರ್ಷಗಳ ಯೋಜನೆಯನ್ನು ರಾಷ್ಟ್ರವು ತಯಾರಿಸುವಂತೆ, ವ್ಯಕ್ತಿಯು ತನ್ನ ಹುಟ್ಟು ಹಬ್ಬದಂದು ತಾನು ಸಾಧಿಸಿದ ಬಗ್ಗೆ ಸಿಂಹಾವಲೋಕನ, ಸಾಧಿಸಬೇಕಾದ್ದರ ಪಕ್ಷಿನೋಟ ಮಾಡಿಕೊಂಡು, ಆ ಗುರಿಗೆ ತಕ್ಕ ಪ್ರಯತ್ನ ಮಾಡಬೇಕು. ಹೀಗೆ ಹುಟ್ಟು ಹಬ್ಬವು ಆತ್ಮ ನಿರೀಕ್ಷಣೆಯ ದಿನವಾಗಬೇಕೇ ವಿನಾ ಕೇವಲ ವೈಭವದ್ದಲ್ಲ.

ಈ ದೃಷ್ಟಿಯಿಂದ ನೋಡಿದಾಗ ಅನ್ನಿಸುತ್ತದೆ, ನಮ್ಮ ಜೀವನವನ್ನು ಒಮ್ಮೆ ಪರಮಾತ್ಮನ ಅಡಿಯಲ್ಲಿ ಸಮರ್ಪಣೆ ಮಾಡಿದರೆ, ನಮ್ಮ ಬಾಳನೌಕೆಯನ್ನು ಮುನ್ನಡೆಸುವ ಅಂಬಿಗನೇ ತಾನಾಗಿ ಅವನು ನಮ್ಮ ಬಾಳ ಸಂಪನ್ಮೂಲವಾದ ಪ್ರತಿಭೆ-ಪ್ರೌಢಿಮೆಗಳನ್ನು ಬಳಸಿಕೊಂಡು ಉದಾತ್ತ ಗುರಿ ಎಡೆಗೆ ಸಾಗಲು ನಮ್ಮನ್ನು ಅಣಿಗೊಳಿಸುವನು ಎಂದು. ವ್ಯಕ್ತಿಗತ ಹಿತದ ಬಗ್ಗೆ ಎಳ್ಳಷ್ಟೂ ಚಿಂತನೆ ಮಾಡದೆ ಸದಾಕಾಲ ಸಮಾಜ, ಸಂಘಟನೆ, ಸೇವೆ, ರಾಷ್ಟ್ರಹಿತ ಇತ್ಯಾದಿ ಸಮಷ್ಟಿ ಕಲ್ಯಾಣದ ಬಗ್ಗೆ ಹಗಲಿರುಳು ದುಡಿದರೂ ಟೀಕೆ-ಟಿಪ್ಪಣಿ, ಕುಹಕ-ಕುತ್ಸಿತ, ಎಡರು-ತೊಡರು ಎರಗುವಾಗ ಮನಸ್ಸು ಮುದುಡಿ, "ಪ್ರವಾಹ ಪತಿತರಾಗಿ ಸಾಗುವವರಿಗೆ ಯಾವ ಕೋಟಲೆ ಇಲ್ಲ. ಸತ್ಯದ ಅನ್ವೇಷಕರಿಗೆ ಎಡರು ಬಹಳ. ಏಕೆ ಬೇಕು ಸಮಾಜ ಸೇವೆಯ ಈ ಉಸಾಬರಿ?" ಎಂದು ನೊಂದುಕೊಂಡರೆ, ತಕ್ಷಣವೇನೊಂದೆ ಮನದ ಕಾರ್ಮೋಡದ ಹಿಂದೆ ಇಣುಕುವ ವಿವೇಕ ಅರ್ಥಾತ್ ಅಂತರಾತ್ಮದ ಕಿರಣವು ಹೇಳುವುದು: "ಬಾಳೆಂದರೆ ಓಟದ ಸ್ಪರ್ಧೆ. ಅದೂ ವಿಘ್ನಗಳೆಂಬ ಅಡೆತಡೆ (Hurdles) ಗಳಿಂದ ಕೂಡಿದ್ದು. ದಾರಿಯಲ್ಲಿ ತಡೆಗಳು ಎಷ್ಟು ಬಂದವೆಂಬುದು ಮುಖ್ಯವಲ್ಲ; ಎಷ್ಟನ್ನು ದಾಟಿ ಓಡುವ ಕಣದಲ್ಲಿ ಮುಂದಿದ್ದೇವೆಂಬುದು ಮುಖ್ಯವಲ್ಲವೆ?" ಎಂದು ಸಾಂತ್ವನಿಸುವುದು.

ಸಮಾಜ ಸೇವೆ-ಸಮಷ್ಟಿ ಉದ್ಧಾರ ಎಂಬೀ ಆದರ್ಶಗಳನ್ನು ತಲೆಯಲ್ಲಿ ಹಾಕಿಕೊಂಡ ಸ್ವಾಮಿಯೇ ಇರಲಿ, ರಾಜಕೀಯ ವ್ಯಕ್ತಿಯೇ ಇರಲಿ; ವೈದ್ಯನೇ ಆಗಲಿ

ಸ್ವಯಂ ಸೇವಕನೇ ಆಗಲಿ ಸಮಾಜದ ಪುರಸ್ಕಾರ ಬಯಸಿ ಕಾರ್ಯ ಮಾಡಲುದ್ಯುಕ್ತಿಸಿದರೆ ಒಂದು ಹೆಜ್ಜೆಯೂ ಮುಂದಿಡಲಾರ. ತನ್ನ ಆತ್ಮಸಾಕ್ಷಿಯ ಆನಂದಕ್ಕಾಗಿ ಮಾಡಬೇಕು. ತಾನೊಂದು ಉತ್ತಮ ಕಾರ್ಯ ಮಾಡಿದಾಗ ಬರುವ ಸಂತೃಪ್ತಿ ಯಾವ ಅಕ್ಯಾಡಮಿ ಅವಾರ್ಡ್‌ಗಳು ಸಿಕ್ಕಿದಾಗಲೂ ದೊರೆಯದ ಸಂತೃಪ್ತಿ. ಒಂದು ಊರಲ್ಲಿ ವೈಭವಯುತವಾಗಿ ಪ್ರವಚನ ನಡೆದು ಸಹಸ್ರಾರು ರೂಪಾಯಿಗಳ ಕಾಣಿಕೆ ಬಂದಿತು, ನಮ್ಮ ಸಂಸ್ಥೆಗೆ. ಆಗ ಒಂದು ದಿನ ಅಲ್ಲಿಯ ವಿದ್ಯಾವಂತೆಯೋರ್ವಳು ಬಂದು, 'ನನಗೆ ಜೀವನದಲ್ಲಿ ತುಂಬಾ ಜಿಗುಪ್ಸೆ ಬಂದಿತ್ತು. ವೈವಾಹಿಕ ಬದುಕಿನ ಕನಸು ಕುಸಿದಾಗ ಆತ್ಮಹತ್ಯೆಗೆ ಆಲೋಚಿಸಿದ್ದೆ. ನನ್ನ ಎರಡು ಮಕ್ಕಳನ್ನೂ ಏನಾದರೂ ಮಾಡಿ ನಾನು ಇಹಲೋಕ ಯಾತ್ರೆಯನ್ನು ಮುಗಿಸಲಿಚ್ಛಿಸಿದ್ದೆ. ಆದರೆ ಅಕಸ್ಮಾತ್ ನಿಮ್ಮ ಪ್ರವಚನ ಕೇಳುವ ಸುಯೋಗ ಒದಗಿ, ನನ್ನ ಬಾಳ ಕಾರ್ಮೋಡ ಸರಿದು, ಜೀವನದಲ್ಲಿ ಧೈರ್ಯ ತಳೆದು, ಎಂಥಾ ಪ್ರಸಂಗದಲ್ಲೂ ಎದೆಗೆಡದೆ ಮುನ್ನಡೆಯುವ ವಿಶ್ವಾಸ ತಾಳಿರುವೆ." ಎಂದಳು. ಅತ್ತ ಸಹಸ್ರಾರು ರೂಪಾಯಿಗಳ ಕಾಣಿಕೆ ಪಡೆದ ಆನಂದ, ಅಪೂರ್ವ ಕೀರ್ತಿ ಪಡೆದ ಹೆಮ್ಮೆ, ಎಲ್ಲವನ್ನೂ ಮೀರಿಸಿದ ಸಂತೃಪ್ತಿ ತಂದುಕೊಟ್ಟಿತು ಈ ಒಂದು ಮಾತು. "ಜೀವನ ಕ್ಷಣಿಕ. ಅದೊಂದು ಸುಗಂಧ ಮಿಶ್ರಿತ ಮಂದ ಮಾರುತವಾಗಿ ಸುಳಿದು ಹಲವು ಜೀವಗಳಿಗೆ ಸಂತಸಕೊಟ್ಟರೆ ಅಷ್ಟೇ ಸಾಕು. ಇದಕ್ಕಿಂತ ಹಿರಿದಾದ ಸಂತೃಪ್ತಿ ಇನ್ನೇನುಬೇಕು! ತೃಷೆಯ ತಣಿಸದಿಹ ಭವ್ಯ ಸಾಗರಕ್ಕಿಂತ ತಣಿಪೀವ ಕಿರುತೊರೆಯೆ ಬಹಳ ಲೇಸಲ್ಲವೆ?" ಎಂದೆಂಬ ಸಂತೃಪ್ತಭಾವ ಮೂಡಿತು.

ಕೆಲವೊಮ್ಮೆ ಕೆಲವರು ಹೇಳುವರು : "ಮನುಷ್ಯ ತುಂಬಾ ಕೃತಘ್ನ ಪ್ರಾಣಿ. ಉಂಡ ಮನೆಯ ಜಂತೆ ಎಣಿಸುವ ದ್ರೋಹಿ, ಉಪಕಾರ ಪಡೆದುಕೊಂಡು ನಂತರ ತಿರುಗಿ ಬೀಳುವ ವಂಚಕ. ಆದ್ದರಿಂದ ಯಾರಿಗೂ ಉಪಕಾರ ಮಾಡುವ ಗೋಜಿಗೇ ಹೋಗಬಾರದು. ಗೊತ್ತಿದ್ದೂ ಮತ್ತೇಕೆ ನೊಂದವರಿಗೆ, ಅನಾಥರಿಗೆ ನೀವು ಆಶ್ರಯ ಕೊಡಬೇಕು?" ಈ ನಿರಾಶೆ ಸಲ್ಲದು ಎಂದು ನನ್ನಭಿಪ್ರಾಯ. ನಾವು ಮಾಡುವ ಉಪಕಾರ ನಿಷ್ಕಾಮ ಕರ್ಮವೆಂಬ ಭಾವದಿಂದ ನಾವು ಮಾಡಿಬಿಡಬೇಕು. ಪಡೆದವರು ದ್ರೋಹ ಬಗೆದರೆ ಅವರು ಪರಮಾತ್ಮನ ಅವಕೃಪೆಗೆ, ಆಗ್ರಹಕ್ಕೆ ತುತ್ತಾಗುವರೇ ವಿನಾ ಮಾಡಿದವನು ಏನೂ ಆಗನು. ಶ್ರೀ ರವೀಂದ್ರನಾಥ ಟಾಗೋರರು ಹೇಳುವರು, "ಪ್ರತಿಯೊಂದು ಮಗುವು ಹುಟ್ಟಿದಾಗಲೂ ದೇವರು ಈ ಜಗತ್ತಿನ ದುಷ್ಟತನದ ಬಗ್ಗೆ ಇನ್ನೂ ನಿರಾಶೆಗೊಂಡಿಲ್ಲ ಎಂಬ ಆಶಾಭಾವ ನಮ್ಮಲ್ಲಿ ಮೂಡುತ್ತದೆ. "ರೈತನು ಬಿತ್ತಿದ ಕಾಳುಗಳು, ಬೆಳೆದ ತೆನೆಗಳೆಲ್ಲ ಪೂರ್ಣಗೊಳ್ಳದೇ ಮಧ್ಯದಲ್ಲೇ ಹುಸಿಯಾಗಬಹುದು. ಅಂದ ಮಾತ್ರಕ್ಕೆ ಕೃಷಿ ಕಾಯಕಕ್ಕೇ ತಿಲಾಂಜಲಿ ಕೊಡಬೇಕೇನು? ನಾವು ಉಪಕಾರ ಮಾಡಿದ ನೂರರಲ್ಲಿ 90 ಜನ ದ್ರೋಹ ಬಗೆದರೂ, ಉಳಿದ ಹತ್ತು ಜನರನ್ನು ಗಮನದಲ್ಲಿರಿಸಿಕೊಂಡು ಸಾಧನೆ ಮುಂದುವರಿಸಬೇಕು. ಯಾರನ್ನು ತನ್ನ ಜೀವಕ್ಕಿಂತ ಮಿಗಿ

ಲಾಗಿ ಏಸುಕ್ರಿಸ್ತನು ಭಾವಿಸಿದ್ದನೋ ಅಂಥ ಶಿಷ್ಯನು 30 ಬೆಳ್ಳಿನಾಣ್ಯಗಳ ಆಸೆಗಾಗಿ ಗುರುದ್ರೋಹ ಮಾಡಿದ. ನಿಜ, ಪರಿಣಾಮವಾಗಿ ಏಸುವು ಶಿಲುಬೆಗೂ ಏರಿಸಲ್ಪಟ್ಟ. ಆದರೆ ಶಾಶ್ವತವಾಗಿ ಉಳಿದುದೇನು? ಸುವರ್ಣಾಕ್ಷರಗಳಲ್ಲಿ ಏಸುವಿನ ಹೆಸರು: ಅಳಿಯಲಾರದ ಕಪ್ಪು ಅಕ್ಷರಗಳಲ್ಲಿ ಗುರುದ್ರೋಹಿ ಜೂಡಾಸ್‌ನ ಹೆಸರು.

ಆದ್ದರಿಂದ ಮಾನವನ ಜೀವಿತಾರ್ಥದ ಉದ್ದೇಶ ಕಾಯಕ ಮತ್ತು ಸೇವೆ (ದಾಸೋಹ) ಎರಡೇ. ಅದರಲ್ಲೇ ಬಾಳ ಸಾಫಲ್ಯ. ತಾನು ಕೈಕೊಂಡ ಕಾಯಕವನ್ನು ನಿಷ್ಠೆಯಿಂದ ಪೂರೈಸುವುದು; ದೇಹವನ್ನು ಪರೋಪಕಾರಕ್ಕೆ, ಮನವನ್ನು ಪರಮಾತ್ಮ ಧ್ಯಾನಕ್ಕೆ, ಧನವನ್ನು ಲೋಕ ಹಿತಕ್ಕೆ, ಮಾತನ್ನು ಜ್ಞಾನದಾನಕ್ಕೆ ಮೀಸಲಿರಿಸಿದರೆ ಬಾಳ ಕಣಕಣವೂ ಸಾರ್ಥಕಕ್ಕೆ, ಭವ್ಯತ್ವ-ದಿವ್ಯತ್ವ ಸಾಧನೆಗೆ ಸಹಾಯಕವಾಗುವುದು.

ಸಂಸಾರಿಯ ಜೀವನವಾಗಲಿ, ಸನ್ಯಾಸಿಯ ಜೀವನವಾಗಲಿ ಅನೇಕ ಬಗೆಯ ಸಂಕಷ್ಟಗಳಿಂದ ತುಂಬಿದುದು. ಮೂರು ಪ್ರಕಾರವಾಗಿ ಅವು ಬರುವವು : ಅಧಿಭೌತಿಕ, ಅಧಿದೈವಿಕ ಮತ್ತು ಅಧ್ಯಾತ್ಮಿಕ ಎಂದು. ನಿಸರ್ಗದಲ್ಲಿ ಎರಗುವ ಮಿಂಚು, ಗುಡುಗು, ಸಿಡಿಲು, ಶೀತ–ಉಷ್ಣ, ಮಳೆ–ಗಾಳಿ ಮುಂತಾದವು ಅಧಿಭೌತಿಕ ವಿಘ್ನಗಳು. ಸಮಾಜದಲ್ಲಿ ಎದುರಾಗುವ ನಿಂದೆ, ಕುಹಕ, ಕುತ್ಸಿತ ಮುಂತಾದವು ಅಧಿದೈವಿಕ ವಿಘ್ನ. ತನ್ನಂತರಂಗದಲ್ಲೇ ಏಳುವ ನಿರಾಶೆ, ಕ್ಲೈಬ್ಯ, ನಿರುತ್ಸಾಹ, ಸ್ವಾರ್ಥ, ವಂಚನೆಗಳು ಅಧ್ಯಾತ್ಮಿಕ ವಿಘ್ನ. ಇವು ಒಂದಕ್ಕಿಂತ ಒಂದು ಸೂಕ್ಷ್ಮ ಮತ್ತು ಕಷ್ಟಕರ. ಅಹೋರಾತ್ರಿ ಕಾಡಿನಲ್ಲಿದ್ದು ಕಂದಮೂಲಗಳನ್ನು ಸೇವಿಸಿ, ಒಪ್ಪತ್ತು ಉಂಡು, ಗುಡುಗು ಸಿಡಿಲಿಗೆ ಹೆದರದವನು ಸಮಾಜದ ಟೀಕೆಗೆ ಹೆದರಿ ತಾನು ಹಿಡಿದ ಪಥದಿಂದ ಹಿಮ್ಮೆಟ್ಟಬಹುದು. ಇದಕ್ಕೂ ಹೆದರದ ಧೀರ ತನ್ನಂತರಂಗದಲ್ಲೇ ಉದಿಸುವ ಕಾಮ-ಮೋಹ, ಸ್ವಾರ್ಥ-ಮತ್ಸರ ಇತ್ಯಾದಿಗಳಿಗೆ ಬಲಿಯಾಗಬಹುದು.

ಈ ಎಲ್ಲವುಗಳಿಂದ ಕೂಡಿದ, ಸುಖ-ದುಃಖಗಳ ಅಲೆಗಳಿಂದ ಭೋರ್ಗರೆವ ಸಮುದ್ರ ಈ ಜಗತ್ತು. "ಅಲೆಗಳೆಲ್ಲ ಅಡಗುವ ತನಕ ನಾನು ಸ್ನಾನ ಮಾಡೆನು" ಎನ್ನುತ್ತ ಕಾದು ಕುಳಿತುಕೊಳ್ಳುವುದು ಹಾಸ್ಯಾಸ್ಪದ. ಜಗತ್ತಿರುವವರೆಗೂ ಸಮುದ್ರ, ಸಮುದ್ರ ಇರುವವರೆಗೆ ಅಲೆಗಳು. ಏರಿಳಿಯುವ ಅಲೆಗಳ ಮಧ್ಯೆಯೇ ಸ್ನಾನ. ಬರುವ ಕಷ್ಟಗಳು ಬಂದುಹೋಗಲಿ; ಕರ್ತನ ಒಲಿಮೆಯೊಂದನ್ನು ಬೆನ್ನಾಸರೆಯಾಗಿಟ್ಟುಕೊಂಡು ಮುಂಬರಿಯಬೇಕು. ನಲಿವಿನಂತೆ ನೋವೂ ಹಿತಕಾರಿ ; ಹಗಲಿನಂತೆ ರಾತ್ರಿಯೂ ಅವಶ್ಯ. ಸಮಚಿತ್ತದಿಂದ ಸ್ವೀಕರಿಸುವುದೇ ಪ್ರಸಾದಿಯ ಸ್ಥಿತಪ್ರಜ್ಞತ್ವ. ಕಷ್ಟಗಳು, ನಿಂದೆಗಳು, ಎಡರುಗಳು ರಸ್ತೆಯಲ್ಲಿ ಹಾಕುವ ತಡೆಗಳಂತೆ, ವೇಗವನ್ನು ಪ್ರಯಾಣಿಕ ಕಡಿಮೆ ಮಾಡಿಕೊಳ್ಳಲೋಸುಗ ಹಾಕಿದವು. ಜೀವನ ಪಥದಲ್ಲಿ ನಾವು ಕ್ರಮಿಸುವಾಗ ಪರಮಾತ್ಮನೂ ಇಂಥ ಕೆಲವು ತಡೆ ಹಾಕಿಸುವ. ಅದೂ ನಮ್ಮೊಳಿತಿಗೇ! ಕೀರ್ತಿವಾರ್ತೆಯ ಹಮ್ಮಿನಿಂದ ಬೀಗಿ ಬಾಳಗಾಡಿಯನ್ನು ಉನ್ಮತ್ತವಾಗಿ ಓಡಿಸಬಾರದೆಂಬುದಕ್ಕೆ ದೇವರ

ಅನುಶಾಸನ. ರಾತ್ರಿಯನ್ನಿಟ್ಟು ಹಗಲಿನ ಕಳೆ ಹೆಚ್ಚಿಸುವ ದೇವರ ಹಂಚಿಕೆ ಬಹು ರಮ್ಯ. ಹಾಗೆಯೇ ಕೆಲವು ಖಳನಾಯಕರನ್ನು ಸೃಷ್ಟಿಸಿ ಸಂತರ ಬಾಳಿನ ಸತ್ವವನ್ನು ದೃಢಪಡಿಸುವ ಪರಮಾತ್ಮನೆಂಬ ದಿಗ್ದರ್ಶಕನ ದೂರಾಲೋಚನೆ ಅಗಾಧ! ಆಗಲೇ ಮಹಂತರ ಬದುಕು ವೀರಗಾಥೆ. ಇಲ್ಲವಾದರದು ಮುರುಕು ಬಂಡಿ.

ನಿಂದಿಸುವ, ಬೆದರಿಸುವ, ಕೆಲವೊಮ್ಮೆ ಹೊಗಳಿ ಸಾಧಿಸಬರುವ– ಎಲ್ಲರಿಂದಲೂ ನಿರ್ಲಿಪ್ತವಾಗಿ ಸಾಧಕರ, ಸ್ವಾಮಿಗಳ ಬಾಳು ಸಾಗಬೇಕು. ಅವರು ನಿರ್ಲಿಪ್ತರಾಗಿಯೇ ಕಾರ್ಯಮಾಡುವಾಗ ಅಂಥವರನ್ನು "ಹೇಡಿಗಳೆಂದು", ಉತ್ತರಕೊಡಲಾಗದ ತಪ್ಪಿತಸ್ಥರೆಂದು ಕೆರಳಿಸಿ ಪ್ರತೀಕಾರಕ್ಕೆ ಪ್ರಚೋದಿಸುವ "ಹಿತೈಷಿ"ಗಳೂ ಇಲ್ಲದಿಲ್ಲ. ಮಾಡಬೇಕಾದ ವಿಧಾಯಕ ಕಾರ್ಯಗಳು, ಗುರಿಗಳು ಸಾವಿರವಿದ್ದಾಗ, ಕತ್ತಲಾಗುವ ಮುನ್ನ ಊರು ಸೇರಬೇಕಾಗಿರುವಾಗ ಆ ಗುರಿಯಿಂದ ಮನಸ್ಸನ್ನು ವಿಮುಖಗೊಳಿಸಿ, ರಸ್ತೆಯ ಬದಿಯಲ್ಲಿ ಕುಂಯಿಗುಡುವ ನಾಯಿಯನ್ನು ಅಣಕಿಸುತ್ತ ಕಾಲವ್ಯಯ ಮಾಡುವುದು ವಿವೇಕಿಗಳ ವಿಚಾರವಲ್ಲ. ಒಂದೆಡೆ ಅಕ್ಕಮಹಾದೇವಿ ಹೇಳುವಳು ;


ಹಂದಿಯೂ ಮದಕರಿಯು ಒಂದೇ ದಾರಿಯಲ್ಲಿ ಸಂಧಿಸಿದಡೆ
ಹಂದಿಗಂಜಿ ಮದಕರಿ ಕೆಲಕ್ಕೆ ಸಾರಿದಡೆ
ಆ ಹಂದಿಯದು ಕೇಸರಿಯಪ್ಪುದೆ, ಚನ್ನಮಲ್ಲಿಕಾರ್ಜುನಾ ? (ಅ.ವ. ೧೬೦)

ಯಾವುದೋ ಕೊಳಚೆಯಲ್ಲಿ ಹೊರಳಾಡಿ, ವಿಪರೀತ ಹೊಲಸಾಗಿ ಬರುತ್ತಿರುವ ಹಂದಿಯನ್ನು ಕಂಡು ಅಸಹ್ಯಪಟ್ಟು, ದಾರಿಕೊಟ್ಟು ಮದಕರಿಯು ಪಕ್ಕಕ್ಕೆ ಸರಿಯಿತು, 'ಎಲ್ಲಾದರೂ ತಾಗಿ ಮೈಯನ್ನು ಹೊಲಸು ಮಾಡೀತೆಂದು ?' ಆದರೆ ಮೂಢ ಹಂದಿ ಭಾವಿಸಿರಬಹುದು "ಆನೆಯೇ ನನಗೆ ಹೆದರಿ ಪಕ್ಕಕ್ಕೆ ಸರಿದಿದೆ. ಅಂದರೆ ನಾನು ಕೇಸರಿಯೆ ಇರಬೇಕು" ಎಂದು. ಅದರ ಮೂಢತನಕ್ಕೆ ಉದಾಸೀನದ ನಗುವನ್ನು ನಕ್ಕರೆ ಸಾಕು. ವಸ್ತು ಸ್ಥಿತಿಯನ್ನರಿತು, ಪರಾಮರ್ಶಿಸಿ ಎಲ್ಲರಿಗೂ ಎಲ್ಲದಕ್ಕೂ ತೀರ್ಪುಕೊಡುವ ನ್ಯಾಯಾಧೀಶ ಪರಮಾತ್ಮನೋರ್ವನುಂಟು. ಅವನ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಿದರೆ ಸಾಕು. ಸಲ್ಲಿಸಲೂ ಬೇಕಾಗಿಲ್ಲವೇನೋ ಎಂದು ನನ್ನ ಅಭಿಪ್ರಾಯ. ಅರ್ಜಿ ಸಲ್ಲಿಸಿದರೆ ಮಾತ್ರ ವಿಚಾರಣೆ ಕೈಗೆತ್ತಿಕೊಳ್ಳುವ ಸೀಮಿತ ಬುದ್ಧಿಯ ನ್ಯಾಯಾಧೀಶನವನಲ್ಲ. ಸಲ್ಲಿಸಲಿ ಸಲ್ಲಿಸದಿರಲಿ, ಕಾರು ಓಡಿದಂತೆ ರೆಕಾರ್ಡ್ ಆಗುವ ಮೀಟರಿನಂತೆ, ವಿದ್ಯುತ್ ಉರಿಸಿದರೆ ದಾಖಲೆ ಆಗುವ ವಿದ್ಯುನ್ಮಾಪಕ ಯಂತ್ರದಂತೆ ಆ ನ್ಯಾಯಾಧೀಶನ ಪರಿ. ಆದ್ದರಿಂದ ತೀರ್ಪುಕೊಡುವ ಕರ್ತವ್ಯ ಆ ಅಂಪೈರ್‌ಗೆ ಬಿಟ್ಟು ಬಾಳ ಮೈದಾನದಲ್ಲಿ ಗುರಿ ಎಡೆಗೆ ಓಡುವುದೊಂದೇ ಸಾಧಕನ ಮತ್ತು ಜೀವಾತ್ಮನ ಕೆಲಸ. ಬಪ್ಪ ಎಡರುತೊಡರಿಗೆ ಎದೆಗುಂದುವುದು ಸಾರ್ಥಕ ಜೀವಿಯ ಲಕ್ಷಣವಲ್ಲ. ಏಕೆಂದರೆ:

ಸಂಸಾರವೆಂಬ ಅಡವಿಯಲ್ಲಿ ಹುಲಿಯುಂಟು, ಕರಡಿಯುಂಟು.
ಶರಣನಂಜನಂಜ, ಮಹಾಧೀರ ಶರಣನಂಜನಂಜ !
ಕೂಡಲ ಸಂಗನ ಶರಣಂಗೆ ನಿರ್ಭಯ.

(ಬ.ಪ.ಹೆ.ವ ೧೦೮೮)

ಮಾತೆ ಮಹಾದೇವಿ.★



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು.

ಮಂತ್ರಪುರುಷ ಬಸವಣ್ಣ

ಬ ಎಂಬಲ್ಲಿ ಎನ್ನ ಭವ ಹರಿಯಿತ್ತು.
ಸ ಎಂಬಲ್ಲಿ ಸರ್ವಜ್ಞಾನಿಯಾದೆನು.
ವ ಎಂದು ವಚಿಸುವಡೆ ಚೈತನ್ಯಾತ್ಮಕನಾದೆನು.
ಇಂತೀ ಬಸವಾಕ್ಷರ ತ್ರಯವೆನ್ನ
ಸರ್ವಾಂಗದಲಿ ತೊಳಗಿ ಬೆಳಗಿದ ಭೇದವನರಿದು
ಆನೂ-ನೀನೂ ಬಸವಾ ಬಸವಾ ಬಸವಾ ಎನುತಿರ್ದೆವಯ್ಯಾ ಗುಹೇಶ್ವರ.

ಅ. ಪ್ರ. ವ. 856

ವಿರಕ್ತ ಪರಂಪರೆಯ ಆದ್ಯನಾಗಿ, ಶೂನ್ಯ ಸಿಂಹಾಸನವನ್ನಾರೋಹಿಸಿದ ಶಿವಯೋಗ ಸಾಮ್ರಾಟ ಅಲ್ಲಮ ಪ್ರಭುಗಳು ಮೇಲ್ಕಂಡ ವಚನದಲ್ಲಿ "ಬಸವ" ನಾಮವು ಮಂತ್ರವಾಗಿ ದೈವೀಕೃತಗೊಂಡುದನ್ನು ಹೃದಯ ತುಂಬಿ ಬಣ್ಣಿಸುತ್ತಾರೆ. ಪ್ರಣವದ ಮೂಲಾಕ್ಷರಗಳಾದ ಅ, ಉ, ಮ ಬಸವಾಕ್ಷರ ತ್ರಯಗಳ ಸಮಾನ ಪದಗಳು ಆದುದೇ ಅಲ್ಲದೆ, ಭವಹರಿಸುವ ತಾರಕ ಮಂತ್ರವಾಯಿತು ಬಸವನಾಮ. ಬಸವ ಮಂತ್ರವನ್ನು ಸ್ಮರಿಸುವುದರಿಂದ ಭವಹರಿದರೆ, ಆ ತತ್ವವನ್ನು ಚಿಂತಿಸುವುದರಿಂದ ವೈಚಾರಿಕ ನಿಲುವು, ಸರ್ವಜ್ಞಾನತ್ವ ಬರುವುದು. ಬಸವ ಪ್ರಭುವಿನ ವ್ಯಕ್ತಿತ್ವವನ್ನರಿತು ಬಸವಾಯತನಾದರೆ ಚೈತನ್ಯಾತ್ಮಕ ಶಿವಪ್ರಜ್ಞೆ (Divine awareness) ಬರುವುದು. ಹೀಗೆ ಬಸವಾಕ್ಷರ ತ್ರಯ ಅಳವಟ್ಟಾಗ ಸರ್ವಾಂಗ ಶುದ್ಧಿ ಸಮನಿಸುವುದಾದ ಕಾರಣ

'ಆನು ಬಸವಾ ಎನುತಿರ್ದೆ ಗುಹೇಶ್ವರಾ' ಎಂದು ಪ್ರಭುದೇವರು ನುಡಿದಿದ್ದರೆ ಅಚ್ಚರಿ ಏನಲ್ಲ.

ಆದರೆ 'ಆನೂ-ನೀನೂ ಬಸವಾ ಬಸವಾ ಎನುತಿರ್ದೆವು' ಎಂದು ಪರಮಾತ್ಮನನ್ನುದ್ದೇಶಿಸಿ ಪ್ರಭುದೇವರು ನುಡಿದಿರುವುದು ನೋಡಿದರೆ ವಿಲಕ್ಷಣ ಅಚ್ಚರಿಯು ನಮಗೆ ಆಗದಿರದೇ? ಬಸವಣ್ಣನು ಪರಮಾತ್ಮನನ್ನು ಕುರಿತು ಹಂಬಲಿಸಿದರೆ ವಿರೋಧಾಭಾಸವೆನಿಸದು ನಮಗೆ; ಗುಹೇಶ್ವರನೇ ಬಸವಣ್ಣನಿಗಾಗಿ ಹಂಬಲಿಸುವನೆಂಬುದು ಎಷ್ಟೊಂದು ಅಸಹಜ ಕಲ್ಪನೆ! ಆದರೆ ಇದನ್ನು ಹೇಳುವಲ್ಲಿ ಪ್ರಭುದೇವರ ಮಾತಿನ ಜಾಣ್ಮೆ ಆಳವಾಗಿದೆ. ಇದೇ ಭಾವವನ್ನು ಸಿದ್ಧರಾಮೇಶ್ವರರೂ ವ್ಯಕ್ತಪಡಿಸಿದ್ದಾರೆ ಹೀಗೆ:

ನಿಮ್ಮ ಶಕ್ತಿ ಆತನಲ್ಲಿಪ್ಪುದು ಕಂಡಯ್ಯಾ.
ಆತನ ಪ್ರಾಣ ನಿಮ್ಮಲ್ಲಿಪ್ಪುದು.
ನಿಮ್ಮ ತಮ್ಮ ಭೇದವನಾರು ಬಲ್ಲರು ಹೇಳಯ್ಯಾ.
ಕಪಿಲ ಸಿದ್ಧ ಮಲ್ಲಿನಾಥಯ್ಯ, ನಿಮ್ಮ ಶರಣ ಬಸವಣ್ಣನ
ಅನುವ ನೀವೇ ಬಲ್ಲಿರಿ!

ಪರಮಾತ್ಮನ ಶಕ್ತಿ (Grace) ಬಸವಣ್ಣನವರಲ್ಲಿದ್ದರೆ, ಬಸವಣ್ಣನವರ ಪ್ರಾಣ (life) ಪರಮಾತ್ಮನಲ್ಲಿ. ಪರಮಾತ್ಮನು ತನ್ನ ಕರುಣೆಯ ಕಂದನನ್ನೇ ಸ್ಮರಿಸಿಕೊಳ್ಳಲು ಏನು ಕಾರಣವಿರಬಹುದು?

ಭಾರತೀಯ ಧರ್ಮ ಪರಂಪರೆಯನ್ನು ಅವಲೋಕಿಸೋಣ. ವೇದಗಳಲ್ಲಿ ಪ್ರಕೃತಿ-ಪಂಚಭೂತಗಳ ಉಪಾಸನೆ, ಯಜ್ಞ-ಯಾಗಾದಿಗಳನ್ನು ಅಧಿಕವಾಗಿ ಕಾಣುತ್ತೇವೆ. ವೇದಗಳ ಕಿರೀಟವೆನಿಸಿದ ಉಪನಿಷತ್ತುಗಳಲ್ಲಿ ನಿರ್ಗುಣ ಬ್ರಹ್ಮನ ಸುಂದರ ಸ್ವರೂಪ ವರ್ಣನೆ ಇದ್ದರೂ, ಸಗುಣ ಬ್ರಹ್ಮನ ಉಪಾಸನೆಗೆ ಎಲ್ಲಿ ಅವಕಾಶ ನೀಡಲಾಯಿತು? ಪುರಾತನ ಧರ್ಮಗಳಾದ ಜೈನ-ಬೌದ್ಧ ಮತಗಳು ಸೇಶ್ವರ (Theism) ವಾದದ ಜಾಡನ್ನೇ ತ್ಯಜಿಸಿ ನಿರೀಶ್ವರ (atheistic) ವಾದದ ಪಥ ತುಳಿದವು. ಆದಿಶಂಕರಾಚಾರ್ಯರು 'ನಾನೇ ಬ್ರಹ್ಮ'ನೆಂಬ ಸಿದ್ಧಾಂತವನ್ನು ಮಂಡಿಸಿ ಪೂಜ್ಯ-ಪೂಜಕ ಭೇದ ನಿರಾಕರಣೆಯೊಡನೆ ಅವರ ಸಿದ್ಧಾಂತದ ಚೌಕಟ್ಟಿನ ಪ್ರಕಾರ ಉಪಾಸನೆ (worship)ಗೆ ಇಂಬುಗೊಡಲಿಲ್ಲ (ಆಚರಣೆಯಲ್ಲಿ ಉಪಾಸನೆ ಇದೆ). ಭಾರತದ ಸುಪ್ರಸಿದ್ಧ ಯೋಗಾಚಾರ್ಯ ಪತಂಜಲಿಯು ಸಾಂಖ್ಯ ಸಿದ್ಧಾಂತದ ಮೇಲೆ ರೂಪುಗೊಳಿಸಿದ ಅಷ್ಟಾಂಗ ಯೋಗವನ್ನು ನಿರೀಶ್ವರ ಯೋಗವನ್ನಾಗಿ ಮಾಡಿ, ಕಾಲಾನಂತರದಲ್ಲಿ ಈಶ್ವರ ಪ್ರಣಿಧಾನ ಎಂಬ ದೈವೀ ಶರಣಾಗತಿ ಸೇರಿಸಿದರೂ, ಆ ದೇವರು ಆಮಂತ್ರಣವಿಲ್ಲದ ಅತಿಥಿಯಾಗಿ (Uninvited guest) ಉಳಿದನು.

ಈ ಎಲ್ಲ ಸೈದ್ಧಾಂತಿಕ ದೃಷ್ಟಿಕೋನಗಳಿಂದ ವಿಚಾರಿಸಿದಾಗ ಸೇಶ್ವರವಾದಿ ವಿಚಾರವನ್ನೇ ತಮ್ಮ ಕ್ರಾಂತಿಯ ಅಡಿಗಲ್ಲನ್ನಾಗಿ ಬಳಸಿ, ದೇವರನ್ನು ಜೀವನ, ಸಿದ್ಧಾಂತ, ದೃಷ್ಟಿಕೋನ ಎಲ್ಲದರಲ್ಲೂ ಹಾಸುಹೊಕ್ಕಾಗಿ ಮಾಡಿ, ದೇವನಿಗೆ ಪರಮೋಚ್ಚ ಸ್ಥಾನವನ್ನು ಕೊಟ್ಟ ಪ್ರವಾದಿ ಬಸವಣ್ಣ.

ಎರಡನೆಯದಾಗಿ ದೇವರ ಪೂಜಾ ವಿಧಾನಕ್ಕಾಗಿ ಹೊಸತೊಂದು ರೂಪು ಕಲ್ಪಿಸಿದನು. ಇಂದಿನ ಉಪಾಸನಾ ವಸ್ತುಗಳಲ್ಲಿ ಪ್ರಮುಖವಾಗಿರುವ ದೇವತಾ ಪೂಜೆ, ಪಂಚಭೂತ ಪೂಜೆ, ಪ್ರಾಣಿ ಪೂಜೆ, ವಿಭೂತಿ ಪೂಜೆ—ಈ ಯಾವೂ ಅಲ್ಲದ ನಿರಾಕಾರ ಬ್ರಹ್ಮನ ಸಾಕಾರ ಶರೀರ ಬ್ರಹ್ಮಾಂಡದ ಗೋಲಾಕಾರದಲ್ಲಿ ಪೂಜಿಸುವ ಕಲ್ಪನೆ ಕೊಟ್ಟವನು ಬಸವಣ್ಣ.

ಮೂರನೆಯದಾಗಿ ದೇವರನ್ನು ಮನದಿಂದ ಧ್ಯಾನಿಸಿದರೆ ಸಾಲದು, ಮಾತಿನಿಂದ ಸ್ತುತಿಸಿದರಷ್ಟೇ ಅಲ್ಲ, ಕಾಯದಿಂದ ಅರ್ಚನೆಯನ್ನೂ ಮಾಡಬೇಕೆಂದು ಸಾರಿ ಹೇಳಿ ಪೂಜೆಗೆ ಅನುಕೂಲವಾಗುವಂತೆ ಗೋಲಾಕಾರದ ಸಾಕಾರ ನೀಡಿದ ಮಹಾದಾತ. ಈ ಎಲ್ಲ ಸೌಲಭ್ಯಗಳನ್ನು ಭಕ್ತನಿಗೆ, ಪ್ರಾಮುಖ್ಯವನ್ನು ದೇವನಿಗೆ ಕೊಟ್ಟಿರುವ ಕಾರಣ ಗುಹೇಶ್ವರನು 'ಬಸವಾ' ಎಂದು ಜಪಿಸಿದರೆ ಉತ್ಪ್ರೇಕ್ಷೆ ಏನುಂಟು!?

ಹೀಗೆ ಪರಮಾತ್ಮನಿಗೆ ಅತ್ಯಂತ ಪ್ರೀತಿ ಪಾತ್ರನು, ತನ್ನ ಅನುಯಾಯಿಗಳಿಗೆ ಮಂತ್ರ ಪುರುಷನೂ ಆದ ಮಹಂತ ಬಸವಣ್ಣ.

ಬಸವ ಮಂಟಪದಲ್ಲಿ

ಮಹಾಶಿವರಾತ್ರಿ ಮತ್ತು ಮಾತಾಜಿಯವರ ಜಯಂತಿ ದಿನಾಚರಣೆ

★ ಮಾರ್ಚ ದಿ. 7 ರಂದು ಬರಲಿರುವ ಮಹಾಶಿವರಾತ್ರಿಯಂದು ಸರ್ವ ಶರಣರ ದಿನಾಚರಣೆಯನ್ನು ಬೆಂಗಳೂರು ಬಸವ ಮಂಟಪದಲ್ಲಿ ಆಚರಿಸಲಾಗುತ್ತದೆ. ಬೆಳಿಗ್ಗೆ ೯ ಗಂಟೆಯಿಂದ ೧೦-೩೦ ವರೆಗೆ ಸಾಮೂಹಿಕ ಪೂಜೆ, ತೀರ್ಥ-ಪ್ರಸಾದ ವಿತರಣೆಯ ಕಾರ್ಯಕ್ರಮವಿದೆ. ರಾತ್ರಿ ೯ ರಿಂದ ಜಾಗರಣೆ ಪ್ರಾರಂಭ. ಇಡೀ ರಾತ್ರಿ ಭಜನೆ, ಜಪ, ಪ್ರವಚನ ಮುಂತಾದ ಧಾರ್ಮಿಕ ಕಾರ್ಯಕ್ರಮಗಳಿವೆ. ಎಲ್ಲ ಜಾತಿ ಮತ ಪಂಥಗಳವರಿಗೆ ಅವಕಾಶ ಉಂಟು.

★ ಮಾರ್ಚ ೧೩ ರಂದು ಪರಮಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ 33 ನೆಯ ಜನ್ಮ ದಿನೋತ್ಸವವಿದೆ. ಬೆಳಿಗ್ಗೆ ೯ ಗಂಟೆಗೆ ಗುರುಪಾದ ಪೂಜಾ ಕಾರ್ಯಕ್ರಮ ಮತ್ತು ಸಂಜೆಗೆ ಸಾರ್ವಜನಿಕ ಸಭೆ ಇದೆ. ಸರ್ವರಿಗೆ ಸುಸ್ವಾಗತ.

ಸಮಸ್ಯೆ? ಸಮಾಧಾನ!

—ಮಹೇಂದ್ರಕುಮಾರ, ಶಿವಮೊಗ್ಗ.

✻ ಕೆಲವು ಧಾರ್ಮಿಕ ಜನ ಎಲ್ಲ ಗುರುಗಳನ್ನು ಗೌರವಿಸುವರು. ಇನ್ನು ಕೆಲವರು ತಮ್ಮ ಗುರುಗಳನ್ನಷ್ಟೇ ಗೌರವಿಸಿ, ಇತರರನ್ನು ದ್ವೇಷಿಸುವರು. ಹೀಗೇಕೆ ?

* ಅಧ್ಯಾತ್ಮ ಜೀವಿ ಗುರುಗಳ ಶಿಷ್ಯರಾದವರು ಎಲ್ಲರನ್ನೂ ಗೌರವಿಸುವರು, ಜಾತಿವಾದಿ ಗುರುಗಳ ಶಿಷ್ಯರು ತಮ್ಮ ಗುರುಗಳನ್ನಷ್ಟೇ ಗೌರವಿಸಿ ಇತರ ಗುರುಗಳನ್ನು ಅಗೌರವಿಸುವರು ಅಥವಾ ದ್ವೇಷಿಸುವರು. ಗುರುವಿನಂತೆ ಶಿಷ್ಯರು, ನೂಲಿನಂತೆ ಸೀರೆ !

— ರಾಜಣ್ಣ, ತಿಪಟೂರು.

✻ ಕೆಲವರು ಕಷ್ಟಪಟ್ಟು ಕಾಯಕ ಮಾಡದೆ, ಸಾರ್ವಜನಿಕ ಸಂಘ–ಸಂಸ್ಥೆಗಳಲ್ಲಿದ್ದು ಅನ್ಯರ ಸೊತ್ತನ್ನು ಸೇವೆಯ ನೆಪದಲ್ಲಿ ತಿನ್ನುವುದನ್ನೇ ಮಾಡುವರಲ್ಲಾ ?

* ನರರಕ್ತದ ರುಚಿಯನ್ನು ಒಮ್ಮೆ ಕಂಡ ಹುಲಿ ಪ್ರಾಣಿಗಳಲ್ಲಿ ಆಸಕ್ತಿ–ರುಚಿ ಕಳೆದುಕೊಳ್ಳುವದಂತೆ !

— ಗುರುರಾಜರಾವ್, ಬೆಂಗಳೂರು.

✻ ಭಾರತದ ರಾಜಕಾರಿಣಿಯ ವೈಶಿಷ್ಟ್ಯವೇನು ?

* ಮರಕೋತಿಯಾಟ.

— ನರೇಂದ್ರ, ಮಡಿಕೇರಿ.

✻ ಹೆಣ್ಣು ಅಬಲೆಯೋ, ಸಬಲೆಯೋ ? ಪ್ರಾಮಾಣಿಕವಾಗಿ ತಿಳಿಸಿ.

* ಹತ್ತಾರು ವರುಷ ಸಾಕಿ ಸಲುಹಿ ಪೋಷಿಸಿದ ತಾಯಿ ತಂದೆಯರನ್ನು ಸಹ ಮರೆಸಿ, ಕೆಲವೊಮ್ಮೆ ಉಪ್ಪುಂಡ ಮನೆಯ ಜಂತೆಯನ್ನೂ ಎಣಿಸುವಂತೆ ಮಾಡಿ, ತನ್ನ ಆಳವಿಗೆ ತಕ್ಕಂತೆ, ಅವನ ವಿವೇಕಕ್ಕೇ ವಿರುದ್ಧವಾಗಿ ಗಂಡನನ್ನು ಕುಣಿಸುವ ಹೆಣ್ಣು ಸಬಲೆಯೋ ಇರಬಹುದೇ ? !

— ಶಾರದಾ ಪಾಟೀಲ್, ಹುಬ್ಬಳ್ಳಿ.

✻ ರಾಜಕಾರಿಣಿ ಎಂದರೆ ಯಾರು ?

* ಅತ್ಯಂತ ಸಿಹಿಸಿಹಿ ಮಾತನಾಡಿ, ಸತ್ಯದ ತಲೆಯ ಮೇಲೇ ಹೊಡೆದಂತೆ ಸುಳ್ಳನ್ನು ಆಡಿ ನಂಬಿಸುವವನೇ ನಿಜ(!) ರಾಜಕಾರಿಣಿ.

— ಅಂಬುಜಾಕ್ಷಮ್ಮ, ಶಿವಮೊಗ್ಗ.

✻ ಸ್ತ್ರೀಯು ಗುರುವಾಗಬಲ್ಲಳೇ ? ಅದಕ್ಕೆ ಶಾಸ್ತ್ರಗಳ ಆಧಾರವಿದೆಯೆ ?

* ಮಾಲೆಗಾರನ ಕೇಳಿ ನನೆ ಅರಳುವುದೇ ? ನನೆ ಅರಳಿದಾಗ ಮಾಲೆಗಾರನು ಅದನ್ನು ಆರಿಸಿ, ಪೋಣಿಸಿ ಕೊಳ್ಳಬೇಕು. ಹಾಗೆಯೇ, ಶಾಸ್ತ್ರಗಳ ಆಧಾರದ ಮೇಲೆ ಅನುಭಾವಿಗಳಾಗರು. ಅನುಭಾವಿಗಳನ್ನು ಕಂಡು ಶಾಸ್ತ್ರಗಳನ್ನು ನಿರ್ಮಿಸಬೇಕು.

— ಮುರಿಗಪ್ಪಜ್ಜ ಜನ್ನಾಪುರ, ಭದ್ರಾವತಿ.

✻ ಜನ್ಮದಿಂದ ಜಂಗಮರಲ್ಲದವರು ಗುರುವಾಗಲು ಸಾಧ್ಯವಿಲ್ಲ ಎಂದು ಇಲ್ಲೊಬ್ಬರ ವಾದ. ನಿಮ್ಮ ಅಭಿಪ್ರಾಯ ?

* ಗುರುತ್ವವು ಬರುವುದು ಜನ್ಮ–ಜಾತಿಗಳಿಂದಲ್ಲ, ಅರಿವು–ಅನುಭಾವಗಳಿಂದ. ತಾನೇ ಉರಿಯದ ದೀಪ ಇನ್ನೊಂದು ದೀಪವನ್ನು ಹಚ್ಚೀತೆ ? ಅರಿವುಳ್ಳವ ಗುರು, ಅನುಭಾವಿಯೇ ಜಂಗಮ !

— ಶಾಂತಕುಮಾರ್, ಶಿವಮೊಗ್ಗ.

✻ ಪ್ರಸ್ತುತ ರಾಜಕೀಯ ವಿಪ್ಲವದಲ್ಲಿ ವಿದ್ಯಾರ್ಥಿಗಳ ಕರ್ತವ್ಯವೇನು ?

* ರಾಜಕೀಯದಿಂದ ದೂರವಿದ್ದು ತಮ್ಮ ತಮ್ಮ ಕರ್ತವ್ಯಗಳಲ್ಲಿ ತಲ್ಲೀನವಾಗುವುದು. "ಅವರು ನಮ್ಮ ಹಿತ ಚಿಂತಕರು, ಇವರು ನಮ್ಮ ಹಿತಚಿಂತಕರು" ಎಂದು ನಂಬಿ ಕೈಚಾಚಿ, ಆಶ್ವಾಸನೆಗಳನ್ನೇ ಬಂಡವಾಳವನ್ನಾಗಿ ಮಾಡಿ ಬದುಕುವವರನ್ನೇ ಭರವಸೆಯ ಕಣ್ಣುಗಳಿಂದ ನೋಡುತ್ತಾ ಕಾಲಕಳೆಯದೆ ತಮ್ಮ ತಮ್ಮ ಉದ್ಧಾರ ತಮ್ಮದೇ ಹೊಣೆ ಎಂಬುದನ್ನು ಅರಿಯುವುದು.

— ಹರನಾಥ ಕೋಠಿ, ಭದ್ರಾವತಿ.

✻ ಸನ್ಯಾಸಿ ಮತ್ತು ಮಠಾಧಿಪತಿ–ಎಂದರೆ ಯಾರು ? ಪರಸ್ಪರ ವ್ಯತ್ಯಾಸವೇನು ? ಅವರ ಕರ್ತವ್ಯವೇನು ?

* ಬದುಕಿನಲ್ಲಿ ಕ್ಷಣಿಕ ಮೌಲ್ಯಗಳ ಆಸಕ್ತಿ ತೊರೆದವನು ಸನ್ಯಾಸಿ. ಹಾಗೆ ತೊರೆದು, ಸಮಾಜದ ಹಿತಕ್ಕಾಗಿ ಒಂದು ಸಂಸ್ಥೆಯ ಜವಾಬ್ದಾರಿ ಹೊತ್ತು ವಿಶಾಲ ತತ್ತ್ವದ ತಳಹದಿಯ ಮೇಲೆ ಜನಸೇವೆಗೆ ನಿಲ್ಲಬೇಕಾದವ ಮಠಾಧಿಪತಿ. ಸನ್ಯಾಸಿ ನಿರಪೇಕ್ಷಿ, ಮಠಾಧಿಪತಿ ನಿರ್ಲಿಪ್ತ. ಇಬ್ಬರ ಕರ್ತವ್ಯವೂ ಧರ್ಮಜಾಗೃತಿ, ಅಧ್ಯಾತ್ಮ ವೃತ್ತಿಯ ಉದ್ದೀಪನೆ ಮತ್ತು ಸಮಾಜ ಸೇವೆ ಆಗಬೇಕು.

— ಅರುಣಕುಮಾರ, ಬೆಂಗಳೂರು.

✻ ತೀರಾ ಇತ್ತೀಚಿನವರೆಗೆ ಓರ್ವ ಗುರುಗಳ ಸನ್ನಿಧಿಯಲ್ಲಿದ್ದು, ಅನೇಕ ವರ್ಷಗಳ ಕಾಲ ಅವರ ಆಶ್ರಯ ಪಡೆದು, ಅವರ ಪ್ರಚಾರಕನಾಗಿ ಕೆಲಸ ಮಾಡಿ, ಈಗ ಒಮ್ಮೆಲೇ ಹೊರಗೆ ಬಂದ ಬಳಿಕ ಅವರನ್ನು ನಿಂದಿಸುವ ವ್ಯಕ್ತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು ?

* ಅವನು ಸಮಯ ಸಾಧಕನಿರಬೇಕು, ಇಲ್ಲವೇ ಗುರುದ್ರೋಹಿ ಇರಬೇಕು. ಅವರ ಆಶ್ರಯದಲ್ಲಿರುವ ತನಕ ಒಳ್ಳೆಯವರೆಂದು, ಹೊರಹಾಕಲ್ಪಡುತ್ತಿದ್ದಂತೆಯೇ 'ನರಿ ದ್ರಾಕ್ಷಿ ಸಿಗದಾಗ ಹುಳಿ ಎಂದಂತೆ' ದೂರುವ ಅವನು ಗುರುದ್ರೋಹಿ. ಇಲ್ಲವೇ ಮೊದಲಿನಿಂದಲೂ ಅನ್ಯಾಯ ಸಹಿಸಿಕೊಂಡು ತುತ್ತನ್ನಕ್ಕಾಗಿ ಬಾಯಿ ಮುಚ್ಚಿಕೊಂಡಿದ್ದ ಸಮಯ ಸಾಧಕನಿರಬೇಕು. ಎರಡೂ ಅಪಾಯಕಾರಿ ಗುಣಗಳೇ. ಆದ್ದರಿಂದ ನೀವು ಎಚ್ಚರವಾಗಿರಿ ಎಂದು ನಮ್ಮ ಸಲಹೆ.

— ಆನಂದಶರಣ, ಬೀದರ.

✻ ನಮ್ಮ ಜಾತಿಯುವಳೇ ಆದ ಸಜ್ಜನ ವಧುವನ್ನು ಕೈಹಿಡಿಯಲು ನಾನು ಬಯಸಿರುವೆ, ಸಾತ್ವಿಕ ಜೀವನದ ಆಕಾಂಕ್ಷಿಯಾಗಿ! ಅವಳೂ ಸಮ್ಮತಿಸಿದ್ದಾಳೆ. ಆದರೆ ಅವಳ ತಾಯಿ ತಂದೆ ಒಪ್ಪಿಲ್ಲ, ಒಪ್ಪಿಸುವ ಬಗೆ ?

* ಸಂಧಾನ ಮೊದಲು, ಸಮಾಧಾನ ನಂತರ. ಇಷ್ಟಕ್ಕೂ ಸೋಲದಿದ್ದಾಗ ದಿಟ್ಟತನವೊಂದೇ ಸಾಧನ.

ಚನ್ನಬಸಪ್ಪ, ಪಿ. ಇ. ಸಂತೇಕಡೂರು.

✻ ಕಲ್ಯಾಣದ ಬಸವಣ್ಣನವರು ಮಡು ಹಾರಿ ಆತ್ಮ ಹತ್ಯೆ ಮಾಡಿಕೊಂಡರೆಂದು ಒಬ್ಬರು ಹೇಳುತ್ತಿದ್ದಾರೆ. ನಿಜವೆ?

* ಪ್ರಾಣಲಿಂಗಿ ಸ್ಥಿತಿ ಪಡೆದು, ಕಾಯ-ಜೀವದ ಹೊಲಿಗೆ ಬಿಚ್ಚಿಕೊಂಡು ಇಚ್ಛಾ ಮರಣಿಗಳಾಗಿದ್ದ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗವೇನೂ ಒದಗಲಿಲ್ಲ. ಕಲ್ಯಾಣದ ವಿಪ್ಲವದ ಬಳಿಕ ಸುಮಾರು ತಿಂಗಳು ಕಾಲ ಇದ್ದು, ಅವರು ಪ್ರಾಣ ವಿಸರ್ಜನೆ ಮಾಡಿದ್ದಾರೆ. ಅವರು ಲಿಂಗೈಕ್ಯರಾದ ಬಗ್ಗೆ ವಿವರವಾಗಿ ನಮ್ಮ ಕಲ್ಯಾಣಕ್ರಾಂತಿ ಕೃತಿಯಲ್ಲಿ ಕೊಡಲಾಗಿದೆ. ಓದಿಕೊಳ್ಳಿರಿ.

— ಕೆ. ಎಸ್. ನಂಜಾಮರಿ, ಎನ್. ತರೀಕೆರೆ.

✻ ದುಷ್ಕೃಟಗಳ ಬಗ್ಗೆ ಪಶ್ಚಾತ್ತಾಪವಾದಾಗ ಪ್ರಾಯಶ್ಚಿತ್ತವೆಂದು ಸಾಯಬೇಕೆ ?

* ಸತ್ತು ತಿದ್ದಿಕೊಳ್ಳಲು ಸಾಧ್ಯವೆ? ಸಾಯುವುದು ಹೇಡಿತನ, ತಿದ್ದಿಕೊಂಡು ದೊಡ್ಡವನಾಗುವುದು ಧೀರತನ.

—ಕೆ. ಎಸ್. ನಂಜಾಮರಿ.

✻ ತಂದೆಯನ್ನು ಕಳೆದುಕೊಂಡ ನನಗೆ ಮಮತೆಯನ್ನು ತೋರಿ ಪೋಷಿಸಿದ ಮಹಾ ತಂದೆಯಂತಹ ಓರ್ವರ ಋಣ ಹೇಗೆ ತೀರಿಸಲಿ ?

* ಒಂದನೆಯದಾಗಿ, ಅವರು ನಿಮ್ಮನ್ನು ಪೋಷಿಸಿದ್ದಾರೆಂಬ ಕೃತಜ್ಞತೆಯ ಅರಿವು ಸದಾ ಇರಲಿ. ಎರಡನೆಯದಾಗಿ ಅವರು ನಿಮ್ಮನ್ನು ಯಾವ ಮಟ್ಟಕ್ಕೇರಿಸಲು ಬಯಸಿದ್ದರೋ ಅದನ್ನು ಸಾಧಿಸಿರಿ. ಕೃತಜ್ಞತೆಯೊಡನೆ, ಅವರಿಗೆ ಅವಶ್ಯವಾದ ಕಾಲದಲ್ಲಿ ನೀವು ಸಹಾಯಮಾಡಿ, ಸೇವೆ ಮಾಡಿರಿ. ತಂದೆಯ ವಾತ್ಸಲ್ಯ ನೀಡಿದ ಅವರಿಗೆ, ಮಗನ ಕರ್ತವ್ಯ ಮಾಡಿ ತೋರಿರಿ.

— ಶಿವಪ್ಪ ಉಮದಿ, ಹುಬ್ಬಳ್ಳಿ.

✻ ಕೆಲವರು ವಿನಾಕಾರಣ ನಿಂದಿಸುವರು, ಅಪಪ್ರಚಾರ ಮಾಡುವರು. ಇದು ಏಕೆ ?

* ಬೈಯ್ಯಲು ಕಾರಣ ಹಲವಿರಬಹುದು. ವೈಯಕ್ತಿಕ ದ್ವೇಷ, ಹಣ ಕೇಳಿದಾಗ ಕೊಡದಿದ್ದರೆ ಆಕ್ರೋಶ, ಬೇರಾರಾದರೂ ಹಣ ಕೊಟ್ಟಿರುವ ಸ್ವಾರ್ಥ, ತನ್ನ ಜಾತಿಯವರಲ್ಲದ ಇತರರು ಮುಂದುಬರಬಾರದೆಂಬ ದುರಭಿಮಾನ, ಪ್ರತಿಭಾವಂತರಿಗೆ ದೊರೆಯುವ ಕೀರ್ತಿ ಕಂಡು ಅಸೂಯೆ – ಈ ಎಲ್ಲವು ಅನ್ಯರನ್ನು ನಿಂದಿಸಲು ಪ್ರಮುಖ ಕಾರಣಗಳಿರಬಹುದು.

— ಈಶ್ವರನ್, ಚಿಕ್ಕನಾಯ್ಕನಹಳ್ಳಿ.

✻ ಉಳಿದ ಅನೇಕ ಪತ್ರಿಕೆಗಳಲ್ಲಿ ಬರುವಂತೆ ನಿಮ್ಮಲ್ಲಿ ಏಕೆ ಬೇರೆಯವರ ಬಗೆ ಟೀಕೆಯ ಲೇಖನಗಳು ಬರವು ?

* ನಮ್ಮದು ಕಲ್ಯಾಣದ ಮರಣ ಮಾಡಲು ಹುಟ್ಟಿದ ಪತ್ರಿಕೆಯಲ್ಲ, ಅರಿವಿನ ಪ್ರಭೆಯನ್ನು ಹಸರಿಸಲು ಜನ್ಮಿಸಿದ ಜ್ಞಾನ ಕಿರಣ. ಆದ್ದರಿಂದ ಇದರ ಉದ್ದೇಶ ದ್ವೇಷಾತ್ಮಕ ವಿಧ್ವಂಸಕ ಟೀಕೆಯಲ್ಲ, ಆತ್ಮೀಯ ವಿಧಾಯಕ ಬೋಧೆ; ಗುರಿ ಸಮಾಜದ ಪತನವಲ್ಲ, ಉತ್ಥಾನ.

★★

ಎಲ್ಲ ಪತ್ರ ವ್ಯವಹಾರಗಳಲ್ಲಿ ಚಂದಾದಾರರು
ತಮ್ಮ ಚಂದಾ ಸಂಖ್ಯೆ ನಮೂದಿಸಬೇಕು.

ಮಾತು ಜ್ಯೋತಿರ್ಲಿಂಗ

ಸಂ : ಎಸ್. ಪಿ. ಸುಲೋಚನ ಪ್ರಸನ್ನ

ಕೆಟ್ಟದ್ದನ್ನು ಮಾಡಲು ದಿನಕ್ಕೆ ನೂರಾರು ಅವಕಾಶ ಸಿಗುತ್ತವೆ. ಒಳ್ಳೆಯದನ್ನು ಮಾಡಲು ಯಾವಾಗಲೋ ಒಮ್ಮೊಮ್ಮೆ ಮಾತ್ರ ಅವಕಾಶ ದೊರೆಯುತ್ತದೆ.

—ವಾಲ್ಟೇರ್

ಸಂದೇಹಕ್ಕೆಡೆ ಮಾಡುವ ವಿಷಯಗಳಲ್ಲಿ ಸಜ್ಜನರಿಗೆ ಆತ್ಮಸಾಕ್ಷಿಯೇ ಪ್ರಮಾಣ.

— ಕಾಳಿದಾಸ.

ಕಣ್ಣುಗಳು ತಮ್ಮನ್ನು ನಂಬುತ್ತವೆ. ಕಿವಿಗಳು ಇತರರನ್ನು ನಂಬುತ್ತವೆ.

— ಜರ್ಮನ್ ಗಾದೆ.

ಕೀರ್ತಿಕನ್ಯೆ ಇನ್ನೂ ಕುಮಾರಿಯಾಗಿಯೇ ಇದ್ದಾಳೆ. ಕೈಯಲ್ಲಿ ಹೂಮಾಲೆ ಹಿಡಿದು ಅಲೆಯುವ ಅವಳಿಗೆ ಇನ್ನೂ ಅನುರೂಪನಾದ ವರ ದೊರೆತಿಲ್ಲ. ವಿದ್ವಾಂಸರು ಅವಳನ್ನು ಕಂಡರೆ ದೂರ ಹೋಗುತ್ತಾರೆ. ಮೂರ್ಖರನ್ನು ಕಂಡರೆ ಅವಳೇ ದೂರ ಹೋಗುತ್ತಾಳೆ.

— ರವೀಂದ್ರನಾಥ ಠಾಕೋರ್

ಕೃತ್ಯಕಾಯಕ ವಿಲ್ಲದವರು ಭಕ್ತರಲ್ಲ. ಸತ್ಯಶುದ್ಧವಲ್ಲದುದು ಕಾಯಕವಲ್ಲ.

-- ಉರಿಲಿಂಗಪೆದ್ದಿ.

ಕುರೂಪಿಯಾದ ವ್ಯಕ್ತಿ ಎಂದಿನವರೆಗೆ ಕನ್ನಡಿಯಲ್ಲಿ ತನ್ನನ್ನು ತಾನು ನೋಡಿಕೊಂಡಿರುವುದಿಲ್ಲವೋ ಅಂದಿನವರೆಗೆ ತನ್ನನ್ನು ಇತರರಿಗಿಂತ ಅಧಿಕ ಸುಂದರನೆಂದು ತಿಳಿದುಕೊಂಡಿರುತ್ತಾನೆ.

— ಮಹಾಭಾರತ

ಯಾವನು ತನ್ನ ಆತ್ಮ ನಿರೀಕ್ಷಣೆ ಮಾಡಿಕೊಳ್ಳದೆ ಕೇವಲ ಅನ್ಯರತ್ತ ತನ್ನ ದೃಷ್ಟಿ ಇರಿಸುತ್ತಾನೋ ಅವನಿಗೆ ಸದಾ ಲೋಪದೋಷಗಳೇ ಅನ್ಯರಲ್ಲಿ ಕಾಣಬಂದು, ತಾನಷ್ಟೇ ಪರಿಪೂರ್ಣನೆಂಬ ಅಹಂ ಬೆಳೆಯ ತೊಡಗುತ್ತದೆ.

ನೂರು ನಿಂದೆಗಳು ಮಾನವನನ್ನು ಘಾತಿಸಲಾರವು. ಆದರೆ ಅಂತರಾತ್ಮನಿಗೆ ಮಾಡುವ ಒಂದು ವಂಚನೆ ಅವನ ವ್ಯಕ್ತಿತ್ವವನ್ನು ಛಿದ್ರಗೊಳಿಸುವದು.

— ಜಗದ್ಗುರು ಮಾತೆ ಮಹಾದೇವಿ.

ಹಾವಿನ ಡೊಂಕು ಹುತ್ತಕ್ಕೆ ಸಸಿನ, ನದಿಯ ಡೊಂಕು ಸಮುದ್ರಕ್ಕೆ ಸಸಿನ, ಕೂಡಲ ಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ.

—ವಿಶ್ವಗುರು ಬಸವಣ್ಣ.

ಅತ್ತು ಕಳೆವ ನೋವ ಹಾಡಿ ಕಳೆಯಲೇಕಯ್ಯ ?

— ಸತ್ಯಕ್ಕ.

ಬೋಳುಬಸವನ ಬೊಂತೆ-೩

ಸತ್ಕರ್ಮ — ದುಷ್ಕರ್ಮ.

ಹಿಂದೆ ನೀನೆಸಗಿರ್ದ ಕರ್ಮಗಳನನುಸರಿಸಿ
ಹೊಂದಿರುವೆ ನೀ ಪಡುವ ಸುಖದುಃಖವ
ವಂದಿಸದೆ ನಿಂದಿಸದೆ ನಿರ್ನೊಳಿತು ಕೆಡಕಿಂಗೆ
ತಂದುದನ್ನನುಭವಿಸು—ಬೋಳುಬಸವ ॥೧॥

ಬುದ್ಧಿಯೊಂದಿದ್ದರದು ಸಾಕು ಈ ಲೋಕದಲಿ
ಸಿದ್ಧಿ ಪಡೆಯುವೆನೆಂದು ತಿಳಿಯಬೇಡ
ಬುದ್ಧಿಗಿರೆ ಸಾಮರ್ಥ್ಯ ಧರೆಯನಾಳಲು, ಕರ್ಮ
ಲದ್ದಿಯನು ಹೊರಿಸೀತು—ಬೋಳುಬಸವ ॥೨॥

ಸುಖಪಡುವೆ ದುಃಖಿಸುವೆ ಎನುತೇಕೆ ಭಾವಿಸುವೆ
ಸುಖದುಃಖಗಳ ಪಡೆಯೆ ನಿನ್ನಿಚ್ಛೆಯೆ ?
ಸುಖದುಃಖಗಳು ಬಹವು ಕರ್ಮಕ್ಕೆ ತಕ್ಕಂತೆ
ಮುಖದಂತೆ ಪ್ರತಿಬಿಂಬ—ಬೋಳುಬಸವ ॥೩॥

ಮಾಡಿದೆನು ನಾನೆಂಬ ಮಮಕಾರ ನಿನಗೇಕೊ
ಮಾಡಲಿಕೆ ಬಿಡಲಿಕ್ಕೆ ನಿನ್ನಿಚ್ಛೆಯೇ ?
ಮಾಡಿದರು ಬಿಟ್ಟರೂ ನಿನ್ನತನವೇನುಂಟು
ಮಾಡೆ ಬಿಡೆ ದೈವೇಚ್ಛೆ—ಬೋಳುಬಸವ ॥೪॥

ಬದುಕೊಂದು ನಾಟಕವು ವಿಧಿಯು ನಿರ್ದೇಶಕನು
ಅದರ ದೃಶ್ಯಗಳೆಲ್ಲ ಕರ್ಮಫಲವು
ಪದಪಿಂದ ನೀನರಿತು ಆಯಾಯ ಪಾತ್ರಗಳ
ಹದವರಿತು ಅಭಿನಯಿಸು —ಬೋಳುಬಸವ ॥೫॥

ಧನವು ಯೌವನ ವಿದ್ಯೆಬುದ್ಧಿಯಿರಲೇನು ಫಲ
ಅನುಭವಿಪ ಪುಣ್ಯವದು ಇಲ್ಲದಿರಲು

ನಿನಗೆಷ್ಟು ದೊರಕುವುದೋ ಅಷ್ಟನ್ನೆ ತೃಪ್ತಿಯಲಿ
ಅನುಭವಿಸಿ ಸುಖಿಯಾಗು —ಬೋಳುಬಸವ ॥೬॥

ಹಣವಂತ ಕಡುಬಡವ ಧೀಮಂತ ಬಲುಹೆಡ್ಡ
ಗುಣವಂತ ಕಡುಮೂರ್ಖ ಬಲನಬಲನು
ಎಣಿಸಲೆಲ್ಲರಿಗು ಸಮಕರಣಂಗಳಿರ್ದೊಡಂ
ಗುಣಬುದ್ಧಿ ಕರ್ಮಫಲ—ಬೋಳುಬಸವ ॥೭॥

ಮಾಡುತಿದ್ದರು ನೀನು ಸತ್ಕಾರ್ಯಗಳ ಬಿಡದೆ
ಕಾಡುತಿಹುದೇಕೆ ವಿಧಿ ಬೆನ್ನಬಿಡದೆ
ನೋಡಲಿದು ನೀ ಹಿಂದೆ ಗೈದ ಪಾಪದ ಫಲವು
ಮಾಡಿದ್ದನುಣಬೇಕು—ಬೋಳುಬಸವ॥೮॥

ಕೆಲಜನರು ದುಷ್ಕಾರ್ಯ ಗೈಯುತ್ತಲಿರ್ದೊಡಂ
ಬಲುಸೊಗದಿ ಬಾಳುತ್ತಲಿಹರು ಜಗದಿ
ತಿಳಿಯಲದು ಪೂರ್ವದೊಳು ಗೈದ ಪುಣ್ಯದ ಫಲವು
ಗಳಿಸಿದ್ದರುಣಲುಂಟು—ಬೋಳುಬಸವ ॥೯॥

ಮತಿಹೀನ ಗುಣರಹಿತ ಕುಲಹೀನ ದುಷ್ಕರ್ಮಿ
ಗತಿಗೇಡಿಯಿವನೆಂದು ಕರೆಸಿಕೊಳುತೆ
ಸತಿಸುತರ ಕಳಕೊಂಡು ತೊಳಲುವಾತನ ಕೂಡ
ಕೃತಪುಣ್ಯ ಕಾಯುವುದು—ಬೋಳುಬಸವ ॥೧೦॥

ಶರಧಿ ವನ ಮೇಣ್ಗಗನ ಪಾತಾಳದಲ್ಲಿರಲಿ
ಸರಿಗೆ ಸಿಲ್ಕಿರಲಿ ದಳ್ಳುರಿಯೊಳಿರಲಿ
ಹರಿಕರಿಯ ಮುಂಧಿರಲಿ ಮರುಳುಗಳು ಮುತ್ತಿರಲಿ
ಪೊರೆಯುವುದು ಪೂರ್ವಫಲ—ಬೋಳುಬಸವ ॥೧೧॥

ತೀರಿದರೆ ಪುಣ್ಯಫಲ ಹೊನ್ನಮುಟ್ಟಲು ಮಣ್ಣು
ಸಾರತರ ಸುರಧೇನು ಕೂಡ ಬರಡು
ಹಾರಿ ಹರಣವ ತೊರೆಯೆ ಹಾರಿದರು ಸಾಗರಕೆ
ನೀರು ಮೊಣಕಾಲುದ್ದ—ಬೋಳುಬಸವ ॥೧೨॥

—ಪಿ. ಬಸವಣ್ಣ, ಕೊಳ್ಳೆಗಾಲ

ನಾ ಕಂಡಂತೆ ಮಾತಾಜಿ

—ವಿಜಯಶ್ರೀ

ನಮ್ಮ ಹಿಂದಿನವರು ಮಾನವ ಜೀವನದಲ್ಲಿ ಮೇಲೇರಲು ಮೆಟ್ಟಲುಗಳನ್ನು ನಿರ್ಮಿಸಿದರು. 'ಪ್ರತಿಯೊಬ್ಬನೂ ಒಂದೊಂದೇ ಹಂತವನ್ನು ನಿಧಾನವಾಗಿ ಏರಬೇಕು; ಒಂದೇ ಬಾರಿಗೆ ಕೆಳಗಿನಿಂದ ಮೇಲಕ್ಕೆ ಹಾರಲು ಹೋದರೆ ಆತ ಕೆಳಗೆ ಬೀಳುತ್ತಾನೆ' ಎಂಬುದನ್ನು ತೋರಿಸಿ, ನಾಲ್ಕು ಮೆಟ್ಟಲುಗಳನ್ನು ಬಲು ಅಚ್ಚುಕಟ್ಟಾಗಿ ಬ್ರಹ್ಮಚರ್ಯಾಶ್ರಮ, ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ ಮತ್ತು ಸನ್ಯಾಸಾಶ್ರಮ ಎಂದು ನಿಯಮಿಸಿದರು. ನಾವೆಲ್ಲ ಇಂದು ಅದೇ ಮಾರ್ಗ ಹಿಡಿದಿದ್ದೇವೆ. ಆದರೆ ನಮ್ಮಗಳ ಮಧ್ಯೆ ಆಗಾಗ ಒಂದು ದಿವ್ಯಶಕ್ತಿಯ ಉದಯವಾಗುತ್ತಿರುತ್ತದೆ. ಅದು ತಾನು ಒಂದೇ ಬಾರಿಗೆ, ಉದಯದಿಂದಲೇ ಸನ್ಯಾಸಾಶ್ರಮದ ಕಡೆಗೆ ಹಾರಬಲ್ಲೆ ಜಾರದೆ, ಎಂಬುದನ್ನು ಸಾಧಿಸಿ, ತೋರಿಸುತ್ತದೆ. ಇಂತಹ ಸಾಹಸಕ್ಕೆ ಎಂಟೆದೆ ಬೇಕು; ಮುಖ್ಯವಾಗಿ ಮನೋಸ್ಥೈರ್ಯಬೇಕು; ಬಲವಾದ ಸಿದ್ಧತೆ ಬೇಕು. ಇಲ್ಲವೆ ಕೂಗುವ ಕಾಗೆಗಳಿಗೆ, ಬೊಗಳುವ ನಾಯಿಗಳಿಗೆ; ಅರಚಾಡುವ ಪ್ರಾಣಿಗಳಿಗೆ ಭಯಪಟ್ಟು ಬಲಿಯಾಗಿ ಹಾರುವಾಗಲೇ ಹೆದರಿ ಕೆಳಕ್ಕುರುಳಬೇಕಾದೀತು. ಅಂತಹ ಮನೋಸ್ಥೈರ್ಯ ಪಡೆದವರು ಸಾವಿರ, ಲಕ್ಷಕ್ಕೊಬ್ಬರು. ಇಂತಹ ಮನೋದಾರ್ಢ್ಯ ಪಡೆದ ಜಗನ್ಮಾತೆ ಅಕ್ಕಮಹಾದೇವಿ ಟೀಕೆ - ಟಿಪ್ಪಣಿ, ನಿಂದೆ - ಕುಹಕಗಳು ತುಂಬಿದ ಇಡೀ ಸಮಾಜವನ್ನೆದುರಿಸಬೇಕಾಯ್ತು. ಬೆದರದೆ, ಹೆದರದೆ, ಅಳುಕದೆ ಎದುರಿಸಿದಳು.

'ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯಾ?' ಎಂದು ಈ ಸಾಮಾಜಿಕ ಸಂತೆಯ ಗದ್ದಲದಿಂದ ದಾಟಿ, ಸಾವ ಕೆಡುವ ಗಂಡಂದಿರಿಂದ, ಸಾವಿಲ್ಲದ, ಕೇಡಿಲ್ಲದ ಪತಿ ಮಲ್ಲಿಕಾರ್ಜುನನತ್ತ ಸರ್ವ ಸಂಪತ್ತನ್ನೂ ತೊರೆದು ಸಾಗಿ ಅವನಲ್ಲಿ ಐಕ್ಯಳಾದಳು. ಆಧ್ಯಾತ್ಮ ಗಿರಿಯಲ್ಲಿ ನರ್ತಿಸುವ ಮಯೂರವಾದಳು. ಅಕ್ಕನಂತೆ ಆಧ್ಯಾತ್ಮವನ್ನರಸಿ ಹೊರಟವರು ತೀರಾ ವಿರಳ. ಅವಳ ವ್ಯಕ್ತಿತ್ವದ ಒಂದಂಶ ಪಡೆಯಲೂ ಪ್ರಬಲ ಸಾಧನೆ ಬೇಕು-ಇಲ್ಲವೇ ಜನ್ಮತಃ ವೈರಾಗ್ಯವೂ ಜನಿಸಿರಬೇಕು. ಸಾಧನೆ-ಮೂಲ ವೈರಾಗ್ಯ ಪ್ರವೃತ್ತಿ ಎರಡೂ ಸಮ್ಮಿಲನವಾದರೆ ಒಂದು ವೈರಾಗ್ಯನಿಧಿ ಸೃಷ್ಟಿಯಾಗುವ ಸಾಧ್ಯತೆಯಿದೆ. ಅಂಥ ಒಂದು 'ನಿಧಿ'ಯೇ ಇಂದು 'ಮಾತಾಜಿ' ಎನ್ನಿಸಿಕೊಳ್ಳುವ ಪೂಜ್ಯ ಜಗದ್ಗುರು ಮಾತೆ ಮಹಾದೇವಿ. ಅಂದು ಇಡೀ ಸಮಾಜಕ್ಕೇ 'ಅಕ್ಕ' ದೊರಕಿದ್ದಳು. ಇಂದು ಜಗದ ಪಿತನನ್ನು ವರಿಸಿ ನಮ್ಮ ಸಮಾಜಕ್ಕೆ 'ಮಾತಾಜಿ' ದೊರಕಿದ್ದಾರೆ. ಆಧ್ಯಾತ್ಮ, ಧರ್ಮಗಳ ಮಾತೃತ್ವದಿಂದ ವಂಚಿತರಾಗಿ

ಅನಾಥರಾಗಿರುವ ನಮಗಿಂದು, ಆ ಕೊರತೆ ತುಂಬಿಕೊಡಲು ಮಾತಾಜಿ ಜನಿಸಿ ಬಂದಿದ್ದಾರೆ. ಒಂದು ಶತಕವು ಅಕ್ಕನನ್ನು ಪಡೆದರೆ, ಇನ್ನೊಂದು ಶತಕ ಮಾತೆಯನ್ನು ಪಡೆದಿದೆ. ಯಾರ ಭಾಗ್ಯ ಹೆಚ್ಚು? ಯಾರ ಭಾಗ್ಯ ಕಡಿಮೆ? 'ಮಾತೆ' ಎನ್ನುವ ಪದವನ್ನು ಎಲ್ಲರೂ ಪಡೆಯಲು ಸಾಧ್ಯವೇ? ಮಕ್ಕಳನ್ನು ಹೊತ್ತು, ಹೆತ್ತು, ಸಾಕಿ ಬೆಳೆಸಿ ಅವರನ್ನು ಪ್ರೀತಿಸುವ ತಾಯಿಯನ್ನು ಆಕೆಯ ಮಕ್ಕಳು 'ಅಮ್ಮಾ' ಎಂದು ಆದರಿಸುವುದು ಸಹಜ! ಅದೇ ತಾಯಿ ಇತರರ ಮಕ್ಕಳನ್ನು ನಿಷ್ಪಕ್ಷಪಾತದಿಂದ ತನ್ನ ಮಕ್ಕಳಂತೆಯೇ ಕಾಣಲು ಸಾಧ್ಯವಾದಾಗ ಮಾತ್ರ ಆ ತಾಯ್ತನ ಸಾರ್ಥಕ ಹಾಗೂ ಅದಕ್ಕೆ ಬೆಲೆ. ಅಂತಹ ಮಾತೆಯರು ಎಷ್ಟು ಜನರಿದ್ದಾರೆ? ಹೆತ್ತು ಪ್ರೀತಿಸುವ ಅನುಭವವಿರುವ ತಾಯಿಯರೇ ಹೀಗಾದರೆ ಹೊರದೆ, ಹೆರದೆ ಇಡೀ ಸಮಾಜವನ್ನೇ ಯಾವ ಭಿನ್ನ ಭಾವಗಳೂ ಇಲ್ಲದೆ, ಜಾತಿ-ಮತ ಭೇದಗಳಿಲ್ಲದೆ ಪ್ರೀತಿಸಿ ಮಾತೃತ್ವದ ಅಮೃತಧಾರೆ ಹರಿಸಿ 'ಮಾತಾಜಿ' ಎನ್ನಿಸಿಕೊಳ್ಳಬೇಕಾದರೆ ಆ ವ್ಯಕ್ತಿತ್ವದ ಹಿರಿಮೆ ಎಂತಹುದಿರಬಹುದು ಯೋಚಿಸಿ! ಅದೂ ಈ ಕಿರಿ ವಯಸ್ಸಿನಲ್ಲಿ!

೧೯೪೬ನೇ ಇಸವಿ ೩ನೇ ತಿಂಗಳಿನ ೧೩ನೇ ದಿನಾಂಕದಂದು ೧೨-೩೦ ಗಂಟೆಗೆ ಚಿತ್ರದುರ್ಗದ ಡಾ॥ ಎಸ್. ಆರ್. ಬಸಪ್ಪನವರ ಪತ್ನಿ, ಗಂಗಮ್ಮನವರಲ್ಲಿ ಮುಂದೆ ಮಹಾಮಾತೆ ಎನಿಸಿದ ಮಗುವಿನ ಅವತಾರವಾಯಿತು. 'ರತ್ನ' ಎಂಬ ಜನ್ಮ ನಾಮ ನಿಜಕ್ಕೂ ಸಾರ್ಥಕ ಆಗಿದೆ. ಇಂತಹ ಅನರ್ಘ್ಯ ರತ್ನವನ್ನು ನಮ್ಮ ನಾಡಿಗೆ ಕಾಣಿಕೆ ನೀಡಿದ ತಂದೆ-ತಾಯಿ ಧನ್ಯರು! ಇಂತಹ ತ್ಯಾಗಮಯ ಸತ್‌ಪುತ್ರ - ಪುತ್ರಿಯರನ್ನು ಪಡೆದಾಗಲೇ ಅಲ್ಲವೇ ತಂದೆತನ, ತಾಯ್ತನಕ್ಕೆ ಬೆಲೆ ಬರುವುದು! ಹುಟ್ಟುವಾಗಲೇ ಧಾರ್ಮಿಕ ಮನೆತನದ ಅಡಿಪಾಯ; ಬೆಳೆಯುತ್ತಿದ್ದಂತೆ ಪರಿಶುದ್ಧವಾದ ಧಾರ್ಮಿಕ ಪರಿಸರ; ರತ್ನ ಬೆಳೆಯ ತೊಡಗಿದಳು ದೈಹಿಕ ಹಾಗೂ ಮಾನಸಿಕವಾಗಿ. ಮಾತೆಯೇ ಮೊದಲ ಗುರು ಮಗುವಿಗೆ, ಮಗುವಿನ ಮನದ ಮೇಲೆ ಬೀಳುವ ಮೊದಲ ಮುದ್ರೆ ಬಹಳ ಪರಿಶುದ್ಧವಾಗಿರಬೇಕು; ಅಲ್ಲಿಂದಲೇ ಮೊಳಕೆಯೊಡೆಯಲು ಪ್ರಾರಂಭ. ನಾವು ಅಲ್ಲಿ ಬೇವು ಬಿತ್ತಿದರೆ ಬೇವು, ಮಾವು ಬಿತ್ತಿದರೆ ಮಾವು ಬೆಳೆಯುತ್ತದೆ. ಮಗುವಿನ ಹದವಾದ ಮನಸ್ಸಿನ ಮೇಲೆ ತಾಯಿಯು ಭಕ್ತಿಪೂರ್ಣವಾದ ಕಥೆಗಳನ್ನು ಹೇಳಿ ಧಾರ್ಮಿಕ ಬಿತ್ತನೆ ನಡೆಸಿದರು. ಮುಗ್ಧ ಮಗುವಿನ ಮನಸ್ಸು ಮರುಳಾಗದಿದ್ದೀತೇ? ಅಂತರಂಗದ ಮೂಲೆಯಲ್ಲಿ ಭಕ್ತಿಯು ಮಡುಗಟ್ಟ ತೊಡಗಿತು.

ಲೌಕಿಕದ ಹಂಗನ್ನು ಕಳಚುವ ಮೊದಲ ಹಂತವೇನೋ ಎಂಬಂತೆ ಮಾತಾಜಿಯು ೧೪ನೇ ವಯಸ್ಸಿಗೇ ಪೂಜ್ಯ ಪಿತಾಜಿಯನ್ನು ಕಳೆದುಕೊಂಡರು. ನಂತರ ಡಾಕ್ಟರರಾಗಬೇಕೆಂಬ ಆಸೆಯನ್ನೂ ತೊರೆದರು. ಡಾಕ್ಟರರಾಗಿದ್ದರೆ ಅವರ ದಾರಿ ಇನ್ನೆತ್ತ ಸಾಗುತ್ತಿತ್ತೋ ಏನೋ? ದೈಹಿಕ ರೋಗಗಳನ್ನು ವಾಸಿಮಾಡುವ ವೈದ್ಯರು ಸಾಕಷ್ಟು

ಜನರಿದ್ದಾರೆ. ಆದರೆ ಧರ್ಮ-ಜ್ಞಾನಗಳ ಅನ್ನಾಂಗಗಳ ಕೊರತೆಯಿಂದ ನಮ್ಮ ಸಮಾಜ ರಕ್ತಹೀನತ್ವದ ಪೇಷೆಂಟ್ ಆಗಿದೆ. ಅದನ್ನು ಚೆನ್ನಾಗಿ ಅರಿತು ರೋಗಲಕ್ಷಣಕ್ಕೆ ತಕ್ಕಂತೆ ಔಷಧೋಪಚಾರಗಳನ್ನು ಮಾಡುವ ಧಾರ್ಮಿಕ ವೈದ್ಯರ ಅಗತ್ಯ ತೀವ್ರವಾಗಿತ್ತು. ಇದನ್ನು ತುಂಬಿಕೊಡಲು ಮಾತೆಯವರು ಆ ಭವರೋಗ ವೈದ್ಯ ಸ್ಥಾನಕ್ಕೆ ತಯಾರಾದರು.

ಜ್ಞಾನ, ತ್ಯಾಗ, ವೈರಾಗ್ಯಗಳ ಸಾಕಾರಮೂರ್ತಿ ಸ್ವಾಮಿ ವಿವೇಕಾನಂದರ ಸ್ಫೂರ್ತಿ ಇವರ ಅಂತರಂಗದಲ್ಲಿ ಗುಪ್ತ ಗಾಮಿನಿಯಾಗಿ ಉದ್ಭವಿಸಿ, ದೇಹದ ನರನಾಡಿಗಳಲ್ಲಿ, ರಕ್ತದಲ್ಲಿ ಒಂದಾಗಿ ಪ್ರವಹಿಸುತ್ತಿದ್ದ ವೈರಾಗ್ಯ, ತ್ಯಾಗ, ಸೇವಾಭಾವಗಳ ಪ್ರಜ್ವಲತೆಗೆ ಕಾರಣವಾಯಿತು. ವಿವೇಕಾನಂದರಂಥ ವ್ಯಕ್ತಿತ್ವಕ್ಕಾಗಿ ಅರಸತೊಡಗಿದರು. ಅರಸುವ ಬಳ್ಳಿ ಕಾಲಿಗೆ ತೊಡರುವಂತೆ; ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು ಚಿತ್ರದುರ್ಗದಲ್ಲಿಯೇ ಅವರಿಗೆ ದರ್ಶನ ನೀಡಿದರು. ದರ್ಶಿಸುತ್ತಿದ್ದಂತೆಯೇ ಪೂಜ್ಯ ಸ್ವಾಮೀಜಿಯವರೇ ತಮ್ಮ ಗುರುಗಳೆಂಬ ಭಾವ ಅಂತರಂಗದಲ್ಲಿ ಮೂಡಿತು. 'ಸಚ್ಚಿದಾನಂದ' ಶಬ್ದದ ತಿರುಳನ್ನು ಅಂದೇ ಅರಿತು ಅದೇ ತಮ್ಮ ಲಿಂಗಪತಿಯ ನಾಮಾಂಕಿತವೆಂದು ನಿರ್ಧರಿಸಿದರು. ಎಂತಹ ಅಲೌಕಿಕ ಭಾವನೆಗಳೇ ಇರಲಿ ಲೌಕಿಕದಲ್ಲಿ ಜನಿಸಿದ ಮೇಲೆ ಕೆಲವು ಕರ್ತವ್ಯಗಳನ್ನು ನೆರವೇರಿಸಲೇ ಬೇಕಾಗುವುದು. ಮಾತಾಜಿಯು ಪದವೀಧರರಾಗಿ ಮುಂದೆ ಎಂ. ಎಸ್ಸಿ., ಓದಲು ಪ್ರಯತ್ನ ನಡೆಸಿದರೆ, ಮನೆಯವರು ಮದುವೆಗೆ ಪ್ರಯತ್ನಿಸುತ್ತಿದ್ದಾರೆ. ಇದರಿಂದ ಅವರ ಅಂತರಂಗದ ಬಯ್ಚಿಟ್ಟ ಬಯಕೆ ಸಿಡಿಯುತ್ತದೆ. ಶರಣಸತಿ – ಲಿಂಗಪತಿ ಎಂದ ಆತ್ಮನ ಆದರ್ಶವನ್ನೇ ತಮ್ಮದನ್ನಾಗಿಸಿಕೊಂಡು, ಅಕ್ಕನ ಆದರ್ಶಗಳನ್ನು ಮೆಚ್ಚಿದ ಇವರು ಆಕೆಯ ಮಾರ್ಗದಲ್ಲಿ ಸಾಗಲು ನಿರ್ಧರಿಸಿದರು. ಇದಕ್ಕೆ ಆಕ್ಷೇಪಣೆ ಸಹಜ ತಾನೆ? ಅಕ್ಕ ಸಾಗಿದ ಹಾದಿ ಬಹಳ ದುರ್ಗಮ; ಕಲ್ಲು ಮುಳ್ಳುಗಳ ಕಠಿಣ ಮಾರ್ಗ; ಅಕ್ಕ ಸಾಗಿದ ದಾರಿಯೇ ಹಾಗೆ! ಸವೆಯದೆ; ಯಾರೂ ಸವೆಸುವವರಿಲ್ಲದೆ ಉಳಿದಿದೆ. ಅಕ್ಕ ಸಾಗುವಾಗ ಆ ದಾರಿಯಲ್ಲಿ ಸಾಕಷ್ಟು ಜನ ಮಾರ್ಗದರ್ಶಕರಿದ್ದರು. ಅಕ್ಕ ದಾಟಿ ಹೋದ ಮೇಲೆ ಮಾರ್ಗ ವಿಪರೀತ ಕಲ್ಲುಮುಳ್ಳುಗಳಿಂದ ದಿನದಿಂದ ದಿನಕ್ಕೆ ದುರ್ಗಮವಾಗುತ್ತ ಸಾಗಿದೆ. ಈಗಂತೂ ಹೆಜ್ಜೆ ಇಟ್ಟಲ್ಲಿ ಒತ್ತುವ ಚೂಪು ಕಲ್ಲುಗಳು; ಚುಚ್ಚುವ ಮುಳ್ಳುಗಳು; ಸದಾ ಕತ್ತಲೆಯನ್ನೇ ಪ್ರದರ್ಶಿಸುವ; ಕ್ರೂರ ಪ್ರಾಣಿಗಳಿಗೆ ಆವಾಸಸ್ಥಾನವಾದ ಕಾಡು. ಇಂತಹ ದಾರಿಯಲ್ಲಿ ಹೋಗಬಿಡಲು ಯಾವ ಮಾತಾ-ಪಿತೃಗಳು ಒಪ್ಪುತ್ತಾರೆ? ಇವರುಗಳು ಹಾಕಿದತಡೆ ರಭಸದಿಂದ ತುಂಬಿ ಉಕ್ಕಿಬರುವ ನದಿಗೆ ತಡೆ ಹಾಕಿದಂತಾಯಿತು. ಇಂತಹ ಸಾಧಾರಣ ತಡೆಗಳನ್ನು ಲೆಕ್ಕಿಸದೇ ಆ ಪ್ರವಾಹ ಅದನ್ನೂ ಕೊಚ್ಚಿಕೊಂಡು ನುಗ್ಗಿ ಬಿಟ್ಟಿತು, ದಾವಣಗೆರೆಯ ವಿಶ್ವಕಲ್ಯಾಣ ಮಂಟಪಕ್ಕೆ. ಅಲ್ಲಿ ಗುರುಗಳಿಂದ ದೀಕ್ಷೆ. ಮತ್ತೆ ಲೌಕಿಕಕ್ಕೆ ಕರೆತರುವ ಮನೆಯವರ ಎಳೆತ ಒಂದೆಡೆ, ಅಂತರಂಗದ ಅಲೌಕಿಕ ಕರೆ ಮತ್ತೊಂದೆಡೆ. ಜ್ಞಾನಿಗಳು, ಮಹಾಪುರು

ಷರು ಆತ್ಮವನ್ನು ಹಿಂಸಿಸಿಕೊಳ್ಳುವುದಿಲ್ಲ; ಅಂತರಂಗದ ಕರೆಗೆ ಓಗೊಡುತ್ತಾರೆ. ಹಾಗೆಯೇ ಮಾತಾಜಿ ಆತ್ಮನ ಕರೆಯನ್ನು ತಿರಸ್ಕರಿಸಲಿಲ್ಲ.

ಗುರುವಿನಿಂದ ದೀಕ್ಷೆ ಪಡೆದುದಲ್ಲದೆ ಗುರುವಿನ ಪಾಲಿಗೆ ಅಧ್ಯಾತ್ಮ ತಾಯಿಯಾಗುವ ಮಹಾಭಾಗ್ಯ ಇವರದಾಯಿತು. ದೀಕ್ಷೆಯ ನಂತರ ಕಾವ್ಯಗಂಗೆ ಬುಗ್ಗೆಯಾಗಿ ಚಿಮ್ಮಿ, ಸಾಗಿ ಜನಮನದ ಅಜ್ಞಾನದ ಮರಳುಗಾಡಿನಲ್ಲಿ ಒಂದೇ ಸಮನಾಗಿ ಹರಿಯತೊಡಗಿದಳು. ಅಕ್ಕನ ಆದರ್ಶಗಳನ್ನು ಮೈಗೂಡಿಸಿಕೊಂಡ ಮಾತಾಜಿಯವರಲ್ಲಿ ಅಕ್ಕ ಆವಿರ್ಭವಿಸಿ ಭವ್ಯತ್ವಕ್ಕೆ ದಿವ್ಯತ್ವವನ್ನು ನೀಡಿದಳು. ಅಕ್ಕನ ಆವಿರ್ಭಾವದ ಕುರುಹಾಗಿ ಮಾತಾಜಿ ಇಂದು ತಾಳ, ಲಯಬದ್ಧವಾಗಿ ಸುಶ್ರಾವ್ಯವಾಗಿ ಹಾಡಬಲ್ಲರು. ಅಕ್ಕನ ವ್ಯಕ್ತಿತ್ವವನ್ನು ತಮಗೆ ತಾವೇ ಆರೋಪಿಸಿಕೊಳ್ಳಲು ಸಾಮಾನ್ಯರಿಂದ ಸಾಧ್ಯವೆ ? ಮತ್ತು ಸಾಧುವೆ ? ಅಕ್ಕನಂತಹ ಆತ್ಮಸ್ಥೈರ್ಯವಿಲ್ಲದವರು ಹಾಗೆ ಹೇಳಿಕೊಂಡರೆ ಅದರಿಂದಾಗುವ ಪರಿಣಾಮವನ್ನು, ಸಮಾಜವನ್ನು ಎದುರಿಸುವ ಶಕ್ತಿಯಂತೂ ಬರಲು ಖಂಡಿತ ಸಾಧ್ಯವಿಲ್ಲ ; ನವಿಲು ಕುಣಿಯಿತೆಂದು ಕೆಂಬೂತ ಕುಣಿದಂತಾಗುತ್ತದೆ. ಅಕ್ಕನ ಇನ್ನೊಂದು ರೂಪವಾಗಿಯೇ ' ಮಾತೆ ಮಹಾದೇವಿ ' ಯವರು ಇಳೆಗಿಳಿದಿದ್ದಾರೆ. ಧರ್ಮಾಂಧರಿಗೆ ದೃಷ್ಟಿ ನೀಡಿ ಅವರನ್ನು ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕಿನೆಡೆಗೆ ನಡೆಸಲು ಇವರ ಆಗಮನವಾಗಿದೆ ಎಂದೇ ನನ್ನ ನಂಬುಗೆ. ಭಗವದ್ಗೀತೆಯು ಹೀಗೆ ಹೇಳುತ್ತದೆ :

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ …………
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಧರ್ಮ ಕ್ಷಯಿಸುವಂತಾದಾಗ ಒಬ್ಬೊಬ್ಬ ಮಹಾಮಹಿಮರ ಅವತಾರವಾಗುತ್ತಲೇ ಇದೆ. ಇಂದಿನ ಅಜ್ಞಾನಮಯ ಜಗತ್ತನ್ನು ಜಾಗೃತಿಸಲು ಮಾತಾಜಿಯವರ ಅವತಾರವಾಗಿದೆ. ಜಂಗಮ ದೀಕ್ಷೆ ಪಡೆದ ಮಾತಾಜಿ, ತ್ಯಾಗ, ಜ್ಞಾನ, ಆದರ್ಶ ಸೇವೆಗಳ ಪಾವಿತ್ರ್ಯ ಬದುಕಿನ ದೀಕ್ಷೆಯನ್ನು ಕೈಗೊಂಡರು. ಕ್ರಾಂತಿ ಕಿಡಿ ಅಲ್ಲಿಂದಲೇ ಹತ್ತತೊಡಗಿತು. ನಮ್ಮ ಶರಣರು, ಕೇವಲ ವಚನಗಳನ್ನು ಬರೆಯಲಿಲ್ಲ, ಬದುಕಿದವರು. ಅಂದರೆ ವಚನಗಳು ಇಂದು ಏನನ್ನು ಹೇಳುತ್ತಿವೆಯೋ ಅದನ್ನೇ ಅವರು ಬದುಕಿ ತೋರಿ, ಆದರ್ಶಮಯ ಬದುಕನ್ನು ಜನರೆದುರು ತೆರೆದಿಟ್ಟರು. ಸ್ತ್ರೀಗೆ ತಮ್ಮಂತೆ ಸಮಾನ ಹಕ್ಕುಗಳನ್ನು ಕೊಟ್ಟಿದ್ದರು. [ಇಂದಿಗೂ ನಮ್ಮಲ್ಲಿ ಕೆಲವರಲ್ಲಿ ಸ್ತ್ರೀಯು ಶೂದ್ರಳಾಗಿಯೇ ಉಳಿದಿದ್ದಾಳೆ. ಅವಳಿಗೆ ಅಧ್ಯಾತ್ಮದಲ್ಲಿ ಪಾಲಿಲ್ಲ.] ಗುರುವಿನ ಸ್ಥಾನಕ್ಕೇರಲು ಅವಳಿಗೆ ಅರ್ಹತೆ ಇದೆ ಎಂಬುದನ್ನು ತೋರಿಸಿದ್ದರು. ಅದನ್ನು ಬರೀ ಬಾಯಿಮಾತಿನಲ್ಲೇ ಉಳಿಸುವುದಕ್ಕಿಂತ ಸಾಧಿಸಿ ತೋರಿಸಿ, ಗುರುವಾಗಲು ಲಿಂಗಭೇದವಿಲ್ಲ

ವೆಂಬುದನ್ನು ತೋರಿಸಿಕೊಟ್ಟಿದ್ದಾರೆ ಪೂಜ್ಯ ಮಾತಾಜಿ.

ಧರ್ಮ ಜಾಗೃತಿ ಮತ್ತು ಸಮಾಜದ ಉತ್ಥಾನಗಳ ಗುರಿ ಸಾಧನೆಗೆ ನಿಂತ ಮಾತಾಜಿಯವರು ಮೊದಲ ಹಂತವಾಗಿ ಧರ್ಮ ಪ್ರಚಾರಕ್ಕೆ ಕಂಕಣ ಬದ್ಧರಾದರು. ಇದರ ಪರಿಣಾಮ ವಿಶ್ವಕಲ್ಯಾಣ ಮಿಶನ್. ಶ್ರೋತೃಗಳನ್ನು ಮೋಡಿ ಮಾಡುವ ಆಯಸ್ಕಾಂತದ ಆಕರ್ಷಣೆ ಮಾತಾಜಿಯವರ ಕಂಚಿನ ಕಂಠದಲ್ಲಿ! ತತ್ತ್ವಜ್ಞಾನ ಹಾಗೂ ಮನಶ್ಶಾಸ್ತ್ರಗಳನ್ನು ಆಳವಾಗಿ ಅಭ್ಯಸಿಸಿರುವ ಮಾತಾಜಿ ಪ್ರತಿಯೊಂದು ಧಾರ್ಮಿಕ ವಿಚಾರವನ್ನು ವೈಜ್ಞಾನಿಕತೆಯ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಿ ಜನತೆಗೆ ಹಂಚುತ್ತಿದ್ದಾರೆ. ಸರಳ ಸುಂದರ ದೃಷ್ಟಾಂತಗಳಿಂದ ಸಾಮಾನ್ಯರ ಮನಸ್ಸನ್ನೂ ಸೆಳೆಯುತ್ತಿದ್ದಾರೆ. ಅಂದು ಬಸವಣ್ಣ, ಅಕ್ಕ ಮಹಾದೇವಿ, ಇತರ ವಚನಕಾರರು ಇದೇ ಕಾರ್ಯ ಕೈಗೊಂಡಿದ್ದರು. ಕೇವಲ ವಿದ್ವಜ್ಜನರ ಸೊತ್ತಾಗಿದ್ದ ಸಾಹಿತ್ಯ ಶಾರದೆಯನ್ನು ಶ್ರೀಸಾಮಾನ್ಯನ ಹೃದಯಗದ್ದುಗೆಯಲ್ಲಿ ಕೂರಿಸಲು ಸಂಸ್ಕೃತ, ಹಾಗೂ ಕಠಿಣ ಭಾಷೆಯಿಂದ ಬಿಡಿಸಿ ಸರಳೀಕರಣಗೊಳಿಸಿ ವಚನಾಮೃತವನ್ನು ಹರಿಸಿ ಜನಮನ ಗೆದ್ದರು. ಇಂದು ಮಾತಾಜಿ ಅದೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಜನತೆ ಮೂಢತನದಿಂದ ಸಂಪ್ರದಾಯಕ್ಕೆ ಶರಣಾಗಿ ಒಂದು ಧರ್ಮವನ್ನು ಅಪ್ಪಿಕೊಳ್ಳುವುದರಲ್ಲಿ ಯಾವ ಸಾರ್ಥಕತೆಯೂ ಇಲ್ಲ. ಧರ್ಮವನ್ನೂ ಒರೆಗಲ್ಲಿಗೆ ತಿಕ್ಕಬೇಕು ; ಮೂಢತನ, ಸಂಪ್ರದಾಯಗಳಿಗೆ ಬಲಿಯಾಗದೆ ಒಳಗಣ್ಣು ತೆರೆದು ನಿಜವಾದ ಮಾನವ ಧರ್ಮವನ್ನರಿತು, ಮಾನವರಾಗಿ ಬದುಕಬೇಕು ಎಂಬುದನ್ನು ತಮ್ಮ ದಿವ್ಯವಾಣಿಯಿಂದ ಅಮರವಾಗಿಸುತ್ತಿದ್ದಾರೆ. ಬಸವಣ್ಣ, ಅಕ್ಕನವರ ದಿವ್ಯ ಭವ್ಯ ವ್ಯಕ್ತಿತ್ವಗಳನ್ನು ಜನಮನದ ಗದ್ದುಗೆಯಲ್ಲಿ ಸ್ಥಾಪಿಸುತ್ತಿದ್ದಾರೆ.

ಧರ್ಮ ಕ್ರಾಂತಿಯನ್ನಷ್ಟೇ ಮಾಡುತ್ತಿಲ್ಲ. ಜೊತೆಗೆ ರಾಷ್ಟ್ರಕ್ಕಾಗಿ ತ್ಯಾಗ ಮಾಡಬೇಕು ಎಂಬ ಸೇವಾಭಾವವನ್ನು ಜಾಗೃತಗೊಳಿಸುತ್ತಿದ್ದಾರೆ. ಬಸವನ ಬೀಡಿನಿಂದ ಆಂಗ್ಲನಾಡಿನ ವರೆಗೂ ಇವರ ವಾಗ್ಝರಿ ಹಬ್ಬಿದೆ. ಸಮುದ್ರದ ತರಂಗಗಳಂತೆ ಮೇಲಿಂದ ಮೇಲೆ ಪ್ರವಚನಗಳು ಸಾಗಿವೆ. ಒಮ್ಮೆ ಅವರ ಪ್ರವಚನ ಕೇಳಿದವರು ಎಂದಿಗೂ ಅವರ ಪ್ರಭಾವದಿಂದ ದೂರಾಗಲಾರರು; ಆಯಸ್ಕಾಂತ ಶಕ್ತಿ ಇವರದು. ಹತ್ತಿರ ಬಂದವರನ್ನೆಲ್ಲ ಎಳೆದುಕೊಂಡು ಬಿಡುತ್ತಾರೆ. ಇದೀಗ ಶಿವಮೊಗ್ಗದಲ್ಲಿ ನಡೆಯುತ್ತಿರುವ ಪ್ರವಚನವೇ ಸಾಕು ಉದಾಹರಣೆಗೆ. ಜನಸಾಗರಕ್ಕೆ ಕೊನೆಯೇ ಇಲ್ಲ, ದಿನದಿಂದ ದಿನಕ್ಕೆ ಜನ ಹೆಚ್ಚುತ್ತಿದ್ದಾರೆ. ಜ್ಞಾನದಾಹವು ಕೇಳಿದಂತೆಲ್ಲಾ ಹೆಚ್ಚಾಗುತ್ತಿದೆ. ಅದರಲ್ಲೂ ಸ್ತ್ರೀ ಸಮೂಹ ಹಿಂದೆ ಯಾವ ಕಾರ್ಯಗಳಿಗೂ ಈ ರೀತಿ ಸೇರಿರಲಿಲ್ಲ; ಅಂತಹ ಜನಸಂದಣಿ ! ಜಾತಿ ಭೇದಗಳಿಲ್ಲ. ಹಿರಿ-ಕಿರಿಯರೆಂಬ ಭಾವವಿಲ್ಲದೇ ಒಂದೇ ಸಮನಾಗಿ ಜನ ಮಾತೆಯವರ ದರ್ಶನಕ್ಕೆ, ಪ್ರವಚನಕ್ಕೆ ಧಾವಿಸುತ್ತಿರು

ವರು. ಪ್ರವಚನ ಕೇಳುತ್ತಿದ್ದಂತೇ ನಮ್ಮ ಮಹಿಳೆಯರ ತಲೆಯಲ್ಲಿ ಜಿಡ್ಡುಗಟ್ಟಿದ್ದ ಅಸಹಾಯ ಮನೋಭಾವ ತೊಳೆದು ಹೋಗುತ್ತಿದೆ. ಅವರಲ್ಲೂ ವಿಚಾರಕ್ರಾಂತಿ ಮೊಳಕೆಯೊಡೆಯುತ್ತಿದೆ. (ತಮ್ಮ ಮಹಿಳೆಯರಲ್ಲಿ ಮತ್ತು ಸಮಾಜದಲ್ಲಿ ವೈಚಾರಿಕ ಬೆಳವಣಿಗೆಗೆ ಕಾರಣರಾದ ಮಾತಾಜಿಯವರ ಬಗ್ಗೆ ಇನ್ನೂ ಮೂಢ ಸಂಪ್ರದಾಯಕ್ಕೆ ಶರಣಾಗಿರುವ ಕೆಲವರು ಅಪಪ್ರಚಾರ ಮಾಡುತ್ತಿರುವುದರಲ್ಲಿ ತಪ್ಪೇನಿಲ್ಲ. ಏಕೆಂದರೆ ಅಪ್ಪ ನೆಟ್ಟ ಆಲಕ್ಕೆ ಇಂಥವರ ನೇಣು) ಭಕ್ತಿಯೆಂದರೆ ಏನು? ದೇವರೆಂದರೆ ಯಾರು ? ಧರ್ಮವೆಂದರೆ ಏನೆಂಬುದರ, ಸತ್ಯದ ಸಾಕ್ಷಾತ್ಕಾರ ಅವರಿಗೆ ಆಗುತ್ತಿದೆ. ವಿವಿಧ ಮತಗಳ ವ್ಯಕ್ತಿಗಳು ಒಟ್ಟಾಗಿ ಇಂತಹ ಧರ್ಮಪ್ರಸಾರದ ಪ್ರವಚನ ಕೇಳುತ್ತಿರುವುದು ಇದೇ ಮೊದಲಿರಬಹುದು. ಮೊನ್ನೆ ಪ್ರವಚನದಿಂದ ವಾಪಸ್ಸು ಬರುತ್ತಿರುವಾಗ ನನಗೆ ಒಬ್ಬ ಪ್ರಸಿದ್ಧ ಮಹಿಳಾ ವೈದ್ಯರು ಹಾಗೂ ಅವರ ಮಕ್ಕಳು ಸಿಕ್ಕರು. ನಾವೆಲ್ಲಾ ಅವರನ್ನು 'ಆಂಟಿ' ಎನ್ನುತ್ತೇವೆ. ಅವರು ಕ್ರೈಸ್ತ ಧರ್ಮೀಯರು.

"ಎಲ್ಲಿಗೆ ಹೋಗಿದ್ರಿ ಆಂಟಿ ?"
"ಮಾತಾಜಿಯವರ ಭಾಷಣಕ್ಕೆ"
"ನಿಮಗೆ ಹಿಡಿಸ್ತಾ ಆಂಟಿ ?"

"ಮೊನ್ನೆ ಅಲ್ಲಿ ಬರ್ತಾ ಇದ್ವಿ .... ಆಗ ಸುಮ್ಮನೆ ಕೇಳೋಣ ಅಂತ ಹೋದೆ. ಐದು ನಿಮಿಷ ಕೇಳೋಣ ಅಂದುಕೊಂಡವಳು ಪೂರ್ತಿ ಆಗುವವರೆಗೆ ನಿಂತೆ ನೋಡು. ಈಗಲೋ ದಿವಸಾ ನನ್ನ ಮಗಳನ್ನೂ ಕರಕೊಂಡು ಹೋಗ್ತೀನಿ. ಅದೆಂತಹ ಶಕ್ತಿ ಕೊಟ್ಟಿದ್ದಾನಮ್ಮ ದೇವರು ಆ ಮಹಾತಾಯಿಗೆ ! ಎಷ್ಟು ತಿಳಕೊಂಡಿದಾರೆ ; ಎಷ್ಟು ಚೆನ್ನಾಗಿ ಸ್ಟಡಿ ಮಾಡಿದಾರೆ! ನಾನಿದೇ ಫಸ್ಟ್ ಟೈಮ್ ಇಂತಹ ವಿಚಾರ ತುಂಬಿರೋ ಧಾರ್ಮಿಕ ಭಾಷಣ ಕೇಳುತ್ತಿರೋದು" ಎಂದರು- ವಯೋವೃದ್ಧರೆನಿಸಿದ, ಬಿಡುವಿಲ್ಲದೆ ಸದಾ ಕಾಯಕದಲ್ಲೇ ತೊಡಗಿ ಅದರಲ್ಲೇ ತೃಪ್ತಿ ಕಾಣುವ ; ರೋಗಿಗಳನ್ನು ಮಕ್ಕಳಂತೆ ಪ್ರೀತಿಸುವ ಆ ವೈದ್ಯರು. ಹೀಗೆ ಎಲ್ಲ ಜಾತಿ ಮತ ಪಂಥ ಧರ್ಮಗಳ ಮುಮುಕ್ಷುಗಳನ್ನು, ಪಂಡಿತ-ಪಾಮರ, ಅಬಾಲ ವೃದ್ಧರಾದಿಯಾಗಿ ಎಲ್ಲ ಬೌದ್ಧಿಕ ಸ್ತರಗಳ ಜನತೆಯನ್ನು ಆಕರ್ಷಿಸುವ ಪ್ರಖರ ವ್ಯಕ್ತಿತ್ವ ಪೂಜ್ಯ ಮಾತಾಜಿಯವರದು ಎಂದರೆ ಉತ್ಪ್ರೇಕ್ಷೆಯಾಗದು. ಈ ಚೇತನ ಬಹುಕಾಲ ಬದುಕಿ ಬಾಳಲೆಂಬುದೊಂದೇ ನಮ್ಮ ಹೃತ್ಪೂರ್ವಕ ಬೇಡಿಕೆ- ಆ ಮಹಾದೇವನಲ್ಲಿ.

* *

ಜ್ಞಾನ ತರಂಗಿಣಿ ಮಾತಾಜಿ

—ಶ್ರೀ ಹೆಚ್. ಎಂ. ಲಕ್ಷ್ಮೀನಾರಾಯಣ ಶೆಟ್ಟಿ

ಸೆಕ್ರೆಟರಿ, ಕರ್ನಾಟಕ ಆರ್ಯವೈಶ್ಯ ಮಹಾಸಭಾ, ಬೆಂಗಳೂರು - 4

ಜಗದ್ಗುರು ಮಾತೆ ಮಹಾದೇವಿಯವರ ಬಗ್ಗೆ ಅನೇಕ ಬಾರಿ ಭಿನ್ನ ಭಿನ್ನ ಅಭಿಪ್ರಾಯಗಳನ್ನು ಕೇಳಿದ್ದೆ. ಆದರೆ ಅವರ ದರ್ಶನ ಹಾಗೂ ಪ್ರವಚನ ಕೇಳುವ ಭಾಗ್ಯ ಒದಗಿದ್ದು ಅವರು ಶಿವಮೊಗ್ಗಾಕ್ಕೆ ದಯಮಾಡಿಸಿದಾಗಲೇ. ಶಿವಮೊಗ್ಗಾ ನಗರದಲ್ಲಿ 2 - 3 ದಿನ ಪ್ರವಚನ ಕೇಳಿದ ನಂತರ ಒಂದು ದಿನ ನಾನು ಮತ್ತು ನನ್ನ ಶ್ರೀಮತಿ ಹೋಗಿ ಅವರ ಬೀಡಾರದಲ್ಲಿ ಸುಮಾರು ಒಂದು ಗಂಟೆಯವರೆಗೆ ಪ್ರಚಲಿತ ಅನೇಕ ವಿಷಯಗಳ ಬಗ್ಗೆ ಮಾತನಾಡುವ ಸದವಕಾಶ ದೊರೆಯಿತು. ಹಾಗೂ ಅವರು ಬರೆದ ಪುಸ್ತಕಗಳನ್ನು ಓದುವ ಸುಯೋಗವು ಬಂತು. ನಮ್ಮ ಕುಲಮಾತೆ ಶ್ರೀ ಕನ್ನಿಕಾ ಪರಮೇಶ್ವರಿ ಅಮ್ಮನವರ ಬಗ್ಗೆ ಅವರು ಅಭಿಪ್ರಾಯ ವ್ಯಕ್ತ ಪಡಿಸಿದರೆನ್ನಲಾದ ಕೆಲವು ಅಪಪ್ರಚಾರಗಳ ಬಗ್ಗೆ ಮಾತನಾಡಿದಾಗ "ಅನ್ಯದೇಶದ ಸಾಧು ಸಂತರ ಬಗ್ಗನೇ ನಾವು ಗೌರವ ತೋರಿಸುತ್ತಿರುವಾಗ, ಹಿಂದು ದೇಶದಲ್ಲಿ ಆಗಿ ಹೋದ ಹಿಂದು ಸಂಸ್ಕೃತಿಯ ವಿಭೂತಿಗಳ ಬಗ್ಗೆ ತಪ್ಪು ಭಾವನೆಗಳು ತಮ್ಮಲ್ಲಿ ಇಲ್ಲವೆಂತಲೂ, ಜನವರಿ ತಿಂಗಳ ಕಲ್ಯಾಣ ಕಿರಣದಲ್ಲಿ ಈ ಬಗ್ಗೆ ಸ್ಪಷ್ಟೀಕರಣ ಮಾಡುವುದಾಗಿಯೂ" ಹೇಳಿದರು. ಅದರಂತೆ ಕೊಟ್ಟಿದ್ದಾರೆ. ನಮ್ಮ ವೈಶ್ಯ ಜನಾಂಗದಲ್ಲಿ ಗುರು ಪರಂಪರೆ ಶ್ರೀ॥ ಸೋಮಯಾಜಿಗಳಿಗೆ ಮುಕ್ತಾಯಗೊಂಡಿರುವ ಕಾರಣವೇನೋ ತಿಳಿಯದು. ನಂತರ ಅನೇಕ ಬಾರಿ ಸಮಾಜದಲ್ಲಿ ಈ ಬಗ್ಗೆ ಪ್ರಶ್ನೆ ಬಂದಾಗಲೆಲ್ಲಾ ಗುರುಗಳನ್ನು ನಾವು ಮಾಡುವುದಲ್ಲ, ಸ್ವಯಂ ಗುರುವಾಗಿ, ಸನ್ಯಾಸಿಯಾಗಿ ತಾನೇ ತಾನಾಗಿ ಬರಲಿ. ಆಗ ಆ ಪೂಜ್ಯ ಸ್ಥಾನ ಅವರಿಗೇ ಕೊಡೋಣವೆಂದು ಹೇಳುತ್ತಲೇ ಬಂದಿದ್ದೇನೆ. ಈ ಭಾವನೆ ನನಗೆ ಇನ್ನೂ ಸರಿ ಎನಿಸಿದ್ದು ಪೂಜ್ಯ ಮಾತಾಜಿಯವರನ್ನು ನೋಡಿದಾಗ, ಮಾತನಾಡಿಸಿದಾಗ. ವೀರಶೈವರಾಗಲಿ ಅಥವಾ ಇತರೆ ಯಾರೇ ಆಗಲಿ ಇವರನ್ನು ಗುರುಗಳನ್ನಾಗಿ ಮಾಡಿಲ್ಲ. ಸ್ವಯಂ ಅವರ ಜನ್ಮ ಸಿದ್ಧವಾದ ಸ್ವಭಾವಕ್ಕೆ ಅನುಗುಣವಾಗಿ, ಪ್ರತಿಭೆಗೆ ಅನುಗುಣವಾಗಿ, ಜನ್ಮ ಜನ್ಮಾಂತರದ ಆಧ್ಯಾತ್ಮ ಚಿಂತನೆಯ ಫಲವಾಗಿ, ಸ್ವಯಂ ಗುರುಗಳಾದರು ಎಂಬುದು ಅವರನ್ನು ಅರ್ಥ ಮಾಡಿಕೊಂಡವರಿಗೆ ತಿಳಿದೀತು. ಟೀಕೆ ಟಿಪ್ಪಣಿಗಳೆಲ್ಲಾ ಕುಹಕ ಹಾಗೂ ಅಸೂಯೆ ಅಂತ ನನಗೆ ಮನವರಿಕೆಯಾಯಿತು. ಅವರ ವಿಶ್ವಧರ್ಮ ಪ್ರಚಾರವಂತೂ ನನಗೆ ತುಂಬಾ ಅನುಕರಣೀಯ

ವೆನಿಸಿತು. ನಮ್ಮ ದೇಶದಲ್ಲಿ ಹಿಂದು ಧರ್ಮ ಪತನವಾಯಿತು ಎಂದು ಕೆಲವರು ಭಾವಿಸಿದ್ದಾರೆ. ಇದು ತಪ್ಪು. ಸಾವಿರಾರು ವರ್ಷಗಳಿಂದ ಅನ್ಯಮತೀಯರ ಪ್ರಚಂಡ ಧಾಳಿಗೆ ಒಳಗಾದರೂ ಈ ಸಮಾಜ ತನ್ನ ಆಧ್ಯಾತ್ಮ ಮೌಲ್ಯಗಳನ್ನು ಉಳಿಸಿಕೊಂಡೇ ಬಂದಿದೆ. ಪ್ರತಿಯೊಬ್ಬ ಹಿಂದುವಿನ ರಕ್ತದಲ್ಲೂ ಇದೆ. ಆದರೆ ಎರಡು ನೂರು ವರ್ಷ ಗುಲಾಮಗಿರಿಯಲ್ಲಿ ಇದ್ದು ನಮ್ಮ ಅಜ್ಞಾನ ಬೆಳೆದು ಬಂದಿರುವುದರಿಂದ ನಾವು ಕಿಲುಬು ಹಿಡಿದ ತಾಮ್ರದ ಚಂಬಿನಂತೆ ಆಗಿದ್ದೇವೆ. ಈ ಕಿಲುಬನ್ನು ತೊಳೆದಾಗ ಚಂಬು ಹೇಗೆ ತನ್ನ ಪ್ರಕಾಶವನ್ನು ಬೆಳಗುತ್ತೋ ಹಾಗೆ, ನಮ್ಮಲ್ಲಿ ನಮ್ಮ ಮಾನಸಿಕ ಕಿಲುಬನ್ನು ಮಾತೆ ಮಹಾದೇವಿಯವರು ಮಾಡುವಂತಹ ಪ್ರವಚನಗಳಿಂದ ತೊಳೆದು ಸ್ವಚ್ಛ ಮಾಡಿದರೆ ಕೆಲವೇ ದಿನಗಳಲ್ಲಿ ಜಾಗೃತಿಯನ್ನು ಕಾಣಬಹುದು. ಈ ಮಹಾಕಾರ್ಯವನ್ನು ಮಾಡಬೇಕಾದರೆ ನಮ್ಮ ಗುರು ಪರಂಪರೆಗಳಿಂದ ಸಾಧ್ಯ. ಏಕೆಂದರೆ ನಮ್ಮಲ್ಲಿ ದೈವ - ಗುರು ಎನ್ನುವ ಭಾವನೆಗಳಿವೆ. ಆದ್ದರಿಂದ ಈ ಪರ್ವಕಾಲದಲ್ಲಿ ಪೂಜ್ಯ ಮಾತಾಜಿಯವರ ಧರ್ಮ ಪ್ರಚಾರ ತುಂಬಾ ಪರಿಣಾಮಕಾರಿ ಆಗುತ್ತಿರುವುದರಲ್ಲಿ ಸಂಶಯವೇ ಇಲ್ಲ. ಎರಡು ಮೂರು ಗಂಟೆ ಪ್ರವಚನ ಮಾಡುವ ಅವರ ಕಂಚಿನ ಕಂಠ, ಮೇಲಾಗಿ ಅವರು ಸಭೆಗೆ ಪರಿಣಾಮವಾಗುವಂತೆ ಸಾರ್ವಜನಿಕವಾಗಿ ಹೇಳುವ ಉಪಮಾನ - ಉಪಮೇಯಗಳು ಅನುಪಮವಾದುವುಗಳು. ಎಲ್ಲಾ ಧರ್ಮಗಳ ಬಗ್ಗೆ ಅವರು ತಿಳಿದುಕೊಂಡಿರುವುದು. ಅನೇಕ ಮತ ಗ್ರಂಥಗಳನ್ನು ಆಳವಾಗಿ ಅಭ್ಯಾಸ ಮಾಡಿರುವುದು ಅವರ ಪ್ರವಚನ ಕೇಳಿದರೆ ತಿಳಿದೀತು. ಗುರುಗಳು ಅಂದರೆ ನನಗೆ ಎಲ್ಲಿಲ್ಲದ ಪೂಜ್ಯ ಭಾವನೆ. ಆದರೆ ಮಠ ಹಿಡಿದ ಗುರುಗಳು, ಬಂಗಾರ, ಬೆಳ್ಳಿ ಪಲ್ಲಕ್ಕಿಯಲ್ಲೇ ಮೆರೆಯುವ ಗುರುಗಳೆಂದರೆ ನನಗೆ ಅಷ್ಟಕ್ಕಷ್ಟೆ! ದೇಶದಲ್ಲಿ ತಾವು ಜಗದ್ಗುರು ಎಂದು ಹೇಳಿಕೊಂಡು ಏನೇನೋ ರಾಜಕೀಯ ಮಾಡುವವರು, ಮಾತಾಜಿಯವರಂತೆ ಧರ್ಮ ಜಾಗೃತಿಯ ಬಗ್ಗೆ ಹಳ್ಳಿಹಳ್ಳಿಗೆ ಪಾದಯಾತ್ರೆ ಮಾಡಬಾರದೇಕೆ ಅನ್ನಿಸುತ್ತೆ. ಈ ದಿಶೆಯಲ್ಲಿ ಗುರುಗಳಿಗೆ ನಾವು ಸಹ ಕಂಡಕಂಡಲ್ಲಿ ಹೇಳುವುದನ್ನೇ ಅಭ್ಯಾಸ ಮಾಡಬೇಕು. ಆಗ ಅವರು ಅನಿವಾರ್ಯವಾಗಿಯಾದರೂ ಈ ಕೆಲಸಕ್ಕೆ ಕೈಹಾಕಿಯಾರು ಅನಿಸುತ್ತೆ. "ಮಾತೆ ಮಹಾದೇವಿಯವರು ಭಾರತದ ಹಳ್ಳಿಹಳ್ಳಿಗೂ ಹೋಗಲಿ, ಅವರ ಅಮರ ಸಂದೇಶ ಮೂಲೆ ಮೂಲೆಗೂ ತಲ್ಪಲಿ ಎಂಬುದೇ ನನ್ನ ಮಹದಾಸೆ. ಇಂತಹ ಪ್ರಥಮ ಮಹಿಳಾ ಜಗದ್ಗುರುವನ್ನು ಪಡೆದ ಕರ್ನಾಟಕ ಮಾತೆಯು ಧನ್ಯಳು. ನಾವೇ ಪುಣ್ಯವಂತರು. ದಯಾಮಯನಾದ ಭಗವಂತನು ಇವರಿಗೆ ಇವರ ದಾರಿಯಲ್ಲಿ ಶಕ್ತಿ - ಸಾಮರ್ಥ್ಯಗಳನ್ನು ಕೊಡಲಿ" ಎಂದು ಪ್ರಾರ್ಥಿಸುತ್ತೇನೆ.

— ಹೆಚ್. ಎಂ. ಲಕ್ಷ್ಮೀನಾರಾಯಣಶೆಟ್ಟಿ
ಮುಕ್ಕಾಂ : ನಲ್ಲೂರು.

೩೩ ನೆಯ ಜಯಂತಿ ಆಚರಿಸುತ್ತಿರುವ

ಮಮತಾಮೂರ್ತಿ ಪೂಜ್ಯ ಮಾತಾಜಿಯವರ ವರ್ಣಮಾಲಾ ಸ್ತುತಿ

ಅಭಯ ಪ್ರದಾಯಿನಿ ಮಾತಾಜಿ
ಆನಂದ ರೂಪಿಣಿ ಮಾತಾಜಿ
ಇಷ್ಟಲಿಂಗ ಪೂಜಕ ಮಾತಾಜಿ
ಈಶನ ಪ್ರಿಯ ಸತಿ ಮಾತಾಜಿ
ಉನ್ನತ ಗುಣಗಣೆ ಮಾತಾಜಿ
ಊರ್ಧ್ವಲೋಕ ನಿಲಯೆ ಮಾತಾಜಿ
ಋಷಿಗಣ ಪೂಜಿತೆ ಮಾತಾಜಿ
ೠಢಿ ವಿರೋಧಿ ಮಾತಾಜಿ
ಎಲ್ಲವನರಿದೆ ಮಾತಾಜಿ
ಏಳ್ಗೆಗೆ ದುಡಿದೆ ಮಾತಾಜಿ
ಐವರ ಮೆಟ್ಟಿದೆ ಮಾತಾಜಿ
ಒಲವನು ಇತ್ತೆ ಮಾತಾಜಿ
ಓಂಕಾರ ರೂಪಿಣಿ ಮಾತಾಜಿ
ಔದಾರ್ಯ ಶೋಭಿತೆ ಮಾತಾಜಿ
ಅಂಬಿಗಳಾದೆ ನೀ ಮಾತಾಜಿ
ಆಚಾರಭರಿತೆ ನೀ ಮಾತಾಜಿ
ಕರುಣಾ ಪೂರಿತೆ ಮಾತಾಜಿ
ಖಗಪತಿ ಶ್ರೀಸತಿ ಮಾತಾಜಿ
ಗಂಭೀರ ವದನೆ ಮಾತಾಜಿ
ಘನಶಿವ ಆಶ್ರಿತೆ ಮಾತಾಜಿ, ವಾ
ಙ್ಮಯ ಸರಸತಿ ಮಾತಾಜಿ
ಚಂದನ ಶೀತಲೆ ಮಾತಾಜಿ
ಛತ್ರ ವಿರಾಜಿತೆ ಮಾತಾಜಿ,
ಜಂಗಮ ಮೂರುತಿ ಮಾತಾಜಿ
ಝೇಂಕಾರ ಪ್ರಿಯೆ ಮಾತಾಜಿ, ಕು
ಞಗುಡುವರ ಮರ್ಧಿನಿ ಮಾತಾಜಿ
ಟಂಕಾಯುಧಧರಸತಿ ಮಾತಾಜಿ
ಠಾವನ್ನರಿದೆ ನೀ ಮಾತಾಜಿ
ಡಂಭಾಚಾರ ವಿರೋಧಿ ಮಾತಾಜಿ
ಢಕ್ಕಾಧರ ಸುತೆ ಮಾತಾಜಿ, ಗು
ಣಮಣಿ ಭೂಷಿತೆ ಮಾತಾಜಿ
ತಮಭಯ ನಾಶಿನಿ ಮಾತಾಜಿ
ಥಕ ಥಕ ಶಂಕರಿ ಮಾತಾಜಿ
ದಲಿತ ಪ್ರೀತೆ ಮಾತಾಜಿ
ಧರಣೀಧರ ಸತಿ ಮಾತಾಜಿ
ನಯನ ಮನೋಹರಿ ಮಾತಾಜಿ
ಪತಿತ ಪಾವನೆ ಮಾತಾಜಿ
ಫಣಿಧರ ಕಿಂಕರೆ ಮಾತಾಜಿ
ಬಸವ ಪ್ರಭು ಸುತೆ ಮಾತಾಜಿ
ಭಕ್ತ ವತ್ಸಲೆ ನೀ ಮಾತಾಜಿ
ಮತ್ಸರ ರಹಿತೆ ಮಾತಾಜಿ, ಮಾ
ಯವಿರಹಿತೆ ಮಾತಾಜಿ
ರಜತಾದ್ರಿ ವಾಸಿನಿ ಮಾತಾಜಿ
ಲಲಿತ ಸುಭಾಷಿಣಿ ಮಾತಾಜಿ
ವಂದಿತ ರಕ್ಷಕಿ ಮಾತಾಜಿ
ಶರಣ ಗಣಮಣಿ ಮಾತಾಜಿ
ಷಟಸ್ಥಲ ಬ್ರಹ್ಮ ಮಾತಾಜಿ
ಸರಸತಿ ರೂಪಿಣಿ ಮಾತಾಜಿ
ಹಸನ್ಮುಖ ನೇತ್ರೆ ಮಾತಾಜಿ, ಇ
ಳೆಗಿಳಿದಂಬೆಯೆ ಮಾತಾಜಿ
ಕ್ಷಮಾಗುಣ ಪೂರ್ಣೆ ಮಾತಾಜಿ.

೨. ಸಕಾರ ಮಾಲಾ ಸ್ತುತಿ

ಸರ್ವಧರ್ಮ ಸಮನ್ವಯಿ ಶ್ರೀಮಾತೆ
ಸಾಹಿತ್ಯ ವರ್ಧಿನಿ ಶ್ರೀಮಾತೆ
ಸಂಗೀತ ವಾಹಿನಿ ಶ್ರೀಮಾತೆ
ಸರಸ ವಿನೋದಿನಿ ಶ್ರೀಮಾತೆ
ಸರಳ ಜೀವಿತೆ ಶ್ರೀಮಾತೆ
ಸಂಗನ ಶರಣೆ ಶ್ರೀಮಾತೆ
ಸೌಮ್ಯವದನೆ ಶ್ರೀಮಾತೆ
ಸಕಲ ಸನ್ಮಂಗಳೇ ಶ್ರೀಮಾತೆ
ಸಾಹಿತ್ಯ ಶಾರದೆ ಶ್ರೀಮಾತೆ
ಸರ್ವೋಪಕಾರಿ ಶ್ರೀಮಾತೆ
ಸ್ತ್ರೀಕುಲ ರಕ್ಷಕಿ ಶ್ರೀಮಾತೆ
ಸಚ್ಚಿದಾನಂದ ಪ್ರಿಯೆ ಶ್ರೀಮಾತೆ.

ಮಮತೆಯ ಮಡಿಲಲ್ಲಿ
ಮಾತೆಯ ಅಡಿಯಲ್ಲಿ, ಭಕ್ತಿಯ ಅರ್ಪಣೆ

ಬಿ. ಕೆ. ಸುಮಂಗಳ, ಕುಂಸಿ, ಶಿವಮೊಗ್ಗ ಜಿಲ್ಲೆ.

೩. ಮಾತೆಯ ಚರಣಕೆ ನಮನ

ಶ್ರೀ ಮಾತೆಯ ಶ್ರೀ ಚರಣಕೆ
ನಮೋ ನಮೋ ಎಂಬೆನು
ಮಾತಾಜಿಯ ದೈವತ್ವಕೆ
ಶರಣಾಗತನಾದೆನು ||
ಹೊಮ್ಮಿ ಬಂದ ಶಿವವಾಣಿ
ನಿಮ್ಮ ವಚನವಾಯಿತು
ಚಿಮ್ಮಿ ಬಂದ ಆ ಬೆಳಕಲಿ
ಬೊಮ್ಮ ರೂಪು ಕಂಡಿತು ||
ನಿಮ್ಮ ವಚನ ದೀಪ್ತಿ ನಮಗೆ
ಮಾರ್ಗದರ್ಶಿ ಯಾಗಲಿ
ನಿಮ್ಮ ಕೃಪಾದೃಷ್ಟಿ ನಮಗೆ
ಸತ್ಯಶಕ್ತಿ ತುಂಬಲಿ ||
ಪಾಪ ಕಳೆದು ಪುಣ್ಯ ಬರಲಿ
ಲೋಕದಾ ಜನ ಬದುಕಲಿ
ನಿಮ್ಮ ವಚನ ಹೃದಯ ತುಂಬಿ
ದಿವ್ಯ ಶಾಂತಿ ನೀಡಲಿ ||
ಭವತಾರಿಣಿ ಶುಭಕಾರಿಣಿ
ಯಾಗಿ ಜಗಕೆ ಬಂದಿರಿ
ಶುದ್ಧಾತ್ಮರಿಗಭಯ ನೀಡಿ
ಭವ್ಯ ಕರೆಯ ಕೊಟ್ಟಿರಿ ||
ಮನುಜರೆಲ್ಲ ಒಂದೆ ಎಂಬ
ತಿಳಿವು ಜನಕೆ ನೀಡ್ದಿರಿ
ನಾವು ಭಾರತೀಯರೆಂಬ
ಭಾವ ತುಂಬಿ ನಡೆದಿರಿ ||
ಮೇಲು ಕೀಳು ಬಾಳಿನಲ್ಲಿ
ತಾನೆ ದೂರ ಸರಿದುವು
ವಿಶ್ವಮೈತ್ರಿ ಬಳ್ಳಿಯಲ್ಲಿ
ಪ್ರೇಮಪುಷ್ಪ ಅರಳ್ದವು ||
ಮಾತಾಜಿಯ ರೂಪದಲ್ಲಿ
ಓತು ಇಳಿದ ಅಕ್ಕ ನೀವು
ವಿಶ್ವಶಾಂತಿ ನೆಲೆಸಲಿಲ್ಲಿ
ಮಾಶಕ್ತಿಯಾಗಿ ಬಂದಿರಿ ||

ಲೇಖಕ : ಡಿ. ಸಿ. ಗೌಡಯ್ಯ
(ಕಲಾವಿದ) ಹಾಸನ.

ಸ್ಫುರಣ - ಕಿರಣ

ಸಂ : ಮಾತಾಜಿ

ಮಹಾತ್ಮರು – ನಿಂದಕರು

ಶಿವಮೊಗ್ಗೆಯಿಂದ ಸದ್ಭಕ್ತ ಪ್ರವಾಸಿಕರನ್ನು ಕರೆದುಕೊಂಡು ಬನವಾಸಿಗೆ ಹೋಗಿದ್ದೆವು. ಉಡುತಡಿ, ಬಳ್ಳಿಗಾವಿ, ಅನಿಮಿಷಾರಣ್ಯ ಮುಂತಾದವುಗಳ ಸಂದರ್ಶನ ಪೂರೈಸುವ ಹೊತ್ತಿಗೆ ಸಾಕಷ್ಟು ದಣಿವಾಗಿತ್ತು. ಕೆಂಪು ಧೂಳು ಕಾರಿಗೆ ಮೆತ್ತಿದಂತೆ, ಮೈಗೂ ಮುತ್ತಿತ್ತು. ಸುಳಿವ ತಂಗಾಳಿಯ ಮಧುರಾಲಿಂಗನದಲ್ಲಿ ಸಲಿಲದೇಹಿ ವರದೆ ಯಲ್ಲಿ ಮೀಯುವುದು ಯಾರಿಗೆ ಹಿತವಲ್ಲ! ನದಿಯಲ್ಲಿಳಿದು ಸ್ನಾನಕ್ಕೆ ತೊಡಗಿದೆನು. ಆದರೆ ಪುಟಾಣಿ ಮೀನುಗಳು ಬಂದು ಕಾಲನ್ನು ಕಚ್ಚ ತೊಡಗಿ ಗುಳುಗುಳು ಎನ್ನಿಸಿತು. 'ಹೊರಗೆ ಕಲ್ಲ ಮೇಲೆ ನಿಂತು ಮೀಯಿರಿ' ಎಂದಳು ಶಿಷ್ಯೆಯೋರ್ವಳು. "ಮೀನು ಗಳ ಕಡಿತ ಅಪಾಯ ಮಾಡುವುದಿಲ್ಲ. ಕಾಲಲ್ಲಿರುವ ಕೊಳೆಯನ್ನು ತಿಂದು ಸ್ವಚ್ಛ ಮಾಡುತ್ತದೆ. ಸ್ವಲ್ಪ ಗುಳುಗುಳು ಎಂದ ಮಾತ್ರಕ್ಕೆ ಮುಜುಗರ ಪಟ್ಟು ಹೊರಗೆ ಬರಬಾರದು" ಎಂದೆ. ಆಗ ಒಂದು ವಿಚಾರ ಸ್ಫುರಿಸಿತು. ಸಮಾಜಸೇವೆ, ಸಮಷ್ಟಿ ಜೀವನದ ಮಡುವಿನಲ್ಲಿ ನಿಂತಾಗ ಕೆಲವು ಕುತ್ಸಿತ ಬುದ್ಧಿಯ ಕ್ಷುಲ್ಲಕರು, ಕೆಲವೊಮ್ಮೆ ಉಂಡ ಮನೆಯ ಜಂತೆ ಎಣಿಸುವ ದ್ರೋಹಿಗಳು, ನಿಂದಾತ್ಮಕ ಮಾತನಾಡಿದಾಗ ನಾವು ಮುಜುಗರ ಪಡುವುದು ಸ್ವಾಭಾವಿಕ. ಹಾಗೆ ಮಾಡದೆ, ಮೀನುಗಳು ಕಾಲ ಕೊಳೆ ಯನ್ನು ತೆಗೆಯುವಂತೆ ಇವರೂ ಬಾಳ ಬನ್ನಗಳನ್ನು ಕಡಿಮೆ ಮಾಡುವ ಪುಣ್ಯಾತ್ಮರು ಎಂದು ಭಾವಿಸಿ, ತಾನು ಹಿಡಿದ ಸಮಾಜ ಸೇವೆ ಮತ್ತು ಸಾಧನೆಯ ಪಥದಲ್ಲಿ ಧೈರ್ಯ ವಾಗಿ ಮುಂದೆ ಸಾಗಬೇಕು.

ಸಾಧಕ – ಸಿದ್ಧಪುರುಷ

ಶಿವಾನಂದರು ಆಶ್ರಮದ ಸಾಧಕ ವೃಂದದಲ್ಲೊಬ್ಬರು. ಚಿಕ್ಕನಾಯಕನ ಹಳ್ಳಿ ಯಲ್ಲಿ ಪೂಜ್ಯ ಗುರೂಜಿಯವರ ಪ್ರವಚನ ನಡೆಯುವಾಗ, ಒಂದು ದಿನ ಪ್ರಸಾದಕ್ಕೆ

ಕುಳಿತಿದ್ದರು. ಊಟಕ್ಕೆ ನೀಡುವಾಗ ತುಪ್ಪವು ತಟ್ಟೆಯಲ್ಲಿ ಹೆಚ್ಚಾಗಿ ಜಾರಿ ಬಿದ್ದಿತು. ಅದನ್ನು ಕಲಸುವಾಗ ಕೈ ಎಲ್ಲ ಜಿಡ್ಡಾಯಿತು. ನಾಲಿಗೆ ಮಾತ್ರ ತಿನ್ನುವಾಗ ಜಿಡ್ಡಾಗಲಿಲ್ಲ. ಆಗ ನುಡಿದರು: ಎಷ್ಟೇ ತುಪ್ಪ ತಿಂದರೂ ನಾಲಿಗೆ ಜಿಡ್ಡಾಗಲಿಲ್ಲ, ಕೈ ಮಾತ್ರ ಜಿಡ್ಡಾಯಿತು. ಹಾಗೆಯೇ ಸಾಧಕರು ಮತ್ತು ಸಿದ್ಧ ಪುರುಷರು. ಖಾರ ಮುಟ್ಟಿದರೆ ಕೈ ಬಹಳ ಹೊತ್ತಿನ ತನಕ ಉರಿಯುತ್ತಲೇ ಇರುವುದು. ಆದರೆ ನಾಲಿಗೆ ಕ್ಷಣ ಕಾಲ ಉರಿದರೂ ಮತ್ತೆ ಕೆಲವು ಕ್ಷಣಗಳಲ್ಲೇ ಸರಿಯಾಗುವುದು. ಸಾಧಕರು ಮಾನಾಪಮಾನ, ಸುಖದುಃಖಗಳಿಗೆ ಬೇಗ ಈಡಾಗುವರು. ಸಿದ್ಧಪುರುಷರು ಸಮಚಿತ್ತದಿಂದ ಸ್ವೀಕರಿಸುವರು. ಕೈಯು ವಾತಾವರಣದ ಪ್ರಭಾವಕ್ಕೆ ತೀವ್ರವಾಗಿ ಒಳಗಾಗುವುದು; ನಾಲಿಗೆ ನಿರ್ಲಿಪ್ತವಾಗಿ ಕೆಲಸ ಮಾಡುವುದು. ಹಾಗೆಯೇ ಸಾಧಕರು ಪರಿಸರದ ಒತ್ತಡಕ್ಕೆ ಬೇಗ ಬಲಿಯಾಗುವರು, ಸಿದ್ಧಪುರುಷರು ತಮ್ಮ ವ್ಯಕ್ತಿತ್ವವನ್ನು ಬೇಗನೇ ಬಲಿಗೊಡುವುದಿಲ್ಲ.

ಆತ್ಮಜ್ಞಾನದರಿವು

ಒಮ್ಮೆ ಕಾರಲ್ಲಿ ಹೋಗುವಾಗ ವಿದ್ಯುತ್ ಬೆಳಕಿನ ವಾಹನ ನಿಯಂತ್ರಣ ವೃತ್ತದಲ್ಲಿ ನಿಂತೆವು. ಎಡಕ್ಕೆ ಬಲಕ್ಕೆ ನೇರಕ್ಕೆ ಹೋಗುವ ವಿವಿಧ ವಾಹನಗಳು ಬಂದು ಕಾಯುತ್ತ ನಿಂತವು. ಕೆಂಪು ದೀಪ ಉರಿಯುವವರೆಗೆ ಕಾಯುತ್ತಲಿದ್ದವು. ಅದು ಆರಿ ಹಸಿರು ಬೆಳಕು ಹತ್ತುತ್ತಲೇ ವಾಹನಗಳೆಲ್ಲ ತಮ್ಮ ತಮ್ಮ ದಾರಿಯಲ್ಲಿ ಓಡಿದವು. ಆಗ ನಾನು ನುಡಿದೆ: "ಹೀಗೆ ಜೀವನವೂ ಸಹ! ಎಲ್ಲಿಯವರೆಗೆ ಅಜ್ಞಾನದ ಕೆಂಪು ಬೆಳಕು ಉರಿಯುವುದೋ ಅಲ್ಲಿಯ ತನಕ ನಾನು, ನನ್ನದು, ಹೆತ್ತವರು, ಬಂಧುಗಳು ಎಂಬ ಮಮಕಾರದೊಡನೆ ಎಲ್ಲರೂ ಒಟ್ಟುಗೂಡುವುದು ಸಂಸಾರವೆಂಬ ವೃತ್ತದಲ್ಲಿ. ಯಾವಾಗ ದೈವೀಜ್ಞಾನದ ಹಸಿರು ಬೆಳಕು ಮೂಡುವದೋ ಆಗ ತಮ್ಮ ತಮ್ಮ ಆತ್ಮಾನ್ವೇಷಣೆಯ ದಾರಿಯಲ್ಲಿ ನಿರ್ಲಿಪ್ತರಾಗಿ ಆತ್ಮಜ್ಞಾನಿಗಳು ಸಾಗುವರು. ★

ಚಂದಾದಾರರಿಗೆ ಸೂಚನೆ

ಕೆಲವರು ನೇರವಾಗಿ ಆಶ್ರಮಕ್ಕೆ ಚಂದಾ ಹಣ ಕಳಿಸಿ, ಅಥವಾ ಪೂಜ್ಯ ಮಾತಾಜಿಯವರು, ಪೂಜ್ಯ ಗುರೂಜಿಯವರು ಪ್ರವಚನ ಮಾಡುವಾಗ ಅವರಲ್ಲಿ ಹಣ ಕೊಟ್ಟು ಚಂದಾದಾರರಾಗಿದ್ದರೆ ಪತ್ರಿಕೆ ತಪ್ಪದೆ ಕಳಿಸಲ್ಪಡುವವು. ಬೇರಾರಾದರೂ ಮಧ್ಯಸ್ಥಿಕೆದಾರರಲ್ಲಿ ಚಂದಾ ಹಣ ಕೊಟ್ಟಿದ್ದು, ಆ ಹಣ ಕಾರ್ಯಾಲಯಕ್ಕೆ ತಲುಪಿರದಿದ್ದರೆ ಪತ್ರಿಕೆಗಳನ್ನು ಉಚಿತವಾಗಿ ಕಳಿಸುವುದಿಲ್ಲ. ಆದ್ದರಿಂದ ಹಾಗೇನಾದರೂ ಬೇರೆಯವರ ಕೈಲಿ ಕೊಟ್ಟಿದ್ದರೆ ಅವರು ಕಾರ್ಯಾಲಯಕ್ಕೆ ಹಣ ಕಳಿಸಲು ಒತ್ತಾಯ ಮಾಡಬೇಕು. ಹಣ ಮುಟ್ಟಿದ ನಂತರ ಮಾತ್ರ ನಿಮಗೆ ಪತ್ರಿಕೆ.

ವ್ಯವಸ್ಥಾಪಕರು.

ವಿಶ್ವಕಲ್ಯಾಣ ಮಿಷನ್

(ರಿಜಿಸ್ಟರ್ಡ್ ಚಾರಿಟಬಲ್ ಟ್ರಸ್ಟ್)

ವಿದ್ಯಾಸಂಸ್ಥೆಯ ಸ್ಥಾಪನೆ

ಸಮಾಜದ ಸರ್ವಾಂಗೀಣ ಉನ್ನತಿ ಮತ್ತು ನೈತಿಕ-ಧಾರ್ಮಿಕ ಉತ್ಥಾನಗಳನು ಗುರಿಯಾಗಿರಿಸಿಕೊಂಡ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ರಿಜಿಸ್ಟರ್ಡ್ ಚಾರಿಟಬಲ್ ಟ್ರಸ್ಟ್ ಇದ್ದು, ಇನ್‌ಕಮ್ ಟ್ಯಾಕ್ಸ್ ಆಕ್ಟ್ 12 A, 1961 ಪ್ರಕಾರ, ಸಂ. B II, V. 63 ರಿಜಿಸ್ಟರ್ ಆಗಿದೆ.

ಧರ್ಮ ಸಂಸ್ಥೆಗಳ ಅವಿಭಾಜ್ಯ ಅಂಗ ಗುರುಕುಲ ಶಿಕ್ಷಣ ಪದ್ಧತಿ ಮತ್ತು ವೈದ್ಯಕೀಯ ಸೇವೆ ಎಂದರಿತು ಶ್ರೀ ರಾಮಕೃಷ್ಣ ಮಿಷನ್ ವಿದ್ಯಾಶಾಲೆಯ ಮಾದರಿಯಲ್ಲಿ ಒಂದು ರೆಸಿಡೆನ್ಸಿಯಲ್ ಪ್ರೌಢಶಾಲೆ ತೆರೆದು, ಉನ್ನತ ಮಟ್ಟದ ಇಂಗ್ಲಿಷ್-ಕನ್ನಡ ಶಿಕ್ಷಣ ಕೊಡಲು ಉದ್ದೇಶಿಸಿದೆ ಈ ಸಂಸ್ಥೆ. ಪ್ರಸ್ತುತ ಉದ್ದೇಶದ ಸಫಲತೆಗಾಗಿ ಮೈಸೂರು-ಬೆಂಗಳೂರು ರಸ್ತೆಯ ಮೇಲೆ ಹತ್ತಾರು ಎಕರೆಗಳ ಕ್ಷೇತ್ರವೊಂದನ್ನು ಆರಿಸಿಕೊಂಡಿದ್ದು ಅಲ್ಲಿ ರೆಸಿಡೆನ್ಸಿಯಲ್ (ನಿಲಯ) ಶಾಲೆ, ಗ್ರಾಮಾಂತರ ವೈದ್ಯಕೀಯ ಸೇವಾ ಸಂಸ್ಥೆ, ಶ್ರೀ ಬಸವ ಮಂದಿರ, ಮುದ್ರಣಾಲಯ, ಸರ್ವಧರ್ಮ ಮಹಾಸಭಾ, ವನವಿಹಾರ ಸಂದರ್ಶನ ಸ್ಥಾನ-ಈ ಮುಂತಾದುವುಗಳನ್ನು ನಿರ್ಮಿಸಲು ವಿಶ್ವ ಕಲ್ಯಾಣ ಮಿಷನ್ ಹಿತೈಷಿಗಳು ಸಂಕಲ್ಪಿಸಿದ್ದಾರೆ. ಈ ಗುರಿ ಸಾಧನೆಗಾಗಿ ಲಕ್ಷಾಂತರ ರೂಪಾಯಿಗಳ ನೆರವನ್ನು ಸಾರ್ವಜನಿಕರು, ಸಂಸ್ಥೆಯ ಅಭಿಮಾನಿಗಳು, ಮತ್ತು ಸದ್ಭಕ್ತರಿಂದ ನಿರೀಕ್ಷಿಸಲಾಗಿದೆ.

ತನು-ಮನ-ಧನಗಳಿಂದ ಸೇವೆ ಸಲ್ಲಿಸಲು ಮುಂದೆ ಬರಲು ಕೋರಲಾಗಿದೆ. ಉಳಿದ ವಿವರಗಳಿಗೆ ಕೆಳಕಂಡ ವಿಳಾಸದೊಡನೆ ವ್ಯವಹರಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಅಧ್ಯಕ್ಷೆ. ಶ್ರೀ ಬಸವ ಗುರುಕುಲ ಸಮಿತಿ
24, ಎರಡನೆ ಬ್ಲಾಕು, ಕಾರ್ಡ್‌ರೋಡ್
ರಾಜಾಜಿನಗರ, ಬೆಂಗಳೂರು-560 010

ದೂರವಾಣಿ : 82335

ದೃಷ್ಟಾಂತ ಕಥೆ

ಮಮತೆಯ ಮಕ್ಕಳೇ,

ನಿಮಗೆ ಈ ಸಾರಿ ವೈಶಿಷ್ಟ್ಯ ಪೂರ್ಣವಾದ 'ತಾಯಿಯ ಕ್ರೌರ್ಯ'ದ ಕಥೆಯೊಂದನ್ನು ಹೇಳುವೆ. ಆಗ ಸ್ವಾತಂತ್ರ್ಯ ಚಳುವಳಿ ನಡೆದ ಕಾಲ. ಓರ್ವ ದೇಶ ಭಕ್ತ ಎಳೆ ಹರೆಯದಲ್ಲಿಯೇ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡತೊಡಗಿದ. ಬ್ರಿಟಿಷರ ವಿರುದ್ಧ ಕತ್ತಿ ಹಿರಿದಿದ್ದಾಗಲೇ ನಡೆದ ಒಂದು ಹೋರಾಟದಲ್ಲಿ ಮೃತನಾದ. ಸಣ್ಣ ವಯಸ್ಸಿನ ಮುದ್ದು ಹೆಂಡತಿ, ಒಂದೇ ಒಂದು ವರುಷದ ಕೂಸನ್ನು ಅಗಲಿ ಕೈಲಾಸವಾಸಿಯಾದ. ಆಕೆ ಧೀಮಂತಳು. ತನ್ನ ಪತಿಯು ವೀರಸ್ವರ್ಗವನ್ನಪ್ಪಿದನೆಂದು ಸಮಾಧಾನಿಸಿಕೊಂಡು ಮಗುವನ್ನು ಹೇಗೋ ಬೆಳೆಸತೊಡಗಿದಳು. ತ್ಯಾಗ-ಧೀಮಂತಿಕೆಗಳ ತವರು ಅವನಾಗಬೇಕೆಂದು ಸಂಕಲ್ಪಿಸಿದಳು. ಕೂಲಿನಾಲಿ ಮಾಡಿ ಸಂರಕ್ಷಿಸಿದಳು. ನಾಡಿಗೆ ಸ್ವಾತಂತ್ರ್ಯ ಬಂತು. ವರ್ಷಗಳು ಉರುಳಿದವು.

ಮಗ ವಿದ್ಯಾವಂತನಾದ. ತಾನೂ ರಾಜಕೀಯದಲ್ಲಿ ಪ್ರವೇಶಿಸ ತೊಡಗಿದ. ಒಂದು ದಿನ ಸಹಗೂಂಡಾಗಳೊಡನೆ ಸೇರಿ 'ನಗರ ಬಂದ್' ಆಚರಿಸುವ ನೆಪದಲ್ಲಿ ಅಂಗಡಿಗಳನ್ನು ಕೊಳ್ಳೆ ಹೊಡೆದು ಹಲವಾರು ಬೆಲೆಬಾಳುವ ಸೀರೆಗಳನ್ನು ತಂದು ತಾಯಿಗಾಗಿ ರಾಶಿ ಹಾಕಿದ. ಆ ಸಾಧ್ವಿಯು ಎಲ್ಲಿಯವೆಂದು ಕೇಳಿದಾಗ ಅಟ್ಟಹಾಸದಿಂದ ನಕ್ಕು ಹೇಳಿದ. ಆಕೆಯ ರಕ್ತವು ಕುದಿಯಿತು. ತನ್ನ ಗಂಡ ದೇಶಕ್ಕಾಗಿ ಮನೆ ಮಠ ತ್ಯಜಿಸಿದವನು; ಆಸ್ತಿ ಕಳೆದುಕೊಂಡವನು. ಇವನಾದರೋ ದೇಶದ ಹೆಸರಿನಲ್ಲಿ ಮನೆ ಕಟ್ಟಿಕೊಂಡು, ಆಸ್ತಿ ಸಂಗ್ರಹಿಸುವವ. ತಾಯಿ ವ್ಯಾಕುಲಿತಳಾದಳು.

ಅನಿತರಲ್ಲಿ ಅವನು ಎಲ್ಲಿಗೋ ಫೋನ್ ಮಾಡುತ್ತಿದ್ದ. ತಾಯಿ ಅದನ್ನು ಗಮನಿಸುತ್ತಿಲ್ಲವೆಂದು ಭಾವಿಸಿ, ಸರಸರನೆ ಮನೆಬಿಟ್ಟು ಹೊರಟ. ತಾಯಿ ಪರಿಶೀಲಿಸಿ ಸರಿರಾತ್ರಿಯಲ್ಲಿ ಮಫ್ಲರ್ ಸುತ್ತಿಕೊಂಡು ಹೊರಬಿದ್ದಳು. ಗಾಢವಾದ ಕತ್ತಲೆ. ಒಂದು ಪಿಸ್ತೂಲನ್ನು ಬಚ್ಚಿರಿಸಿಕೊಂಡಳು. ರೇಲ್ವೆ ಹಳಿಯ ಬದಿಯಲ್ಲಿ ನಿಂತವಳೇ

ಯಾರನ್ನೋ ನಿರೀಕ್ಷಿಸಿದಳು. ವ್ಯಕ್ತಿಯು ಬರುತ್ತಿರುವುದನ್ನು ಗಮನಿಸಿ ಗುಂಡು ಹಾರಿಸಿದಳು. ಅವನು ಚೀರಿಕೊಂಡು ಬಿದ್ದ. ಆಕೆ ಸರಸರನೆ ಅವನ ಬಳಿ ಹೋಗಿ ವಾತ್ಸಲ್ಯದಿಂದ ಮುದ್ದಿಕ್ಕಿ, ನೇರವಾಗಿ ಪೋಲೀಸ್ ಠಾಣೆಗೆ ನಡೆದು ಶರಣಾದಳು.

ಹೆತ್ತ ಮಗನನ್ನು ಕೊಂದ ಈಕೆ ಎಂತಹ ರಕ್ಕಸಿ ಇರಬಹುದೆಂದು ನ್ಯಾಯಾಲಯದ ಆವರಣದಲ್ಲಿ ಜನ ಕುತೂಹಲದಿಂದ ಸೇರಿದರು, ವಿಚಾರಣೆಯ ದಿನ.

"ಹಡೆದ ತಾಯಿಯಾದ ನೀನು ಇಂತು ಮಾಡಬಹುದೆ? ನಿನ್ನಲ್ಲಿ ಮನುಷ್ಯತ್ವವಿಲ್ಲವೆ?" ನ್ಯಾಯವಾದಿಗಳ ಪ್ರಶ್ನೆ.

ದಿಟ್ಟಳಾಗಿ ಉತ್ತರಿಸಿದಳು, "ಅಂದು ನನ್ನ ಮಗ ಉಗಿಬಂಡಿಯ ಹಳಿ ತಪ್ಪಿಸಲು ಸಿದ್ಧನಾಗಿ ನಡೆದಿದ್ದ. ನನ್ನೊಬ್ಬ ಮಗನ ವಾತ್ಸಲ್ಯಕ್ಕಾಗಿ ನೂರಾರು ಜೀವಗಳನ್ನು ಬಲಿಗೊಡಲು ಸಿದ್ಧಳಿರಲಿಲ್ಲ. 'ಪೋಲೀಸರಿಗೆ ಮುನ್ಸೂಚನೆ ನೀಡಬಹುದಿತ್ತು' ಎಂದು ನೀವು ಕೇಳಬಹುದು. ಆದರೆ ರಾಷ್ಟ್ರವೀರ ಪತಿಯ ಹೆಂಡತಿಯಾಗಿ ಆತ್ಮ ಸಂತೋಷದಿಂದ ಬಾಳಿದ ನಾನು ರಾಷ್ಟ್ರದ್ರೋಹಿ ಮಗನ ತಾಯಾಗಿ ಬಾಳಲು ಸಾಧ್ಯವಿರಲಿಲ್ಲ. ದೇಶ ರಕ್ಷಕ ಸೇವಕನನ್ನು ನಾನು ತಯಾರಿಸಲಿಚ್ಛಿಸಿದ್ದೆನೇ ವಿನಾ ಭಕ್ಷಕನನ್ನಲ್ಲ. ಆದ್ದರಿಂದ ನನ್ನ ಕರ್ತವ್ಯ ಮಾಡಿರುವೆ. ಯಾವ ಶಿಕ್ಷೆ ಬೇಕಾದರೂ ನೀಡಿ."

ಸಭೆಯು ದಂಗಾಯಿತು. ಆಕೆಗೆ ಬಿಡುಗಡೆ ದೊರೆಯಿತು.

ತತ್ತ್ವ :- ವ್ಯಕ್ತಿಗತ ಪ್ರೇಮ ವಾತ್ಸಲ್ಯಗಳಿಗಿಂತ ಸಮಷ್ಟಿ ಹಿತ ದೊಡ್ಡದು. ವೈಯಕ್ತಿಕ ಭಾವನಾ ತೃಪ್ತಿಗಾಗಿ ಸಮಷ್ಟಿಯ ಶಾಂತಿಯನ್ನು ಬಲಿಗೊಡಬಾರದು.

ಇದನ್ನರಿತು ಸಮಾಜ - ರಾಷ್ಟ್ರಗಳ ಚಿಂತನೆ ಮಾಡುವುದೇ ನಿಜವಾದ ಪ್ರಜೆಯ ಲಕ್ಷಣ.

ನಿಮ್ಮೊಲವಿನ,

ತ್ರಿನೇತ್ರಿ.

ಯಾವುದು ಶಾಶ್ವತ?

ಫ್ರಾನ್ಸಿನ ಶ್ರೇಷ್ಠ ಚಿತ್ರಕಾರ ರೆನ್ವಾರ್ ಸಂಧಿವಾತದಿಂದ ಬಹಳ ಕಷ್ಟಪಡುತ್ತಿದ್ದ ಅಂಥ ನೋವಿನಲ್ಲೂ ಚಿತ್ರ ಬರೆಯಲು ಕುಂಚ ಹಿಡಿದು, ಮುಲುಗುತ್ತಲೇ ಬರೆಯುತ್ತಿದ್ದ.

"ಇಂಥಾ ನೋವಿನಲ್ಲೂ ಚಿತ್ರ ಬಿಡಿಸುವುದೇಕೆ. ಬಿಟ್ಟು ವಿಶ್ರಾಂತಿ ಪಡೆ." ಸ್ನೇಹಿತ ಹೇಳಿದ. "ಆದರೆ ಮಿತ್ರಾ, ದೇಹ ಅಳಿಯುತ್ತದೆ. ಕಲೆ ಉಳಿಯುತ್ತದೆ. ನೋವು ಸಾಯುತ್ತದೆ, ಚೆಲುವು ಅಮರವಾಗುತ್ತದೆ." ಎಂದು ರೆನ್ವಾರ್ ಉತ್ತರಿಸಿದ.

ಮಹಾಶಿವರಾತ್ರಿ—ಅರ್ಥ ಮತ್ತು ಆಚರಣೆ.

—ಜಗದ್ಗುರು ಮಾತೆ ಮಹಾದೇವಿ

ಭರತಭೂಮಿಯು ಪ್ರಾಗೈತಿಹಾಸಿಕ ಕಾಲದಿಂದಲೂ ಧರ್ಮಭೂಮಿ ಎಂದು
ಕೀರ್ತಿವೆತ್ತ ನಾಡಾಗಿದೆ. ಯಾವುದೇ ಜಾತಿಮತ ಪಂಥ ಭಾಷೆಗಳ ಸೀಮೆಗೊಳಪಡದೆ
ಸಮಸ್ತ ಹಿಂದೂಗಳು ಅಖಂಡ ಭಾರತದಲ್ಲಿ ಆಚರಿಸುವ ಏಕಮೇವಾದ್ವಿತೀಯ ಹಬ್ಬ
ವೆಂದರೆ ಮಹಾಶಿವರಾತ್ರಿ. ಆಯಾ ಜನಾಂಗಗಳವರು ತಮ್ಮ ಕುಲದೇವರುಗಳೆಂದು
ಕೆಲವು ವಿಭೂತಿ ಪುರುಷರನ್ನು ಆರಾಧಿಸಿದರೆ, ವಿಭಿನ್ನ ಎಲ್ಲ ಪರಂಪರೆಗಳ ಸಮಾನ ಗೌರ
ವಕ್ಕೆ ಪಾತ್ರನಾಗಿದ್ದಾನೆ, ಮಹಾಯೋಗಿ ಮಹಾದೇವ.

ಉಳಿದೆಲ್ಲ ಹಬ್ಬಗಳು ವೈಭವ, ಸಡಗರ, ವಿಶೇಷ ಊಟ–ಉಡುಗೆಗಳಿಂದ ವಿಶೇಷಿ
ತವಾಗಿದ್ದರೆ ಶಿವರಾತ್ರಿಯು ಸರಳತೆ, ಸಂಯಮ, ಅಂತರ್ಮುಖತೆ, ಸಾತ್ವಿಕತೆಗಳ
ಪ್ರತೀಕ. ಶ್ರದ್ಧೆ–ನಿಷ್ಠೆಗಳಿಂದ ಪ್ರತಿವರ್ಷವೂ ಆಚರಿಸಲ್ಪಡುವ ಮಹಾಶಿವರಾತ್ರಿ
ಬರುವುದು ಮಾಘ ಕೃಷ್ಣ ಚತುರ್ದಶಿಯಂದು. (ಈ ವರ್ಷ ಮಾರ್ಚ್ ೭ರಂದು ಬರ
ಲಿದೆ) ಈ ಹಬ್ಬದ ವಿಶೇಷ ಆಚರಣೆ ಉಪವಾಸ, ಜಾಗರಣೆ ಮತ್ತು ಅರ್ಚನೆ. ಉಪ
ವಾಸವೆಂದರೆ ನಿರಾಹಾರವೆಂಬುದು ಒಂದು ಅರ್ಥ. ಎರಡನೆಯದು 'ಸಮೀಪದಲ್ಲಿ
ವಾಸ' ಎಂಬರ್ಥ. ದಿನ ನಿತ್ಯ ತುಂಬುವ, ಎಷ್ಟು ತುಂಬಿದರೂ ಖಾಲಿಯಾಗುತ್ತಲೇ
ಇರುವ ತುತ್ತಿನ ಚೀಲದ ಜಂಜಡದಿಂದ ವಿಮುಖನಾಗಿ, ತನ್ನ ಶಕ್ತಿಯನ್ನು ದೇವನತ್ತ
ಕೇಂದ್ರೀಕರಿಸುವುದು ಈ ಉಪವಾಸದ ಉದ್ದೇಶ. ಕೇವಲ ನಾಲಿಗೆಯೊಂದನ್ನೇ ನಿರಾ
ಹಾರದಿಂದಿಟ್ಟರಲ್ಲ, ಉಳಿದ ಇಂದ್ರಿಯಗಳನ್ನೂ ತಂತಮ್ಮ ಆಹಾರಗಳಿಂದ ವಿಮುಖ
ಗೊಳಿಸಬೇಕು.

(ಆದರೆ ನಮ್ಮಲ್ಲಿ ಬಹುಪಾಲು ಜನ ಉಪ್ಪಿಟ್ಟು, ಬಾಳೆಹಣ್ಣು ಇತ್ಯಾದಿ ಭುಂಜಿಸಿ
ಉಪವಾಸ ಎಂಬುದು, ಎಂದಿಗಿಂತಲೂ ಹೆಚ್ಚಿನ ವೈವಿಧ್ಯಮಯ ತಿಂಡಿಗಳನ್ನು ಅಂದು
ಮಾಡಿ ಉಣ್ಣುವುದು ಉಪವಾಸದ ವಿಪರ್ಯಾಸ. ಅಲ್ಲದೇ ಎಂದೂ ಅಷ್ಟೊಂದು
ಕಾಡದಿರುವ ಹೊಟ್ಟೆ ಅಂದೇ ಹೆಚ್ಚು ರಚ್ಚೆ ಹಿಡಿಯುವುದು ಮತ್ತೊಂದು ವಿಶೇಷ)
"ಜಾಗರಣೆ" ಎಂದರೆ ನಿದ್ರಿಸದೆ ಎಚ್ಚರವಿರುವುದು. ಅದರ ಹಿನ್ನೆಲೆಯೂ ಸಹ, ಇಡೀ
ರಾತ್ರಿ ಧ್ಯಾನ–ಜಪ–ತಪಗಳಲ್ಲಿ ಕಳೆಯಬೇಕೆಂಬುದು ! ಇದರ ಲಕ್ಷಾರ್ಥ ಆತ್ಮಜಾಗೃತಿ.
ತನು, ಮನ, ವಾಕ್ಕು, ಬುದ್ಧಿ, ಆತ್ಮಗಳೆಲ್ಲವನ್ನೂ ಜಾಗೃತವಾಗಿರಿಸಿಕೊಂಡು ದೇವನ
ಧ್ಯಾನದಲ್ಲಿ ತೊಡಗಬೇಕೆಂಬುದು. ಬರಿ ಎಚ್ಚರವಿದ್ದರಲ್ಲ, ಜಾಗೃತವಿದ್ದು ಅರ್ಚನೆ
ಯಲ್ಲಿ ನಿರತನಾಗಬೇಕೆಂಬುದು ಮತ್ತೊಂದು ಉದ್ದೇಶ. ಹೀಗೆ ಒಟ್ಟಾರೆ ಶಿವರಾತ್ರಿಯ

ಆಚರಣೆ ಕೇವಲ ರೂಢಿಗತ ಹಬ್ಬವಷ್ಟೇ ಅಲ್ಲ, ಮಾನವನನ್ನು ನೈತಿಕ ಮತ್ತು ಆತ್ಮಿಕ
ವಾಗಿ ಮೇಲೆತ್ತುವ 'ಆತ್ಮಶುದ್ಧಿಯ ದಿನ'; ಸೃಷ್ಟಿಯು ಹಳತನ್ನು ಕಳಚಿ ಹೊಸತನ್ನು
ಹೊರುವಂತೆ, ತನ್ನನ್ನು ತಾನು ಪುನರ್ಜಾತನನ್ನಾಗಿ ಮಾಡಿಕೊಂಬ ಆತ್ಮದೈಸಿರಿಯ
ಹಬ್ಬ, ಉಳಿದವುಗಳಂತೆ ಕಾಯದೈಸಿರಿಯ ಹಬ್ಬವಲ್ಲ.

'ಶಿವ' ಶಬ್ದದ ಬಳಕೆ

'ಶಿವ' ಎಂಬ ಈ ಶಬ್ದವು ಎರಡು ಅರ್ಥದಲ್ಲಿ ಬಳಕೆಯಾಗುತ್ತಿದೆ. 1. ಯೋಗಿ
ವರೇಣ್ಯ ಶಿವ 2. ಪರಾತ್ಪರ ಪರವಸ್ತು ಪರಬ್ರಹ್ಮ. ಪರವಸ್ತುವನ್ನು ಅರ್ಚಿಸಿ,
ಸ್ತುತಿಸಿ, ಚಿಂತಿಸಿ, ಧ್ಯಾನಿಸಿ, ಅನುಭವಿಸಿ ಅಂದಿನ ಹಗಲು–ರಾತ್ರಿಗಳನ್ನು ದಿವ್ಯವಾಗಿ
ಕಳೆಯಬೇಕೆಂಬುದು ಶಿವರಾತ್ರಿ (Divine Night) ಯ ತಾತ್ತ್ವಿಕ ಸಂಕೇತವಾದರೆ,
ಅದಕ್ಕೆ ಐತಿಹಾಸಿಕ ಅರ್ಥ ಮತ್ತು ಆಚರಣೆ ಬಂದುದು ಯೋಗಿರಾಜ ಶಿವನ ಸಂಬಂಧ
ದಲ್ಲಿ. ಹೇಗೆ ಗಾಂಧೀಜಿಯ ಪುಣ್ಯ ತಿಥಿಯನ್ನು ಹುತಾತ್ಮರ ಆಚರಣೆಯನ್ನಾಗಿ, ರಾಧಾ
ಕೃಷ್ಣನ್ನರ ಜಯಂತಿಯನ್ನು ಶಿಕ್ಷಕರ ದಿನಾಚರಣೆಯನ್ನಾಗಿ:ಆಚರಿಸುತ್ತೇವೋ ಹಾಗೆ
ಮಹಾಯೋಗಿ ಶಿವನ ತಪಸ್ಸಾಧನೆಯ ದಿನವನ್ನು ಶಿವರಾತ್ರಿಯನ್ನಾಗಿ ಆಚರಿಸುತ್ತೇವೆ.

ಹಲವಾರು ಪುರಾಣಗಳನ್ನು ಓದಿದಾಗ ನಾನು ಸಂಗ್ರಹಿಸಿದ ಕೆಲವು ವಿಚಾರಗಳಿವು.
ಶಿವನು ಕಾಲ್ಪನಿಕ ಪೌರಾಣಿಕ ದೇವತೆಯಲ್ಲ. ಅವನೊಬ್ಬ ಐತಿಹಾಸಿಕ ಯುಗ ಪುರುಷ.
ಇತಿಹಾಸ, ಬರವಣಿಗೆಯ ಆರಂಭಕ್ಕೂ ಮೊದಲಿಗೇ ಕೀರ್ತಿವೆತ್ತ ಈ ಮಹಾವಿಭುವು
ಭಾರತೀಯ ಸಂಸ್ಕೃತಿಯಲ್ಲೇ ಅವಿನಾಶಿಯಾದಂತಹ ತನ್ನ ಸಾರ್ವಭೌಮತ್ವ ಸ್ಥಾಪಿ
ಸಿರುವ, ಹರಪ್ಪಾ-ಮೊಹೆಂಜೋದಾರೊ ಕಾಲದಲ್ಲೇ ಏಕಮೇವಾದ್ವಿತೀಯ ಆರಾಧ್ಯ
ವಸ್ತುವಾಗಿದ್ದ. ಗೌರಿ ಶಂಕರ ಶಿಖರವನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು
ರಾಜಕೀಯ ಸಾರ್ವಭೌಮತ್ವದೊಡನೆ ಧಾರ್ಮಿಕ ಪರಮೋಚ್ಚ ಸ್ಥಾನಗಳಿಸಿದ್ದ. ಈ
ಮಹಾದೇವನು ಜಗತ್ತಿನ ಇತಿಹಾಸದಲ್ಲಿ ನಮಗೆ ಕಾಣಸಿಗುವ ಮೊಟ್ಟ ಮೊದಲ
ಯೋಗಿ. ತನ್ನ ಯೋಗ ಸಾಮರ್ಥ್ಯದಿಂದಲೇ ಈ ಯೋಗಿರಾಜನು ಹಿಮಮಯ
ಪರ್ವತಗಳಲ್ಲಿ ದಿಗಂಬರನಾಗಿಯೇ ಇರಬಲ್ಲವನಾಗಿದ್ದ. (ನಿಸರ್ಗದ ಬದಲಾವಣೆ ದೃಷ್ಟಿ
ಯಿಂದ ಅಂದು ಅದು ಶೀತಲ ಪ್ರದೇಶವಾಗಿಲ್ಲದಿರಬಹುದು) ಇನ್ನು ಪ್ರತಿಭೆಯ ದೃಷ್ಟಿ
ಯಿಂದ ನೋಡಿದಾಗ ಅವನು ನಾದಯೋಗಿ, ನಾದಲೋಲ. ನೃತ್ಯ ಕಲೆಯಲ್ಲಿ ಅದ್ಭುತ
ಸಾಮರ್ಥ್ಯ ಹೊಂದಿದವನಷ್ಟೇ ಅಲ್ಲದೇ, ಆದಿ ನಾಟ್ಯಾಚಾರ್ಯ. ಇವನ ಮನೋಹರ,
ಲೀಲಾವಿನೋದ ನರ್ತನದಿಂದ ಸೃಷ್ಟಿಯ ಪ್ರಣಯಕ್ಕೆ ಸ್ಫೂರ್ತಿ, ರುದ್ರಭೈರವ ಉಗ್ರ
ನೃತ್ಯದಿಂದ ಸೃಷ್ಟಿನಾಟಕಕ್ಕೆ ಪ್ರಳಯದ ತೆರೆ ಎಂಬ ಭಾವ ಮೂಡಿದ್ದರೆ ತಪ್ಪೇನು. !
ಇಂತಹ ಮಹಾದೇವನು 'ಭೋಳಾ ಶಂಕರ' ಅಂದರೆ ಸಾತ್ವಿಕನು. ವಂಚನೆ, ಕ್ರೋಧ

ಸೋಂಕದ ನಿರಂಜನನು. ತನ್ನಾಶ್ರಯಿಸಿದ ಸದ್ಭಕ್ತರಿಗೆ ತನ್ನನ್ನೇ ಅರ್ಪಿಸುವ ಮಾತೃಹೃದಯಿ. ನೆಪ ತೆಗೆದು ಯಾರನ್ನೇ ವಧಿಸಲು ಹಾತೊರೆವವನಲ್ಲ. ಮೂಢ-ಮೂರ್ಖ ತುಂಟ-ಕುಂಟ ಮಕ್ಕಳನ್ನು ಪ್ರೇಮಿಸುವ ತಾಯಿಯಂತೆ ವಾತ್ಸಲ್ಯಮಯಿ. ಅಂತೆಯೇ ಕೆಲವೊಮ್ಮೆ ತಾನಿತ್ತ ವರಗಳಿಂದ ತನಗೇ ತೊಂದರೆ. ಪರಿಸ್ಥಿತಿ ಮಿತಿಮೀರಿದಾಗ ಮಾತ್ರವೇ ದುಷ್ಟರ ವಧೆ. ಹೀಗೆ ಆದರ್ಶ ಯೋಗಿರಾಜನಾಗಿ, ಧರ್ಮ ಸಾಮ್ರಾಟನಾಗಿ, ಸಂಯಮ-ಸರಳತೆಯ ಪ್ರತಿಮೂರ್ತಿಯಾಗಿ ರಾರಾಜಿಸಿದ ಈ ಮಹಾಯೋಗಿ. ಅಖಂಡ ಭಾರತದ ತುಂಬೆಲ್ಲ ಇವನ ಆರಾಧಕರು.

ಇನ್ನಿವನ ಧಾರ್ಮಿಕ ವಿಚಾರಗಳೋ, ಅತ್ಯಂತ ವಿಶಾಲ. "ವಿವಿಧ ನದಿಗಳು ಸಮುದ್ರ ಸೇರಿ ತಮ್ಮ ರೂಪ ರುಚಿ ಗುಣ ಕಳೆದುಕೊಂಬಂತೆ, ಯಾರೇ ಇರಲಿ ನನ್ನನ್ನು ಆಶ್ರಯಿಸಿ, ಪೂರ್ವಗುಣ ನಿವೃತ್ತಿ ಮಾಡಿಕೊಂಡು ಶಿವಭಕ್ತರಾಗುತ್ತಾರೆ' ಎಂಬ ಜಾತ್ಯತೀತ ಮನೋಭಾವ. ಯಜ್ಞ-ಯಾಗಾದಿಗಳು ಬಲಿ-ಹಿಂಸೆಗಳಿಂದ ಲಕ್ಷಿತವಾಗಿರುವ ಕಾರಣ, ಅಹಿಂಸಾವಾದಿಯಾದ ಶಿವನು ಅವುಗಳ ತೀಕ್ಷ್ಣ ವಿರೋಧಿ. 'ದೇವನನ್ನೊಲಿಸಲು ಕುರಿ, ಆಡು ಬೇಡ; ಅಭಿಷೇಕ, ಬಿಲ್ವಗಳು ಸಾಕೇ ಸಾಕು.' ಎಂಬ ವಿಚಾರವಾದಿ. ಇನ್ನವನಿಗೆ ಮಲ್ಲಿಗೆ, ಸಂಪಿಗೆ ಇಂತಹ ನಗರ ಕುಸುಮಗಳೇ ಬೇಕೆಂದೇನೂ ಇಲ್ಲ. ಕಾರೆಯ ಸೊಪ್ಪಾದರೂ ಮನಂಗೂಡಿ ಬಂದುದು ಅರ್ಪಿತ. ಅಲ್ಲದೆ ದತ್ತೂರ, ಕಣಗಲೆ, ಎಕ್ಕೆ, ತುಂಬೆ ಎಲ್ಲವೂ-ಪ್ರಿಯವೇ. ಇನ್ನು ವೇಷಭೂಷಣಗಳೋ ಅತ್ಯಂತ ಸರಳ. ಕಿರೀಟ, ಕಡಗ, ಪೀತಾಂಬರ ಬಲುದೂರ. ಸರಳವಾದೊಂದು ಜಟೆ. ರುದ್ರಾಕ್ಷಿಯ ಕಡಗ. ಚಂದನ-ಕಸ್ತೂರಿ ಲೇಪನವಲ್ಲ ವಿಭೂತಿ ಲೇಪನ; ಓಡಾಡುವ ವಾಹನವಾದರೂ ಅಷ್ಟೇ ಸರಳ-ರೈತನ ಜೀವಾಳವಾದ ಎತ್ತು! ತನ್ನನ್ನು ತನ್ನ ಭಕ್ತರು ನೇರವಾಗಿ ಪೂಜಿಸಲೆಂಬ ಬಯಕೆ. ಅಂತೆಯೇ ಇಂದಿಗೂ ೧೨ಜ್ಯೋತಿರ್ಲಿಂಗ ಮತ್ತು ಶಿವಲಿಂಗಗಳನ್ನು ಎಲ್ಲ ಜಾತಿ ಮತ ಪಂಥಗಳವರು ನೇರವಾಗಿ ಪೂಜಿಸಬಹುದಾದ ಅವಕಾಶ. ಸ್ತ್ರೀಯರೂ ಮುಕ್ತಿ ಸಾಧನೆಗೆ ಹೊರತಾಗಬೇಕಿಲ್ಲ ಎಂಬುದರ ದ್ಯೋತಕ ಉಮೆಯ ತಪಸ್ಸು. ಪಾರ್ವತಿಗೆ ಆಗಮಗಳ ಬೋಧೆಗೈವುದು ಮಹಿಳೆಯರು ಧರ್ಮಶಾಸ್ತ್ರ ಪಾರಾಯಣಕ್ಕೆ ಸಮಾನವಾಗಿ ಅರ್ಹರು ಎಂಬ ತತ್ತ್ವದ ಪ್ರತೀಕ. ಹೀಗೆ ತತ್ತ್ವ, ವ್ಯಕ್ತಿತ್ವ, ಜನ ಪ್ರಿಯತೆ ಎಲ್ಲ ದೃಷ್ಟಿಯಿಂದ ಮಹಾದೇವನ ಸಮಾನ ಸ್ಪರ್ಧಿಗಳಿರಲಿಲ್ಲ. ವಿದೇಶಗಳಿಂದ ಆರ್ಯರ ಆಗಮನವಾದಾಗ ಶಿವನ ಕೀರ್ತಿ ಏಕಮೇವಾದ್ವಿತೀಯವಾಗಿತ್ತು. ಅನಿವಾರ್ಯವಾಗಿ ಅವರು ಅವನನ್ನು ತಮ್ಮ ಶಾಸ್ತ್ರಗಳಲ್ಲಿ ಇಂಬಿಟ್ಟುಕೊಳ್ಳಬೇಕಾಯಿತು, ಅರ್ಚಿಸಬೇಕಾಯಿತು. ಪ್ರಕೃತಿ ಪೂಜಕರಾದ ಆರ್ಯರು, ಶಿವಪೂಜಕರಾದ ದ್ರಾವಿಡರು-ಪೂಜಾರಿ ಪದ್ಧತಿಯ ಆರ್ಯಧರ್ಮ, ದೇವಾಲಯ ಪದ್ಧತಿಯ ದ್ರಾವಿಡಧರ್ಮ-ಎರಡೂ ಸಂಗಮವಾದಾಗ ಹುಟ್ಟಿದುದೇ ಹಿಂದೂ ಸಂಸ್ಕೃತಿ. ಹೀಗೆ ಸ್ವಾಗತಿಸಲ್ಪಟ್ಟ

ಶಿವನ ಸ್ಥಾನ ವೇದಗಳಲ್ಲಿ ಪರಮೋಚ್ಚ ಮಟ್ಟವನ್ನೇರಿತು. ಇದನ್ನು ಸಹಿಸಲಾರದ ಮತಾಂಧ ದುರಭಿಮಾನಿಗಳು ಅವನ ಬಗ್ಗೆ ಕುಕಲ್ಪನೆಯ ಕಥೆ ಕಟ್ಟಿ. ಅಸಹ್ಯ ಪೌರಾಣಿಕ ಚಿತ್ರಣ ನೀಡಿರುವುದೂ ಅಷ್ಟೇ ಸ್ವಾಭಾವಿಕ.

ಐತಿಹಾಸಿಕ ಪುರುಷನಾದ ಯೋಗಿರಾಜ ಮಹಾದೇವನು ಕೈಹಿಡಿದುದು ದಕ್ಷ ಬ್ರಹ್ಮನ ಪುತ್ರಿ ದಾಕ್ಷಾಯಿಣಿಯನ್ನು. ಆಹ್ವಾನವಿಲ್ಲದೆ ತಂದೆಯ ಮನೆಗೆ ಹೋದ ಸುತೆ ಅಪಮಾನಿತಳಾಗಿ, ಕೀರ್ತಿವೆತ್ತ ಪತಿಯ ಅವಹೇಳನ ಕ್ಷುದ್ರ ತಂದೆಯಿಂದ ಬಂದಾಗ ಸಹಿಸಿಕೊಳ್ಳಲಾರದ ಆಕೆ ಅಗ್ನಿಗೆ ಆಹುತಿಯಾಗಿ ಹುತಾತ್ಮಳಾದುದು ಸರ್ವವಿದಿತ. ಇಲ್ಲಿಯ ತನಕ ಶಾಂತಮೂರ್ತಿ ಶಿವನು ಸಹಿಸಿದ್ದ ಸಹನೆ ಕಟ್ಟೆಯೊಡೆಯಿತು. ತನ್ನ ತತ್ತ್ವಗಳಿಗೆ ವಿರೋಧವಾದ ಯಜ್ಞವನ್ನು ಒಂದು ದಾಕ್ಷಿಣ್ಯ (ದಕ್ಷ ಬ್ರಹ್ಮನು ಮಾವನು ಎಂಬ) ದಿಂದ ಸಹಿಸಿದ್ದ. ಪತ್ನಿಗೆ ಆದ ದುರ್ಮರಣ ಕಂಡು ನೊಂದು, ತನ್ನ ಜಟೆಯನ್ನೇ ಕೆದರಿದ 'ಋಷಿಕೇಶ' ನಗರದಲ್ಲಿ ಬೀಡು ಬಿಟ್ಟಿದ್ದ ಶಿವನು. ಮಾನಸ ಪುತ್ರ (ಶಿಷ್ಯ) ವೀರಭದ್ರನು ಮಹಾದೇವನ ಆಜ್ಞೆಯಂತೆ ಸೈನ್ಯ ಸಮೇತನಾಗಿ ಸಾಗಿ ಹರದ್ವಾರ (ಶಿವರಾಜ್ಯದ ಮಹಾದ್ವಾರ) ದಲ್ಲಿ ನಡೆಯುತ್ತಿದ್ದ ದಕ್ಷ ಯಾಗವನ್ನು ಭಂಗಪಡಿಸಿದ.

ಸ್ವಭಾವತಃ ಶಾಂತ-ಸಾತ್ವಿಕನೂ ಅಂತರ್ಮುಖಿ ದಯಾಳುವೂ ಆದ ಶಿವನು ವಿರಕ್ತಿಭಾವ ತಾಳಿ, ಪತ್ನಿ ವಿರಹಿತನಾದ ದುಃಖವನ್ನು ಶಮನ ಮಾಡಿಕೊಳ್ಳಲೋಸುಗ ಹಿಮಾಲಯದ ಅಂತರ್ಭಾಗ ಪ್ರವೇಶಿಸಿ ತಪೋಮಗ್ನನಾದ. ನಿರಾಹಾರ, ಜಾಗರಣೆ, ಅರ್ಚನೆ, ಧ್ಯಾನಾದಿ ಕ್ರಿಯೆಗಳಿಂದ ತಪೋನಿರತನಾದ ದಿನವೇ ಶಿವರಾತ್ರಿ. ಮಹಾಗುರುವು ನಿರಾಹಾರ-ಜಾಗರಣಾದಿಗಳಿಂದ ತಪೋಮಗ್ನನಾದಾಗ ಅವನ ಅನುಯಾಯಿಗಳೂ ಅನುಷ್ಠಾನ ಕೈಗೊಂಡರು. ಶಿವನ ತಪಸ್ಸು ನಿರಂತರವಾಗಿ ಸಾಗಿತು. ಉಳಿದವರು ಮಾತ್ರ ಸಾಂಕೇತಿಕವಾಗಿ ಒಂದು ದಿನ ಆಚರಿಸಿ ಅನಂತರ ವ್ಯವಹಾರದಲ್ಲಿ ತಲ್ಲೀನರಾದರು. ಆದರೆ ಮಹಾದೇವನು ಬಹಿರ್ಮುಖನಾಗದಿದ್ದಾಗ ಅವರು ಆತಂಕಗೊಂಡರು. ಏನಾದರೂ ಪ್ರಯತ್ನ ಮಾಡಿ ಶಿವನನ್ನು ಬಹಿರ್ಮುಖಗೊಳಿಸಿ, ಕರ್ತವ್ಯಮುಖನನ್ನಾಗಿ ಮಾಡಬೇಕಾಗಿತ್ತು. ಅಂತೆಯೇ ಪರ್ವತರಾಜನ ಪುತ್ರಿ ಲೋಕೈಕ ಸುಂದರಿ ಪಾರ್ವತಿಯನ್ನು ಲಗ್ನಮಾಡುವ ಹವಣಿಕೆಯಲ್ಲಿ ತೊಡಗಿದರು. ಶಿವರಾತ್ರಿಯಂದು ತಪೋಮಗ್ನನಾದ ಶಿವನು ಪಾರ್ವತಿಯ ಲಾವಣ್ಯದಿಂದ ಕ್ಷಣಕಾಲ ವಿಚಲಿತನಾಗಿ, ಮತ್ತೆ ತನ್ನ ವೈರಾಗ್ಯ ನೇತ್ರವನ್ನರಳಿಸಿ ಆ ಕಾಮಭಾವವನ್ನು ದಹಿಸಿ, ಅಖಂಡ ತಪಸ್ಸಿಗೆ ತೊಡಗುವ ಕಾಮನ ಹಬ್ಬದ ಆಚರಣೆಯ ಹಿಂದೆ ಒಂದು ಕಥೆ, ಘಟನೆ ಇರುವುದು ಅತ್ಯಂತ ಸಹಜ.

ಶೈವಧರ್ಮದ ಆದ್ಯನಾದ, ಭಾರತೀಯ ಪರಂಪರೆಯ ಆದಿಯೋಗಿ ಶಿವನು ಅನುಷ್ಠಾನನಿರತನಾದ ದಿನ ಶಿವರಾತ್ರಿಯಾದ್ದರಿಂದ ಅದನ್ನು ಅಷ್ಟೇ ಸಾತ್ವಿಕವಾಗಿ

ಆಚರಿಸಬೇಕಾದ ಸಂಪ್ರದಾಯ ಅವ್ಯಾಹತವಾಗಿ ಸಾಗಿಬಂದಿದೆ. ಈ ವ್ರತವಾದರೂ ಫಲಾಪೇಕ್ಷೆಯಿಂದ ಮಾಡುವಂತಹುದಲ್ಲ; ಶಿವಾರ್ಪಿತ ಭಾವದಿಂದ ಮಾಡುವ ನಿಷ್ಕಾಮ ವ್ರತ.

ನಿತ್ಯಂ ನೈಮಿತ್ತಿಕಂ ಕಾರ್ಯಂ
ಯತ್ಕೃತಂ ತು ಮಯಾ ಶಿವ ।
ತತ್ಸರ್ವಂ ಪರಮೇಶಾನ
ಮಯಾ ತುಭ್ಯಂ ಸಮರ್ಪಿತಮ್ ॥

ಈ ಪೂಜಾನಂತರ ಭಕ್ತನು ಬೇಡುವುದು ಧನಕನಕ ಐಶ್ವರ್ಯಗಳನ್ನಲ್ಲ; ಶಿವನ ಕರುಣೆ, ಬಾಳಿನಲ್ಲಿ ಶಾಂತಿ, ಸುಜ್ಞಾನ ಮುಂತಾದುವನ್ನು.

ಸಂಸಾರ ಕ್ಲೇಶ ದಗ್ಧಸ್ಯ
ವ್ರತೇನಾನೇನ ಶಂಕರ
ಪ್ರಸೀದ ಸುಮುಖೋನಾಥ
ಜ್ಞಾನ ದೃಷ್ಟಿ ಪ್ರದೋ ಭವ ॥

ಶಿವನು ಜ್ಞಾನ ಸೂರ್ಯನು, ತನ್ನ ಕಾರುಣ್ಯ ಕಿರಣಗಳಿಂದ ಭಕ್ತರ ಹೃತ್ಕಮಲಗಳನ್ನು ಅರಳಿಸುವನು. ಅವನ ಮಂತ್ರವು ಭವಕ್ಲೇಶವನ್ನು ಪರಿಹರಿಸುವ ದಿವ್ಯ ಸಂಜೀವಿನಿಯು. ಭವ ನದಿಯನ್ನು ದಾಂಟಿಸುವ ಛತ್ರ ಅವನ ನೆನಹು. ಶಿವನು ಗಂಗಾಧರ; ಅಂದರೆ ನೊಂದು ಬೆಂದು ಬಸವಳಿದು ಬಾಡುವ ಹೃದಯಗಳಿಗೆ ಕರುಣೆಯ ಗಂಗೆಯನ್ನೆರೆದು ಪುನರ್ಜನ್ಮ ನೀಡುವವನು. ಅವನು ಭವರುಜೆಗೆ ಆದಿವೈದ್ಯ. ಹೀಗೆ ವೈವಿಧ್ಯಮಯವಾಗಿ ಭಾವಿಸಲ್ಪಟ್ಟು ಕೀರ್ತಿಸಲ್ಪಡುವವನು ಶಿವ.

ದಿವ್ಯರಾತ್ರಿ

ಐತಿಹಾಸಿಕ ಶಿವನ ಸಾಂಕೇತಿಕ ತಪೋದಿನ ಶಿವರಾತ್ರಿ ಎಂಬುದರ ಒಡನೆ 'ಆತ್ಮಶುದ್ಧಿಯ ದಿನ' ಎಂದು ದೈವೀಜ್ಞಾನ ಸಂಪಾದನೆಗಾಗಿ ನಾವು ಆಚರಿಸಬಹುದು. ಶಿವ ಎಂದರೆ ಅಕಲ್ಮಷ, ಕಲ್ಯಾಣ ರೂಪಿ, ಮಂಗಳಮೂರ್ತಿ. ಇವು ಪರಮಾತ್ಮನ ಲಕ್ಷಣಗಳಾದ ಕಾರಣ ಅಂದು ಅಂತರ್ಮುಖಿ ಚಿಂತನೆಗೆ ತೊಡಗಿ, ಹಾವು ಪೊರೆ ಕಳಚಿ ಚುರುಕಾಗುವಂತೆ, ಮನದ ಮಾಲಿನ್ಯತೆ ಕಳೆದು ದೇವನತ್ತ ಸಾಗುವ ಯತ್ನ ಮಾಡಬೇಕು. ಸಿನಿಮಾ ನೋಡಿ ಶಿವರಾತ್ರಿ (ಅಲ್ಲ ಭವರಾತ್ರಿ) ಮಾಡದೆ, ಯೋಗರಾತ್ರಿ (ಭೋಗರಾತ್ರಿಯಲ್ಲ) ಯನ್ನಾಗಿ ಆಚರಿಸಬೇಕು.

ಶರಣರ ದೃಷ್ಟಿಯಲ್ಲಿ ಶಿವರಾತ್ರಿ

ಸಾಂಕೇತಿಕವಾಗಿ ವರ್ಷಕ್ಕೊಮ್ಮೆ ಶಿವರಾತ್ರಿ ಮಾಡಿದರೂ, ನಿಚ್ಚ ನಿಚ್ಚ ಶಿವರಾತ್ರಿಯನ್ನಾಚರಿಸಬೇಕೆಂಬುದು ಬಸವಣ್ಣನವರ ಉದ್ದೇಶ.

ಶರಣ ನಿದ್ರೆಗೈದಡೆ ಜಪಕಾಣಿರೋ
ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೋ
ಶರಣ ನಡೆದುದೇ ಪಾವನ ಕಾಣಿರೋ
ಶರಣ ನುಡಿದುದೇ ಶಿವತತ್ತ್ವ ಕಾಣಿರೋ
ಕೂಡಲ ಸಂಗನ ಶರಣನ ಕಾಯವೇ ಕೈಲಾಸ ಕಾಣಿರೋ.

ಉಪವಾಸ, ಜಾಗರಣೆ, ಅರ್ಚನೆಗಳನ್ನು ಮಾಡುವುದು ಶಿವರಾತ್ರಿ ತಾನೇ! ಇಂದ್ರಿಯಗಳನ್ನು ಕಟ್ಟುದರೆಡೆಗೆ ಹರಿಸದೆ ನಿರಾಹಾರದಿಂದಿಡಬೇಕು. ನಾಲಿಗೆಯನ್ನು ಸಿಕ್ಕಾಪಟ್ಟೆ ತಿನ್ನುವುದರಲ್ಲಿ ತೊಡಗಿಸದೆ ಸಂಯಮದಿಂದಿಡಬೇಕು. ಅದುವೇ ಉಪವಾಸ! ಆತ್ಮಜಾಗೃತಿ ಮಾಡಿಕೊಂಡು ಸದಾ ದೇವನ ಚಿಂತನೆಯಲ್ಲಿ ತೊಡಗುವುದು ಜಾಗರಣೆ. ಕಾಯ–ವಾಕ್ಕು–ಮನಗಳಿಂದ ಅರ್ಚನೆ–ಪ್ರಾರ್ಥನೆ–ಧ್ಯಾನದಲ್ಲಿ ನಿರತನಾಗುವುದು ಉಪಾಸನೆ. ಈ ಮೂರನ್ನೂ ಪ್ರತಿನಿತ್ಯ ಮಾಡಿದಾಗ ನಿತ್ಯ ನಿತ್ಯ ಶಿವರಾತ್ರಿ ಮಾಡುವ ಶರಣನ ಕಾಯವೇ ಕೈಲಾಸ, ಅವನದ್ದು ಚೈತನ್ಯ ಸಮಾಧಿ, ಪ್ರತಿ ರಾತ್ರಿಯೂ ದಿವ್ಯರಾತ್ರಿ, ಜೀವನವೆಲ್ಲ ದಿವ್ಯ ಜೀವನ. ★

ಪವನನಪ್ಪಿದ ಪರಿಮಳಕ್ಕೆ ಎಡೆಯುಂಟೆ ಅಯ್ಯಾ?
ಜ್ಯೋತಿಯಪ್ಪಿದ ತಿಮಿರಕ್ಕೆ ಠಾವುಂಟೆ ಅಯ್ಯಾ?
ಭ್ರಮರವಪ್ಪಿದ ಕೀಟಕ್ಕೆ ಗುಣವುಂಟೆ ಅಯ್ಯಾ?
ಬೆಂಕಿ ಮುಟ್ಟಿದ ಕರ್ಪುರಕ್ಕೆ ರೂಪವುಂಟೆ ಅಯ್ಯಾ?
ಗುರು ಮುಟ್ಟಿದ ಶಿಷ್ಯಂಗೆ ಪೂರ್ವಾಶ್ರಯವುಂಟೆ ಅಯ್ಯಾ?
ಸಚ್ಚಿದಾನಂದನಪ್ಪಿದ ಭಕ್ತಂಗೆ ಭವವುಂಟೆ ಅಯ್ಯಾ?

ಮಾನವರೆಲ್ಲಾ ಕೈಬಿಟ್ಟಾಗ, ತವಕರುಣೆ ಬಪ್ಪುದಯ್ಯಾ
ಮೋಡವಿಲ್ಲದೆ ಸುಳಿವ ಮಿಂಚಿನಂತೆ, ಸ್ವಾರ್ಥವಿಲ್ಲದ ಸಹಾಯದಂತೆ:
ಮರಣಬಲ್ಲಿಪ್ಪವಗೆ ಮರುಜೀವಣಿಯಂತೆ;
ಉಸಿರು ನಿಂತವಗೆ ಆಮ್ಲಜನಕದಂತೆ
ಒರೆದೊರೆದು ಎಮ್ಮ ನೆರೆ ಸಲಹುವೆಯಯ್ಯಾ ಸಚ್ಚಿದಾನಂದಾ!

—ಮಾಶಾಜಿ.


ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

(ಪ್ರಾರೂಪ ೪ ; ವಿಧಿ ೮)

೧.	ಪ್ರಕಟಣೆಯ ಸ್ಥಳ	ಬಸವ ಮಂಟಪ, ೨೪, ಎರಡನೆಯ ಬ್ಲಾಕು ಕಾರ್ಡ್‌ರೋಡ್, ರಾಜಾಜಿನಗರ, ಬೆಂಗಳೂರು-೧೦
೨.	ಪ್ರಕಟಣೆಯ ನಿಯತಕಾಲಿಕತೆ	ಮಾಸಪತ್ರಿಕೆ
೩.	ಮುದ್ರಕರ ಹೆಸರು	ರಾಧಾಕೃಷ್ಣ, ಸೂಪರ್ ಪ್ರಿಂಟರ್ಸ್
	ರಾಷ್ಟ್ರೀಯತೆ	ಭಾರತೀಯ
	ವಿಳಾಸ	೧೪, ಹೂವಾಡಿಗರ ಗಲ್ಲಿ ಚಿಕ್ಕಪೇಟೆ ಕ್ರಾಸ್, ಬೆಂಗಳೂರು-೫೩ ಫೋನ್ : 71860
೪.	ಪ್ರಕಾಶಕರು	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ವಿಶ್ವ ಕಲ್ಯಾಣ ಮಿಷನ್ ಪರವಾಗಿ.
	ರಾಷ್ಟ್ರೀಯತೆ	ಭಾರತೀಯ
೫.	ಸಂಪಾದಕರು	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
	ರಾಷ್ಟ್ರೀಯತೆ	ಭಾರತೀಯ
೬.	ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಗತ ಮತ್ತು ಪಾಲುಗಾರರ ವಿಳಾಸ.	ವಿಶ್ವಕಲ್ಯಾಣ ಮಿಷನ್ನಿನ ಐಕ್ಯಕ ಒಡೆತನದಲ್ಲಿ ಪ್ರಕಾಶಿತವಾಗುತ್ತಿದೆ.

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆ ನಿಜವೆಂದು ನಾನು, ಜಗದ್ಗುರು ಮಾತೆ ಮಹಾದೇವಿ ಈ ಮೂಲಕ ಘೋಷಿಸುತ್ತೇನೆ.

(ಸಹಿ) **ಎಂ. ಮಹಾದೇವಿ**
ಪ್ರಕಾಶಕ ಮತ್ತು ಸಂಪಾದಕರು
ಕಲ್ಯಾಣ ಕಿರಣ ಮಾಸಪತ್ರಿಕೆ. ವಿಶ್ವಕಲ್ಯಾಣ ಮಿಷನ್
ನಂ. ೨೪, ಎರಡನೆಯ ಬ್ಲಾಕು, ಕಾರ್ಡ್‌ರಸ್ತೆ
ರಾಜಾಜಿನಗರ, ಬೆಂಗಳೂರು-೫೬೦೦೧೦



(ಹಿಂದಿನ ಸಂಚಿಕೆಯವರೆಗೆ)'

ಧರ್ಮಪ್ರಸಾರ-ವಿದೇಶ ಸಂದರ್ಶನದ ಮಣಿಹ ಹೊತ್ತ ಪೂಜ್ಯ ಮಾತೆಯವರು ೧೯೭೬ ಮೇ ೧೪ ರಂದು ತಾಯ್ನಾಡಿನಿಂದ ತೆರಳಿದ್ದರು. ಏಕಾಂಗಿನಿಯಾಗಿ ಅಪರಿಚಿತ ನಾಡಿಗೆ ಹೋದ ಅವರಿಗೆ ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾದರೂ, ಸ್ವಧೈರ್ಯದಿಂದ ಪರಿಹರಿಸಿಕೊಂಡು ಮುಂದೆ ಸಾಗಿದರು. ತಮ್ಮ ಅನುಭವಗಳನ್ನು ತತ್ತ್ವಜ್ಞಾನದೊಡನೆ ಮೇಳೈಸಿ ವಿವರಿಸುತ್ತಿದ್ದಾರೆ.)

–ಜಗದ್ಗುರು ಮಾತಾಜಿ.

ಧಾರಾವಾಹಿ-೬

ಬೃಹದಾಕಾರದ ಲಂಡನ್ ನಗರದಲ್ಲಿ ಓಡಾಡುವ ರಹಸ್ಯವನ್ನು, ಬಸ್ ಮಾರ್ಗಗಳನ್ನೂ, ಸೂತ್ರಗಳನ್ನೂ ಗ್ರಹಿಸಿಕೊಳ್ಳತೊಡಗಿದ್ದೆ. ಈಗ ಮೈಚಳಿಬಿಟ್ಟಂತೆ, ದುಗುಡದ ಹೊರೆ ಇಳಿದಂತೆ ಭಾಸವಾಗುತ್ತಿತ್ತು. 'ಲಕ್ಷ್ಮಿರಾಮಚಂದ್ರನ್ ಜೊತೆಗೆ ಇರುವುದು ಅತ್ಯಂತ ಸೂಕ್ತ; ಆಕೆಯೂ ಒಂಟಿ, ನಾನೂ ಒಂಟಿ' ಎಂದುಕೊಂಡು ನನ್ನ ಸಾಮಾನುಗಳನ್ನು ಅವರ ಮನೆಗೆ ಸಾಗಿಸಲು ನಿಶ್ಚಯಿಸಿದೆ. ಸಾಗಿಸಲು ಯೋಗಾಭ್ಯಾಸಿ ಪೀಟರ್ ಸಹಾಯಗೈದನು. ಆಕೆ ನೌಕರಿಗೆ ಹೋಗುತ್ತಿದ್ದಂತೆಯೇ ನಾನೇ ಕೈಯಾರೆ ಅಡಿಗೆ ಮಾಡಿಕೊಂಡು ಪ್ರಸಾದ ಸ್ವೀಕರಿಸಿ, ಒಂದೊಂದು ವಿಶಾಲರಸ್ತೆ ಹಿಡಿದು ಹಾಗೆಯೇ ಸಂಚರಿಸಿ ಅಲ್ಲಿಯ ಜನಜೀವನವನ್ನು ಗ್ರಹಿಸಿಕೊಳ್ಳುತ್ತಿದ್ದೆ. ಕೆಲವಾರು ದಿನಗಳಲ್ಲಿ ಆ ವಾಸ ಬೇಸರ ತಂದಿತು. ಏಕೆಂದರೆ ಶ್ರೀಮತಿ ಲಕ್ಷ್ಮಿಗೆ ಸದಾಕಾಲ ಟೆಲಿವಿಷನ್ ನೋಡುವ ಆಸಕ್ತಿ. ತಾನಷ್ಟೇ ನೋಡದೆ ನನಗೂ ಒತ್ತಾಯದ ಆಮಂತ್ರಣ. ಹಗಲಿಡೀ ಅಧ್ಯಯನ ಮಾಡುತ್ತಿದ್ದ ನನ್ನೊಡನೆ ತಾತ್ತ್ವಿಕ ಚರ್ಚೆಗೈಯಲು ಆಕೆಗೆ ಆಸಕ್ತಿ ಇಲ್ಲ. ಅಲ್ಲದೇ ದುಡಿದುದೆಲ್ಲವನ್ನು ಬಟ್ಟೆಗೆ ವ್ಯಯಿಸುವ ಆಕೆಗೆ ಬಟ್ಟೆ ಅಂಗಡಿ ಸಂದರ್ಶನ ಒಂದು ತಣಿಸಲಾರದ ದಾಹ. ಬಹಿರ್ಮುಖ ಲೌಕಿಕ ಸ್ವಭಾವವು ಆಕೆಯದಾದರೆ, ಅಂತರ್ಮುಖ ಅಲೌಕಿಕ ಚಿಂತನೆ ನನ್ನದು. ನೀರವ ಮೌನ, ಹೃದಯದಲ್ಲಿ ಚಿಂತನೆ, ಕೈಯಲ್ಲಿ ಹೊತ್ತಿಗೆ, ಇಷ್ಟಿದ್ದರೆ ನನಗೆ ಭೂಮಿಯೇ ದಿವಿ. ಆಕೆಗೆ ಅಚ್ಚರಿ. "ಹೀಗೆ

ಧ್ಯಾನ, ಅಧ್ಯಯನ, ಚಿಂತನೆಗಳಲ್ಲಿ ಕುಳಿತುಕೊಳ್ಳಲು ಬೇಸರವಾಗದೆ?" ಲಕ್ಷ್ಮಿಯ ಪ್ರಶ್ನೆ. ಅದಕ್ಕೆ ನನ್ನ ಉತ್ತರವೊಂದೇ ಮುಗುಳ್ನಗೆ. 'ಶನಿವಾರ-ಭಾನುವಾರ' ಕಳೆಯಲು ಸಾಕು ಸಾಕಾಗುತ್ತೆ. ಅದೆಂತು ನೀವು ಕುಳಿತುಕೊಳ್ಳುವಿರೋ ?' ಆಕೆಯ ಸಮಸ್ಯೆ. "ನಮ್ಮ ಮನಸ್ಸು ನಮ್ಮ ಕೈಲಿರುವ ಮಗು, ಎತ್ತೆತ್ತಲೋ ಹಾರುವ ಮಂಗವಲ್ಲ" ನನ್ನ ಉತ್ತರ ದಿಂದ ಆಕೆಗೆ ವಿಸ್ಮಯ. ಆಕೆ ಮನೆಗೆ ಬಂದು ಟಿ.ವಿ. ಹಚ್ಚಿ ಮಾತಿಗೆ ತೊಡಗುತ್ತಲೇ ನನಗೆ ತಳಮಳ. "ದೇವಾ, ನನ್ನ ವೇಳೆ ಅಮೂಲ್ಯ. ಈಗೇನು ಮಾಡಲಿ ?' ಎಂಬ ಕಳವಳ. ಅದಕ್ಕೊಂದು ದಿನ ಪರದೆ ಬಿತ್ತು, ಡಾ॥ ಸ್ಟೀವನ್ಸ್‌ರವರು ಆಮಂತ್ರಣ ನೀಡಿದಾಗ. ತಮ್ಮ ಮನೆಯಲ್ಲಿದ್ದು ಆತಿಥ್ಯ ಸ್ವೀಕರಿಸಲು ಅವರ ಆಹ್ವಾನ. ಡಾ॥ ಸ್ಟೀವನ್ಸ್ ಸಸ್ಯಶಾಸ್ತ್ರದಲ್ಲಿ ಅತ್ಯಂತ ಉಪಯುಕ್ತ ಸಂಶೋಧನೆ ಮಾಡಿ, ಜಾಗತಿಕ ಕೀರ್ತಿ ಪಡೆದಿರುವ ಓರ್ವ ಸಭ್ಯ ವ್ಯಕ್ತಿ. ಯಹೂದಿ ಧರ್ಮದ ಶ್ರದ್ಧಾಳುವಾದ ಅವರನ್ನು ಸಂದರ್ಶಿಸಿದ್ದು ಇಂದ್ರನಾಥರ ಯೋಗಕೇಂದ್ರದಲ್ಲಿ. ಭಾರತೀಯ ಗಿಡ ಮೂಲಿಕೆಯೊಂದರ ಅಧ್ಯಯನಕ್ಕಾಗಿ ಒಂದು ವರ್ಷವನ್ನು ಭಾರತದಲ್ಲಿ ಆತ ಕಳೆದಾಗ ಇಲ್ಲಿಯ ಯೋಗ-ಧರ್ಮಗಳ ಬಗ್ಗೆ ಅದಮ್ಯ ಕುತೂಹಲ ಹುಟ್ಟಿತು. ಪ್ರವಾಸ-ಕೃತಿ Revolution in Kalyana ಚೆನ್ನಾಗಿ ಪರಿಣಾಮ ಬೀರಿ, ಅವರಿಂದ ಆಮಂತ್ರಣ ಕೊಡಿಸಿತು. ತಮ್ಮಲ್ಲಿ ನನಗೆ ಇಂಬುಗೊಟ್ಟು, ನಮ್ಮ ಧರ್ಮ-ತತ್ತ್ವಗಳ ಬಗ್ಗೆ ಹೆಚ್ಚಾಗಿ ತಿಳಿಯುವ ಆಸಕ್ತಿ ಅವರಿಗೆ. ಯೋಗ ಕೇಂದ್ರದಲ್ಲಿ ನಾನು ಮಾಡಿದ ಭಾಷಣವೂ ಅವರ ಮನಸ್ಸನ್ನು ಸೂರೆಗೈದಿತ್ತು.

"ಆದರೆ ಮಿ॥ ಸ್ಟೀವನ್ಸ್, ನಾನು ಹೇಗೆ ನಿಮ್ಮ ಆಮಂತ್ರಣ ಒಪ್ಪಿಕೊಳ್ಳಲಿ ? ನೀವು ಮಾಡಿದ ಅಡಿಗೆ ನಾನು ಸ್ವೀಕರಿಸುವುದಿಲ್ಲ." ನನ್ನ ಸಮಸ್ಯೆ ಮುಂದಿಟ್ಟೆ. "ನಿಮಗೆ ಇಷ್ಟ ಬಂದಂತೆ ಅಡಿಗೆ ಮಾಡಿಕೊಳ್ಳಿ. ನಮ್ಮ ಮನೆಯಲ್ಲಿ ಇದ್ದರೆ ಸಾಕು..." ಒಪ್ಪಿ ಕೊಂಡೆ. ಲಕ್ಷ್ಮಿಯಿಂದ ಬೀಳ್ಕೊಂಡು ಹೊರಟೆ. ಸಾಮಾನು ಸಾಗಿಸುವ ಎಲ್ಲ ಜವಾಬ್ದಾರಿ ಸಂತೋಷದಿಂದ ಕೈಗೊಂಡರು. ಡಾಕ್ಟರೇಟ್ ಪದವಿ ಪಡೆದು ಉನ್ನತ ದರ್ಜೆಯಲ್ಲಿರುವ ಆ ವ್ಯಕ್ತಿ ಸಾಮಾನು ಹೊತ್ತು ಕಾರಿಗಿರಿಸುವುದನ್ನು ಕಂಡು, ನಮ್ಮ ದೇಶದ ವಿದ್ಯಾವಂತರಲ್ಲಿ ಈ ಕಾರ್ಯಗೌರವ ಬರಲು ಸಾಧ್ಯವೇ ಎನಿಸಿತು. ಪ್ರೌಢ ವಿಚಾರದ, ಭಾರತೀಯ ತತ್ತ್ವಶಾಸ್ತ್ರದ ಆಳವಾದ ಪರಿಜ್ಞಾನವಿರುವ ಈ ವ್ಯಕ್ತಿಯ ಪರಿಚಯವಾದುದು ಅತ್ಯಂತ ಆಕಸ್ಮಿಕವೇ ! ಬಸವಣ್ಣನವರ ವಿಚಾರ ಧಾರೆಯನ್ನು ಅರಿಯಲಾರಂಭಿಸಿ, ಸ್ತಂಭೀಭೂತನಾಗತೊಡಗಿದ್ದ ಆ ವಿದ್ವಾಂಸ. ಸಾಮಾನ್ಯವಾಗಿ ನನ್ನ ಭಾಷಣವನ್ನು ಒಂದು ಹಾಡಿನಿಂದ ಪ್ರಾರಂಭಿಸುವುದು ನನ್ನ ಪರಿಪಾಠ. ಅಲ್ಲಿ ಇಂಗ್ಲಿಷ್ ಭಾಷಣ. ಅದಕ್ಕೆ ಕನ್ನಡ ಹಾಡೆ ? ಅದಕ್ಕಾಗಿ ಆಂಗ್ಲ ಭಾಷೆಯಲ್ಲಿ ತರ್ಜುಮೆಗೊಂಡ ವಚನಗಳನ್ನು ಅಭ್ಯಸಿಸಲಾರಂಭಿಸಿದೆ. ಆಂಗ್ಲಗಾನವನ್ನು ಕಲಿಯುವು

ದಂತೂ ಈ ವಯಸ್ಸಿನಲ್ಲಿ ಅಸಂಭವ; ಅಸಹನೀಯ. ಕಸಿ ಏಕೆ ಮಾಡಬಾರದು ? ಅಂದರೆ ಭಾರತೀಯ ದಾಟಿಯಲ್ಲಿ ಇಂಗ್ಲಿಷ್ ವಚನ ಏಕೆ ರೂಢಿಸಿಕೊಳ್ಳಬಾರದು ? ನನ್ನಲ್ಲಿ ನಾನೇ ಗುಣುಗಿಕೊಳ್ಳುತ್ತ ಅಭ್ಯಸಿಸಿದೆ. ಬೇರೆಯವರ ಮುಂದೆ ಪ್ರಯೋಗಿಸಿ ತೋರಿಸಲು ಸಂಕೋಚ. ಒಂದು ವಾರಾಂತ್ಯದಲ್ಲಿ ಡಾ॥ ಸ್ಟೀವನ್ಸ್ ಬಂದಾಗ ಸಂಕೋಚ ಪಟ್ಟು ಹಾಡಿ, ಅಭಿಪ್ರಾಯ ತಿಳಿಯಲು ಕಾಯ್ದೆ. ವಿಚಿತ್ರವೆಂದರೆ ಪದ್ಮಾಸನದಲ್ಲಿ ಕುಳಿತು, ಕಣ್ಣುಮುಚ್ಚಿ 'ಉಳ್ಳವರು ಶಿವಾಲಯ ಮಾಡುವರು' ಮತ್ತು 'ವಚನದಲ್ಲಿ ನಾಮಾಮೃತ ತುಂಬಿ' ಇವುಗಳ ಭಾಷಾಂತರಗಳನ್ನು ಕೇಳುತ್ತಾ ಆ ಯಹೂದ್ಯ ಭಾವ ಸಮಾಧಿಯಲ್ಲಿದ್ದು, ಅವರ ಮುಚ್ಚಿದ ಕಂಗಳಿಂದ ಆನಂದಭಾಷ್ಪ ಒಸರುವುದು ನನಗೆ ಗೊತ್ತಾಯಿತು.

ಆ ತನ್ಮಯತೆಗೆ ಭಂಗ ತರಬಯಸದೆ. ನಾನು ಮೌನವಾಂತೆ. ಕಾಲ ಸರಿದನಂತರ ಕಣ್ಣರಳಿಸಿ, ಕನ್ನಡಕ ತೆಗೆದು ಒರೆಸಿಕೊಂಡು ಗದ್ಗದಿತರಾಗಿ 'ಮಾರ್ವೆಲಸ್, ವಂಡರ್ ಫುಲ್' ಎಂದು ಉದ್ಗರಿಸಿದ ಆ ವ್ಯಕ್ತಿ ಸಮಾಧಾನಿಸಿಕೊಂಡು ನುಡಿದರು : "ಮಟಾಜಿ (ಇದು ಅವರ ಉಚ್ಚಾರ) ಏನು ಅಭಿಪ್ರಾಯ ಹೇಳಬೇಕು ನಾನರಿಯೆ. ಈ ವಚನ ಗಳಲ್ಲಿರುವ ಭಾವ ಸಂಪತ್ತು ಒಂದೆಡೆ ನನ್ನನ್ನು ಆಕರ್ಷಿಸಿದ್ದರೆ ನಿಮ್ಮ ಕಂಠ ಮಾಧುರ್ಯ ಮತ್ತೊಂದೆಡೆ ನನ್ನನ್ನು ಸೆಳೆದಿದೆ. (ಇನ್ನೊಂದು ವಿಶೇಷವೆಂದರೆ ನನ್ನ ಧ್ವನಿ ಅಲ್ಲಿ ತುಂಬಾ ಮಧುರವಾಗಿತ್ತು. ಕಾರಣ ಹಲವು. ಒಂದನೆಯದು, ನನ್ನದು ಉಷ್ಣ ಪ್ರಕೃತಿ ಯಾದ ಕಾರಣ ನಮ್ಮ ದೇಶದ ಉಷ್ಣತೆಗೆ ನನಗೆ ಬೇಗನೇ ಧ್ವನಿ ಬೀಳುತ್ತದೆ. ಆ ತಂಪು ನನಗೆ ಬಹು ಹಿತವೆನಿಸಿತ್ತು. ಎರಡನೆಯದಾಗಿ ಇಲ್ಲಿಯಷ್ಟು ಸತತ ಪ್ರವಚನಗಳು ಇಲ್ಲದೆ ವಾರಾಂತ್ಯದ ಭಾಷಣಗಳು ಮಾತ್ರ ಇದ್ದುದರಿಂದ ಕಂಠಕ್ಕೆ ಒಳ್ಳೇ ವಿರಾಮ ಸಿಕ್ಕುತ್ತಿತ್ತು. ಮತ್ತು ಇಲ್ಲಿಯಷ್ಟು ವಿಪರೀತ ಜವಾಬ್ದಾರಿ, ಮಾತುಕತೆ, ವ್ಯವಹಾರವಿಲ್ಲದ ಕಾರಣ ಕಂಠ ಶೃತಿಗೊಳಿಸಿದಂತಾಗಿತ್ತು. ಕಾಲೇಜಿನಲ್ಲಿ ನಾನು ಅಭ್ಯಸಿಸುವಾಗ ಕಂಠ ಅತ್ಯಂತ ಇಂಪಾಗಿತ್ತು. ಎಷ್ಟು ಎತ್ತರಕ್ಕೂ ಏರಿಸಬಹುದಾದಷ್ಟು ಮಧುರವಾಗಿತ್ತು. ಪ್ರವಚನ ಭಾಷಣಗಳ ಒತ್ತಡ ಬಹಳ ಆದಮೇಲೆ ತನ್ನ ಮಾಧುರ್ಯ ಕಳೆದುಕೊಂಡು ಗೊಗ್ಗರು ದನಿಯ ಸನಾದಿಯಂತಾಗಿದೆ. ಇಂಗ್ಲೆಂಡಿನಲ್ಲಿದ್ದಾಗ ಕಡಿಮೆ ಮಾತನಾಡುತ್ತಿದ್ದರಿಂದ ಇಂಪಾದ ಧ್ವನಿ ಸತ್ವಭರಿತವಾಗಿತ್ತು. ಆ ನಾಡಿನಿಂದ ಹಿಂದಿರುಗಿದ ನಾನು ಹಾಡಿದಾಗ ಇಲ್ಲಿಯವರಿಗೂ ಅಚ್ಚರಿಯೇ. 'ಈಗಲೇ ಕೆಲವು ರೆಕಾರ್ಡಾದರೂ ಮಾಡಿಕೊಳ್ಳಬೇಕು' ಎಂದು ಕೆಲವರು ಒತ್ತಾಯಗೈಯುತ್ತಿದ್ದರು. "ಉಳ್ಳವರು ಶಿವಾಲಯ ಮಾಡುವರು ಈ ವಚನದಲ್ಲಿ ಹುದುಗಿರುವ ತತ್ತ್ವಸಂಪತ್ತಂತೂ ಅದ್ಭುತ, ಅಪಾರ". ಇದು ಸ್ಟೀವನ್ಸರ ಉದ್ಗಾರ. ಅವರು ಹೆಚ್ಚಿನ ಆಸಕ್ತಿ ತಾಳತೊಡಗಿದರು. ನನ್ನೊಡನೆ ಒಯ್ದಿದ್ದ ಸಾಹಿತ್ಯ ಓದಿ, ಚರ್ಚಿಸತೊಡಗಿದರು. ಅಷ್ಟೇ ಅಲ್ಲದೆ, 'ನೀವು, ಆಕ್ಸ್‌ಫರ್ಡಿನಲ್ಲಿ ಸಂಶೋಧನೆ

ಯನ್ನೇಕೆ ಕೈಗೊಳ್ಳಬಾರದು ?' ಎಂದು ಒತ್ತಾಯಿಸಲು ಆರಂಭಿಸಿದರು. "ಭಾರತೀಯ ಧರ್ಮಗಳ ವ್ಯಾಪಕ ಅಧ್ಯಯನ ನಮ್ಮ ವಿಶ್ವವಿದ್ಯಾಲಯಗಳಲ್ಲಿ ನಡೆದಿದ್ದರೂ ಬಸವಣ್ಣನವರ ತತ್ತ್ವಶಾಸ್ತ್ರ ಮತ್ತು ಅನುಭಾವಗಳ ಬಗ್ಗೆ ಏನೂ ಅರಿಯದ ಅಜ್ಞಾನಿಗಳಾಗಿದ್ದೇವೆ. ಸಂಸ್ಕೃತ ಭಾಷೆಯ ಬಗ್ಗೆ ಸಾಕಷ್ಟು ಪಾಶ್ಚಿಮಾತ್ಯ ವಿದ್ವಾಂಸರು ಅಭ್ಯಾಸ ಮಾಡಿದ್ದಾರೆ. ಆದರೆ ಕನ್ನಡ ಭಾಷೆಯ ವರ್ತುಲದಲ್ಲೇ ಸೀಮಿತಗೊಂಡಿರುವ ವಚನ ಸಾಹಿತ್ಯವನ್ನು ಹೊರಜಗತ್ತಿಗೆ ತೋರುವ ಪ್ರಯತ್ನ ಮಾಡಿರದ ಕಾರಣ, ಆ ಭೂಮ ಸಾಹಿತ್ಯದ ಮೇಲೆ ಆಂಗ್ಲರ ಕಣ್ಣು ಬಿದ್ದಿಲ್ಲ. ಇದೆಂತಹ ಅನ್ಯಾಯ. ವಿಶ್ವ' ಸಾಹಿತ್ಯಕ್ಕೆ ಎಂಥಾ ಕೊರತೆ! ನೀವು ಈ ದಿಶೆಯಲ್ಲಿ ಮುಂದರಿದು ನಮ್ಮವರಿಗೆ ವಿನೂತನ ವಚನ ಸಾಹಿತ್ಯದ ಪರಿಚಯ ಮಾಡಿಕೊಡಿ. ಇದಕ್ಕೆ ಆಕ್ಸ್‌ಫರ್ಡ್ ಸೂಕ್ತ ಕೇಂದ್ರ." ಹೀಗೆಂದು ಒತ್ತಾಯಿಸಿ ಅರ್ಜಿಯನ್ನು ಸಹ ಹಾಕಿಸಿದರು.

ವಾರಾಂತ್ಯದಲ್ಲಿ ಬರುತ್ತಿದ್ದ ಸ್ಟೀವನ್ಸ್‌ರ ಭೇಟಿ ಅತ್ಯಂತ ಉಪಯುಕ್ತವಾಗುತ್ತಿತ್ತು, ಅವರೂ ಹೆಚ್ಚಿನ ಅಧ್ಯಯನಕ್ಕೆ ತೊಡಗಿದ್ದರಿಂದ. ಇಲ್ಲೊಂದು ವಿಚಿತ್ರ ಹೇಳಬೇಕು ನಾನು. ಅವನ ತಾಯಿ ಲಕ್ಷಾಧೀಶೆ. ಬೃಹತ್ ಬಂಗಲೆ, ಬೆಲೆಬಾಳುವ ಕಾರು, ಸುಸಜ್ಜಿತ ಮನೆ, ನೂರಾರು ಪೌಂಡುಗಳ ಮನೆ ಬಾಡಿಗೆ; ಇಷ್ಟಿದ್ದೂ ನೌಕರಿಗೆ ಬೆಳಿಗ್ಗೆ ೯ ಕ್ಕೆ ಓಡುತ್ತಿದ್ದಳು. ನನಗೆ ಅಚ್ಚರಿಯಾಗಿ ಕೇಳಿದೆ "ಯಾಕಿಷ್ಟು ತರಾತುರಿ. ನಿಮಗೆ ಹೇರಳವಾಗಿ ಸಂಪತ್ತು ಇರುವಾಗ ಮತ್ತೇಕೆ ದುಡಿಮೆ....?

"ನನ್ನ ಗಂಡ ತೀರಿಕೊಂಡಾಗ ಬಾಳು ಅಸಹನೀಯವೆನಿಸಿತು. ಮನೆಯಲ್ಲಿದ್ದರೆ ಚಿಂತೆ, ಮಂಕು ಎಂದು ಕೆಲಸಕ್ಕೆ ಸೇರಿದೆ. ಈಗ ಅದುವೇ ಹಿತವೆನಿಸುತ್ತದೆ." ಈ ಉತ್ತರದಿಂದ ವಿಚಿತ್ರವೆನಿಸಲಿಲ್ಲ ನನಗೆ. ಈ ಬೃಹತ್ ಬಂಗಲೆಯಲ್ಲಿ ನಾಲ್ಕಾರು ಜನಕ್ಕೆ ಬಾಡಿಗೆ ಕೊಟ್ಟ ಮಹಾತಾಯಿ, ತನ್ನೊಬ್ಬನೇ ಮಗ, ಸಮಸ್ತ ಸಂಪತ್ತಿಗೆ ವಾರಸುದಾರನಾಗಲಿರುವವನನ್ನು ಬೇರೆ ಇಟ್ಟಿದ್ದಳು. ವಿರಸವಿಲ್ಲ, ಜಗಳವಿಲ್ಲ! ಆ ಸಮಾಜಕ್ಕದು ಸಹಜ. ಒಂದು ದಿನ ಕೇಳಿದೆ, "ಡಾ|| ಸ್ಟೀವನ್ಸ್ ಏಕೆ ಶನಿವಾರ ಮಾತ್ರ ಬಂದು ಭಾನುವಾರವಿದ್ದು ಸೋಮವಾರ ಹೋಗುವರು ?"

"ಅವನು ಬೇರೆ ಕೋಣೆ ಬಾಡಿಗೆ ಹಿಡಿದಿರುವ...." ತಾಯಿಯ ಉತ್ತರ.

"ಇಲ್ಲಿರುವುದಿಲ್ಲವೆ ?"

"ಇಲ್ಲಾ, ಇದು ನನ್ನ ಮನೆ...." (!!!) ನನಗೆ ಆಶ್ಚರ್ಯವು ಜಲಪಾತದಂತೆ ಭೋರ್ಗರೆಯಿತು. ನಾನು ಮನಸ್ಸಲ್ಲಿ ಊಹಿಸಿದೆ 'ಬಹುಶಃ ಈ ಹುಡುಗ ಈಕೆಯ ಗಂಡನ ಮಗ (?!) ಇರಬೇಕು ಎಂದು. ನನ್ನ ಊಹೆ ಸುಳ್ಳು. ಅವನು ಆಕೆಯ ಮಗನೇ! ಮುಂದುವರಿಸಿದಳು:

"ಮಕ್ಕಳು ದೊಡ್ಡವರಾಗುವ ತನಕ ನಮ್ಮ ಹೊಣೆ. ಆನಂತರ ತಮ್ಮ ಕಾಲಿನ ಮೇಲೆ ತಾವು ನಿಲ್ಲಬೇಕು. ಅದಕ್ಕಾಗಿ ಅವನ ದುಡಿಮೆಗೆ ತಕ್ಕಂತೆ ಸಣ್ಣ ಮನೆಯಲ್ಲಿದ್ದಾನೆ...." ಸ್ವಂತ ಬಲದ ಮೇಲೆ ಪಿ.ಹೆಚ್.ಡಿ. ಮಾಡಿ, ಮಾಡುತ್ತಲೇ ಒಂದು ಪುಸ್ತಕ ಬರೆದು ಪ್ರಕಟಿಸಿ, ಆರ್ಥಿಕ ಅನಾನುಕೂಲತೆಯಲ್ಲಿ ಬಳಲುತ್ತಿದ್ದ ಆ ವ್ಯಕ್ತಿಯ ಪಾಲಿಗೆ, ಅದೂ ಏಕಮಾತ್ರ ಪುತ್ರನಿಗೆ ತಾಯಿಯ ಸಂಪತ್ತಿನಲ್ಲಿ ಈಗ ಪಾಲಿಲ್ಲ ಎಂದರೆ ನನಗಿದು ವಿಲಕ್ಷಣವಾಗಿ ಕಂಡಿತು.

"ನನ್ನ ಸಾವಿನ ನಂತರ ಎಲ್ಲವೂ ಅವನದೆ ?" ಆಕೆ ನುಡಿದಳು.

ಯಾಕೋ ಆ ನಾಡಿನ ಕೆಲವು ಆಚರಣೆಗಳ ಬಗ್ಗೆ ತಿರಸ್ಕಾರ ಮೂಡಿತು, ಲಕ್ಷಾಧೀಶೆಯ ಮಗನೋರ್ವ, ಅದೂ ಉನ್ನತ ಗುಣಗಣಿ, ಸೌಜನ್ಯಶೀಲ, ವಿದ್ವಾಂಸ ತಾನಿನ್ನೂ ದುಡಿಯುತ್ತಿಲ್ಲವೆಂದು ಒಂದು ಬಡ ಕುಟೀರದಲ್ಲಿರುವುದು, ತನ್ನ ಕೈಲಿ ತಾನೇ ಬೇಯಿಸಿಕೊಂಡು ತಿನ್ನುವುದು, ಈಕೆಯಾದರೋ ಸುಖದ ಸುಪ್ಪತ್ತಿಗೆಯಲ್ಲಿರುವುದು. ಎಂಥಾ ವಿಪರ್ಯಾಸ! ಮಾತೃತ್ವಕ್ಕಿಂತಲೂ ಬೆಲೆಯುಳ್ಳದೇ ಧನಸಂಪತ್ತು ? ಹೃದಯವು ವಾತ್ಸಲ್ಯನಾದ ಮಿಡಿಯದ ಒಡಕು ವೀಣೆಯೆ ?

ಈ ಜೀವನ ವಿಧಾನವನ್ನು ತಾಯಿ–ಮಗ ಇಬ್ಬರೂ ಸಹಜವಾಗಿಯೇ ಸ್ವೀಕರಿಸಿದ್ದರು, ಆ ಸಮಾಜದ ಸ್ವಾಭಾವಿಕ ಪರಿಪಾಠವೆಂಬಂತೆ. ಅಷ್ಟೇ ಅಲ್ಲ ಡಾ|| ಸ್ಟೀವನ್ಸ್ ಲಂಡನ್ ವಿಶ್ವವಿದ್ಯಾಲಯಕ್ಕೆ ಆಯ್ಕೆಯಾಗಿದ್ದರು ಅಧ್ಯಾಪಕರಾಗಿ; ನೌಕರಿ ಭರವಸೆ ಸಿಕ್ಕ ತಕ್ಷಣ ರಖೈಲ್ ಎಂಬ ಯಹೂದಿ ಕನ್ಯೆಯನ್ನೂ ಗೊತ್ತುಪಡಿಸಿಕೊಂಡರು. ತಮಗಾಗಿ ಒಂದು ಮನೆ ಹುಡುಕತೊಡಗಿ, ಸೌತ್‌ವೇಲ್ಸ್ ಎಂಬ ಭಾಗದಲ್ಲಿ ಮನೆ ಕೊಂಡರು.

"ಇಡೀ ಬಂಗಲೆಯಲ್ಲಿ ಒಬ್ಬಳೇ ತಾಯಿ, ಲಂಡನ್ನಿನಿಂದ ಒಂದೂವರೆ ಎರಡು ತಾಸಿನ ದಾರಿಯ ನಗರದಲ್ಲೇಕೆ ವಾಸ ? ಇಲ್ಲೇ ಇರಬಹುದು." ಎಂದು ನಾನು ಪ್ರಸ್ತಾಪಿಸಿದಾಗ ಬಂದ ಉತ್ತರ :

"ಒಂದೇ ಮನೆಯಲ್ಲಿ ನಾವಿದ್ದರೆ ನಮ್ಮಿಂದ ತಾಯಿಗೆ ಸ್ವಾತಂತ್ರ್ಯ ಹರಣ, ಆಕೆಯಿಂದ ನಮಗೆ ಸ್ವಾತಂತ್ರ್ಯಾಭಾವ. ಆಕೆಯ ನಂತರ ಅದನ್ನು ಮಾರಿ ಇಲ್ಲಿಗೇ ಬಂದು ಬಿಡುತ್ತೇವೆ." ಇಂಥ ವಿಚಾರ ತಿಳಿದಷ್ಟೂ ನನ್ನ ತಲೆಯಲ್ಲಿ ಗೊಂದಲದ ಗುಡುಗು ಆರ್ಭಟಿಸುತ್ತಿತ್ತು. ತಾಯಿ-ಗೌರವ-ಸೇವೆ ಎಂಬ ವೃದ್ಧಾನುರಾಗವಾಗಲಿ, ಮಗು–ವಾತ್ಸಲ್ಯ-ಉಪಚಾರ ಎಂಬ ಮಮತೆಯಾಗಲಿ ಇಲ್ಲದ ಕೌಟುಂಬಿಕ ಬದುಕು ಎಂಥಾ ಮರಳ್ಗಾಡು ಎನಿಸಿತು.

ರೆವರೆಂಡ್ ರಾಬರ್ಟ್‌ಸನ್ನರಿಂದ ಫೋನ್ ಬಂದಿತು, ಅವರು ನನ್ನನ್ನು ಕಾಣಲು ಬರಲಿರುವುದಾಗಿ. ಅವರು ಲಂಡನ್ ವಾಸಿಯಾದ ಓರ್ವ ಕ್ರೈಸ್ತ ಪಾದ್ರಿ.

ಬಿ. ಬಿ. ಸಿ. ಯ ಪರವಾಗಿ ಬಸವಣ್ಣನವರ ವಿಶೇಷ ಅಧ್ಯಯನಕ್ಕಾಗಿ ಭಾರತವನ್ನು ಸಂದರ್ಶಿಸಿದ್ದವರು. ಆಗ ಬೆಂಗಳೂರಿಗೆ ಆಗಮಿಸಿ ಬಸವ ಭವನದಲ್ಲಿಯೂ ತಮ್ಮ ಉಪನ್ಯಾಸ ಮಾಡಿದ್ದರು. ಅದೇ ಸಂದರ್ಭದಲ್ಲಿ ನಾನು ವಿದೇಶ ಪ್ರವಾಸ ಬೀಳ್ಕೊಡುಗೆಗಾಗಿ ಹೈದ್ರಾಬಾದ್ ಕರ್ನಾಟಕದಲ್ಲಿ ಸಂಚರಿಸುತ್ತಿದ್ದೆ. ಶ್ರೀ ರಾಬರ್ಟಸನ್ ಮತ್ತು ಅವರ ಪತ್ನಿ ಈವಾರಿಗೆ ಪ್ರಥಮ ಸ್ತ್ರೀ ಜಗದ್ಗುರು ನಾನೆಂಬ ವಿಷಯ ತಿಳಿದು ಸಂದರ್ಶಿಸುವ ಅದಮ್ಯ ಆಕಾಂಕ್ಷೆ ಮೂಡಿ, ವಿಮಾನವನ್ನೇರುವ ಕಡೆ ಕ್ಷಣದ ವರೆಗೆ ಕಾಯ್ದರಂತೆ. ಕಡೆಗೆ ಸಂದೇಶವೊಂದನ್ನು ಅವರು ಬಿಟ್ಟು ಹೋಗಿದ್ದು, ನಾನು ಬೆಂಗಳೂರಿಗೆ ಹಿಂದಿರುಗುತ್ತಲೇ ಪತ್ರವನ್ನು ಬರೆದಿದ್ದೆ. ನಾನು ಇಂಗ್ಲೆಂಡಿಗೆ ಬರುವುದನ್ನೇ ಕಾಯುತಿದ್ದ ರಾಬರ್ಟಸನ್ನರು ನಮ್ಮ ನಿವಾಸಕ್ಕೆ ಬಂದರು.

ಭೇಟಿ ಹಾರ್ದಿಕವಾಗಿತ್ತು. ನಮ್ಮ ಕ್ರಾಂತಿಕಾರಿ ವಿಚಾರಗಳನ್ನು, ಬಸವಣ್ಣನವರ ಸಮಗ್ರ ಕ್ರಾಂತಿಯನ್ನು ತುಂಬಾ ಮೆಚ್ಚಿಕೊಂಡರು ರೆವರೆಂಡ್ ರಾಬರ್ಟ್ಸನ್. ಪೋರ್ಚೆಸ್ಟರ್ ಗಾರ್ಡನ್ಸ್‌ನಲ್ಲಿರುವ ತಮ್ಮ ಮನೆಗೆ ಕರೆದೊಯ್ದರು, ಭೂಗತ ರೇಲ್ವೆ ಮೂಲಕ. ಬಸ್ ವ್ಯವಸ್ಥೆಯು ಅತ್ಯಂತ ಸಮರ್ಪಕವಿದ್ದರೂ, ಲಂಡನ್ ಜನಸಂದಣಿಯ ಓಡಾಟದ ಒತ್ತಡವನ್ನು ಕಡಿಮೆ ಮಾಡುವಲ್ಲಿ ಭೂಗತ ರೇಲ್ವೆಗಳ ಪಾತ್ರ ಅದ್ಭುತ. ಟ್ಯಾಕ್ಸಿಗಳು ತೀರಾ ದುಬಾರಿ. ಗೊತ್ತಿಲ್ಲದ ಹೊಸ ಪ್ರವಾಸಿಗಳು ಟ್ಯಾಕ್ಸಿ ಬಳಸುವರೇ ವಿನಾ ಅಲ್ಲಿಯ ನಾಗರಿಕರಲ್ಲ. London Transport ವ್ಯವಸ್ಥೆ ಇಡೀ ಜಗತ್ತಿನಲ್ಲೇ ಬೃಹತ್ತಾದ ಸಂಚಾರ ವ್ಯವಸ್ಥೆ. 2000 ಚದರ ಮೈಲಿಯಷ್ಟು ವ್ಯಾಪಕವಾದ ಮತ್ತು ಕೇಂದ್ರ ಲಂಡನ್ನದಿಂದ ಸುತ್ತಮುತ್ತಲು ಸುಮಾರು ಮೂವತ್ತು ಮೈಲುಗಳ ವರೆಗೆ ಬಹುದಿಕ್ಕುಗಳಲ್ಲಿ ಈ ಸಂಚಾರ ವ್ಯವಸ್ಥೆಯುಂಟು. ಭೂಗರ್ಭ ರೇಲ್ವೆ, ಭೂ ರೈಲ್ವೆ, ಬಸ್ ಮತ್ತು ಮೋಟಾರ್ ಕೋಚ್‌ಗಳ ಮೂಲಕ ಈ ಸಂಚಾರೀ ವ್ಯವಸ್ಥೆ ಹಬ್ಬಿ ಹಸರಿಸಿದೆ. ಸಂಚಾರ ವ್ಯವಸ್ಥೆಯ ಭೂಪಟ ನೋಡಿದರೆ ಶುಭ್ರ ಪಾರದರ್ಶಕ ಗಾಜಿಗೆ ಕಲ್ಲು ಸಿಡಿದಾಗ ಮೂಡುವ ಅನಂತ ಸೀಳುಗಳಂತೆ ತೋರುತ್ತದೆ. ಅಥವಾ ಕೇಂದ್ರದಿಂದ ಬಹ್ವಗ್ರವಾಗಿ ಹೊರಡುವ ಜೇಡರ ಬಲೆಯಂತೆ ಭಾಸವಾಗುತ್ತದೆ.

ಭೂಗತ ರೇಲ್ವೆಯು ಅಡೆತಡೆಯಿಲ್ಲದೆ ಸಾಗುವ, ನಿಯಮಿತ ವೇಳೆಗೆ ನಮ್ಮನ್ನು ತಲುಪಿಸುವ ಮತ್ತು ನಿರಂತರವಾಗಿ ಕೆಲಸ ಮಾಡುವ ವ್ಯವಸ್ಥೆ. ಟಿಕೆಟುಗಳನ್ನು ಆಟೋಮ್ಯಾಟಿಕ್ ಆಗಿ ಪಡೆಯಲು ಯಂತ್ರಗಳು ಇರುತ್ತವೆ. ತಾವು ತಲುಪಲಿರುವ ನಿಲ್ದಾಣದ ಮೌಲ್ಯವನ್ನು ಯಂತ್ರದೊಳಗೆ ತೂರಿಸಿದರೆ ಟಿಕೆಟು ತಾನಾಗಿ ಹೊರ ಬರುತ್ತದೆ. ಅದನ್ನು ತೆಗೆದುಕೊಂಡು, ಪ್ರವೇಶಿಸುವ ದ್ವಾರದಲ್ಲಿರುವ ಯಂತ್ರದಲ್ಲಿ ತೂರಿಸಿದರೆ ಅದು ಮುಂಸಾಗಲು ತನ್ನ ತಡೆಯನ್ನು ತೆರೆಯುತ್ತದೆ. ಆಚೆಗೆ ಸಾಗಿ,

ತೂರಿ ಬಂದ ಆ ಟಿಕೆಟ್ ವಾಪಸ್ಸು ಎಳಕೊಂಡಾಗಲೇ ಆ ತಡೆ ಮತ್ತೆ ಮುಚ್ಚುತ್ತದೆ. ಇಷ್ಟೇ ಅಲ್ಲದೆ ನೋಟುಗಳಿಗೆ ಚಿಲ್ಲರೆ ಬೇಕಾದಾಗಲೂ ಯಂತ್ರಗಳು ಒದಗಿಸುತ್ತವೆ.

ಆಳವಾದ ಭೂಗರ್ಭದಲ್ಲಿ ಸಂಚರಿಸುವ ಈ ಜಾಲ ಅದ್ಭುತ ಸೃಷ್ಟಿ. ಹೋಗುವ, ಬರುವ ವಿದ್ಯುತ್ ಚಾಲಿತ ರೇಲ್ವೆಗಳಿಗೆ ಹಳಿಗಳೇ ಬೇರೆ ಬೇರೆ. ಮತ್ತು ಕಿಂಗ್ಸ್ ಕ್ರಾಸ್, ಬೇಕರ್ ಸ್ಟ್ರೀಟ್ ಮುಂತಾದ ದೊಡ್ಡ ಜಂಕ್ಷನ್‌ಗಳಂತೂ ಮೈಲುಗಟ್ಟಳೆ ವ್ಯಾಪಕವಾಗಿ ಭೂಗರ್ಭದಲ್ಲಿ ಹರಡಿರುತ್ತವೆ. ಐದು ನಿಮಿಷಗಳಿಗೊಮ್ಮೆ ಹಾಯುವ ಟ್ರೇನ್‌ಗಳಲ್ಲಿ ಸ್ವಯಂಚಾಲಿತ ದ್ವಾರ ವ್ಯವಸ್ಥೆ. ಆಳವಾದ ಪ್ಲಾಟ್ ಫಾರ್ಮುಗಳಿಗೆ ಇಳಿಯಲು, ಏರಲು ವಿದ್ಯುತ್ ಚಾಲಿತ ಸೋಪಾನಗಳು ಅಥವಾ ಎಸ್ಕಲೇಟರ್‌ಗಳು. ಪ್ರತಿಬಾರಿ ಲಿಫ್ಟ್‌ಗಳ ಸಹಾಯ ಮತ್ತು ಎಸ್ಕಲೇಟರ್‌ಗಳ ಸಹಾಯದಿಂದ ಮೇಲೇರುತ್ತಿದ್ದ ನನಗೆ ಒಂದು ತತ್ತ್ವ ನೆನಪಾಗುತ್ತಿತ್ತು. ಸ್ವಾಭಾವಿಕ ಸೋಪಾನಗಳನ್ನು ಏರುತ್ತ ಹೋದರೆ ಕಾಲಹರಣ ಮತ್ತು ವಿಪರೀತ ಶ್ರಮ. ಹಾಗೆಯೇ ದೈವೀಶ್ರದ್ಧೆಯಿಲ್ಲದೆ ಕೇವಲ ಪುರುಷ ಪ್ರಯತ್ನದಿಂದ ಮೇಲೇರಬಯಸುವವನ ಪ್ರಯತ್ನವೂ ಅಷ್ಟೇ. ದೈವಾನುಗ್ರಹದ ಬಲದ ಮೇಲೆ ಸಾಗಿದರೆ ಸುಲಭವಾಗಿ ಗುರಿಮುಟ್ಟಲು ಸಾಧ್ಯ.

ಪ್ರತಿ ಡಬ್ಬಿಯಲ್ಲೂ ನಮಗೆ ಸೂಕ್ತ ಮಾರ್ಗದರ್ಶನ. ನಿಲ್ದಾಣಗಳಲ್ಲಿ ಬೃಹದಾಕಾರದ ಭೂಗತ ರೇಲ್ವೆಯ ವಿದ್ಯುತ್ ಮ್ಯಾಪಿನ ಗುಂಡಿಯನ್ನು ಒತ್ತಿದರೆ ನೀವು ಹೋಗಬೇಕಾದ ಮಾರ್ಗ, ಬದಲಿಸಬೇಕಾದ ನಿಲ್ದಾಣ ಎಲ್ಲದರ ಬಗ್ಗೆ ಮಾಹಿತಿ. ಒಟ್ಟಾರೆ ಕಾಲ ಮತ್ತು ದೇಶವನ್ನು ಗೆಲ್ಲುವ ವಿಜ್ಞಾನದ ದೈತ್ಯಾಕಾಂಕ್ಷೆ ಇಲ್ಲಿ ಸಫಲ. ಲಂಡನ್ ನಗರದ ಮಧ್ಯದಲ್ಲಿ ಹಾಯುವ ಥೇಮ್ಸ್ ನದಿಯ ಅಡಿಯಲ್ಲೇ ಕೆಲವೊಮ್ಮೆ ಈ ರೇಲ್ವೆ ಜಾಲ ಸಾಗಿದೆ ಎಂದರೆ ಎಂತಹ ಆಶ್ಚರ್ಯ. ನದಿಯ ಕೆಳಗೇ ನಾವು ಸಾಗುತ್ತಿದ್ದೇವೆ ಎಂದರಿತರೆ ಅಚ್ಚರಿಯ ಮಹಾಪೂರ. ಸ್ವಯಂಚಾಲಿತ ಯಂತ್ರಗಳ ಮಹಿಮೆ ಅಪಾರ. ವಿಕ್ಟೋರಿಯಾದಂತಹ ದೊಡ್ಡ ದೊಡ್ಡ ನಿಲ್ದಾಣಗಳಲ್ಲಿ ಯಂತ್ರ ಮುಖೇನ ನಿಮಗೆ ಹಾಲು, ಕಾಫಿ, ಕೋಕೋ, ಟೀ, ತಿಳಿಸಾರು, ಚಾಕಲೇಟ್ ಇತ್ಯಾದಿ. ನಿಮಗೆ ಬೇಕಾದ ವಸ್ತುವಿನ ಮೌಲ್ಯದ ಪೆನ್ನಿಗಳನ್ನು ತೂತಿನಲ್ಲಿ ಹಾಕಿ ಗುಂಡಿ ಒತ್ತಿ ಎಳೆಯಿರಿ. ಗರಂ ಗರಂ ಕಾಫಿ, ಟೀ ಇತ್ಯಾದಿ ಹಾಜರ್. ಇದೆಲ್ಲವೂ ಸೋಜಿಗವೆ! ಅಪಾರ ವಿಶ್ವದಲ್ಲಿ ಮನುಷ್ಯ ನಿಂತಾಗ ಎಂತಹ ಕ್ಷುದ್ರನಾಗಿ ಕಾಣುವನೋ, ಅದೇ ಅಲ್ಪತನದ ಅರಿವು ಈ ಭೂಮ ವಿಜ್ಞಾನ ಲೋಕದಲ್ಲಿ ನಿಂತಾಗ.

ರೆವರೆಂಡ್ ರಾಬರ್ಟ್ಸನ್ ತಮ್ಮ ಮನೆಗೆ ಆತ್ಮೀಯತೆಯಿಂದ ಕರೆದೊಯ್ದು, ಶ್ರೀಮತಿ ಈವಾರ ಪರಿಚಯ ಮಾಡಿಸಿದರು. ಎರಡು ತಾಸುಗಳ ಕಾಲ ಕ್ರಿಸ್ತ ಮತ್ತು ಬಸವಣ್ಣನವರ ತತ್ತ್ವಗಳಲ್ಲಿನ ಸಾಮ್ಯ, ವೈಷಮ್ಯಗಳ ಬಗ್ಗೆ ಚರ್ಚೆ ನಡೆಯಿತು. ಮೋ ಇಪ್ಪತ್ತೆಂಟರಂದು ತಾವು ಪ್ರಾಧ್ಯಾಪಕರಾಗಿರುವ ಕೌನ್ಸಿಲ್ ಆಫ್ ಪ್ರೀಚರ್ಸ್ ಸಂಸ್ಥೆ

ಯಲ್ಲಿ ಭಾಷಣ ಗೈಯಬೇಕೆಂದು ವಿನಂತಿಸಿದರು. ದಕ್ಷಿಣ ಕೆನ್ಸಿಂಗ್‌ಟನ್‌ನಲ್ಲಿರುವ ಈ ಸಂಸ್ಥೆಯು ಪಾದ್ರಿಗಳನ್ನು ಮತ್ತು ಪ್ರಚಾರಕರನ್ನು ತರಬೇತಿಗೊಳಿಸುವ ತಾವು. ಇಂಗ್ಲೆಂಡಿನಾದ್ಯಂತದಿಂದ ಇಲ್ಲಿಗೆ ಅನೇಕ ಬೋಧಕರು, ಭಾವೀ ಪಾದ್ರಿಗಳು ಅಭ್ಯಸಿಸಲು ಬಂದಿದ್ದರು. ಮೇ 28, 1976 ರಂದು ಬೆಳಗಿನ ಹತ್ತೂವರೆಯಿಂದ ಹನ್ನೆರಡರ ವರೆಗೆ ನನ್ನ ಭಾಷಣ. ವಿಷಯ "ಹಿಂದೂ ಪರಂಪರೆಯ ಹಿನ್ನೆಲೆಯಲ್ಲಿ ಲಿಂಗಾಯತ ಧರ್ಮ." ಹಿಂದು ಪರಂಪರೆಯ ಉಗಮ, ಪ್ರಗತಿ, ಸುಧಾರಣೆಗಳನ್ನು ವಿವೇಚಿಸಿ, ಬಸವಣ್ಣನವರಿಂದ ರೂಪುಗೊಂಡ ಲಿಂಗಾಯತ ಧರ್ಮದ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟೆ. ಸಮತಾವಾದ, ಏಕದೇವೋಪಾಸನೆ, ಜಾತ್ಯತೀತ ಸಮಾಜ ರಚನೆಯ ದೃಷ್ಟಿಕೋನ ಮುಂತಾದ ತತ್ತ್ವಗಳನ್ನರಿತು ಸಂತಸಪಟ್ಟ ವಿದ್ಯಾರ್ಥಿಗಳು ಆಗಾಗ ಬಂದು ಭಾರತೀಯ ಧರ್ಮಗಳ ಪರಿಚಯ ಮಾಡಿಕೊಡಬೇಕೆಂದು ಒತ್ತಾಯಿಸಿದರು. ನಮ್ಮ ಧರ್ಮದ ಪ್ರಾರ್ಥನೆ ಮತ್ತು ಪೂಜಾವಿಧಾನ ನೋಡಲು ಉತ್ಸಾಹ ತೋರಿ, ಜೂನ್ ಇಪ್ಪತ್ತೈದರಂದು ಬರಬೇಕೆಂದು ಆಮಂತ್ರಿಸಿ, ದಿನಾಂಕ ನಿಶ್ಚಯ ಮಾಡಿದರು.

ರೆ|| ರಾಬರ್ಟ್‌ಸನ್ನರು ತಮ್ಮ ವಿದ್ಯಾರ್ಥಿಗಳು ನನ್ನ ಭಾಷಣ ಕೇಳಿ ಸಂತೋಷಪಟ್ಟುದನ್ನು ಕಂಡು, ಇಮ್ಮಡಿಸಿದ ಉತ್ಸಾಹದಿಂದ ತಮ್ಮ ಚರ್ಚಿಗೆ ಬಂದು ಪ್ರವಚನ ಮಾಡಲು ಆಮಂತ್ರಿಸಿದರು. ಜೂನ್ 6 ರಂದು ವೆಸ್ಟ್ ಬೋರ್ನ್ ಪಾರ್ಕಿನಲ್ಲಿರುವ ಸುಂದರವಾದ ಬ್ಯಾಪ್ಟಿಸ್ಟ್ ಚರ್ಚನ್ನು ಸಂದರ್ಶಿಸಿದೆ. "ಇಂದಿನ ವೈಜ್ಞಾನಿಕ ಯುಗದಲ್ಲಿ ಧರ್ಮದ ಆವಶ್ಯಕತೆ" ಎಂಬ ವಿಷಯ ಕುರಿತು ಪ್ರವಚನ ಮಾಡಿದೆ. ತಿಳಿಯಾದ ತತ್ತ್ವಜ್ಞಾನ, ದೃಷ್ಟಾಂತಗಳೊಡನೆ ಮೇಳೈಸಿ ಹೇಳಿದಾಗ ಮಕ್ಕಳಾದಿಯಾಗಿ ಎಲ್ಲರೂ ಕುತೂಹಲದಿಂದ ಕೇಳಿದರು. ಸರಳ ಉದಾಹರಣೆ, ಕಥೆ, ಉಪಮಾನಗಳಿಂದ ಪ್ರಸ್ತುತ ಜಗತ್ತಿನ ಶಾಂತಿಗೆ ಧರ್ಮ-ಆಧ್ಯಾತ್ಮ-ಯೋಗಗಳು ಎಷ್ಟು ಅವಶ್ಯಕವೆಂದು ಹೇಳಿದಾಗ ಸಂತೋಷಭರಿತರಾದರು. ಒಂದು ಗಂಟೆಯ ಕಾಲ ಪ್ರವಚನ ಮಾಡಿದರೂ ಅವರ ಹಸಿವು ತಣಿದಿರಲಿಲ್ಲ.

ಭಾಷಣ ಮುಗಿಸಿದಾಗ ಧನ್ಯವಾದ ಹೇಳಲು ಬಂದು, 'ಇಂಥ ಭಾಷಣ ನಾವೆಂದೂ ಕೇಳಿಯೇ ಇರಲಿಲ್ಲ. ಎಷ್ಟು ಚೆನ್ನಾಗಿ ಧರ್ಮದ ಅವಶ್ಯಕತೆ ನಮಗೆ ಮನಗಾಣಿಸಿಕೊಟ್ಟಿರಿ' ಎಂದು ಉದ್ಗರಿಸಿದರು. ರೆ|| ರಾಬರ್ಟ್‌ಸನ್ನರು, 'ಮಾತಾಜಿ, ನಿಮ್ಮ ನಿರೂಪಣಾ ಕಲೆ ಅದ್ಭುತವಾಗಿದೆ. ಎಷ್ಟು ಬೇಗನೇ ಶ್ರೋತೃಗಳನ್ನು ಅಲರ್ಟ್ ಮಾಡಿ, ನಿಮ್ಮ ಕಡೆ ಎಳೆದುಕೊಳ್ಳುವಿರಿ. ಅಂದು ನಮ್ಮ ಬೋಧಕರ ತರಬೇತಿ ಸಂಸ್ಥೆಯಲ್ಲಿ ನನಗಷ್ಟು ಆತಂಕವಿರಲಿಲ್ಲ. ಅದು ಪಂಡಿತರ, ವಿದ್ವಾಂಸರ, ಆಳವಾದ ಅಧ್ಯಯನ ಇದ್ದಂತಹವರ ಸಭೆ. ಅಲ್ಲಿಯೂ ಪ್ರೌಢವಾಗಿ ಮಾತನಾಡಿದಿರಿ. ಇದಾದರೋ ಅಬಾಲ ವೃದ್ಧರಾದಿಯಾಗಿ, ಪಂಡಿತ-ಪಾಮರರ ಸಮ್ಮಿಶ್ರ ಸಭೆ. ಇಲ್ಲಿಯೂ

ಇವರ ಮನಸ್ಸು ಸೂರೆ ಮಾಡಿದಿರಿ. ನಿಮ್ಮ ಗ್ರಹಣ ಶಕ್ತಿ ಅಷ್ಟೇ ತೀಕ್ಷ್ಣ. ಎಷ್ಟು ಬೇಗನೇ ನಮ್ಮವರಿಗೆ ಅರ್ಥವಾಗುವಂತೆ ಶಬ್ದಗಳನ್ನು ಬಳಸಿದಿರಿ." ರಾಬರ್ಟ್‌ಸನ್ನರ ಆನಂದ ಮೇರೆವರಿದಿತ್ತು.

"ಇಷ್ಟು ಸಣ್ಣ ವಯಸ್ಸಿನ ಮಹಿಳೆ, ಪ್ರಥಮ ಸ್ತ್ರೀ ಜಗದ್ಗುರು" ಅಲ್ಲದೇ ಭಾರತೀಯ ಮಹಿಳೆ ಆಂಗ್ಲರನ್ನುದ್ದೇಶಿಸಿ ಹೇಗೆ ಮಾತಾಡುವರೋ" ಎಂದು ಮೈಯೆಲ್ಲಾ ಕಣ್ಣಾಗಿ ಗಮನಿಸುತ್ತ, ಸರ್ವಾಂಗ ಕಿವಿಯಾಗಿ ಆಲಿಸುತ್ತ ಆಸೀನರಾಗಿದ್ದ ಸಭಿಕರ ಮುಖದ ಮೇಲೆ ಸಂತೃಪ್ತಿ, ಮೆಚ್ಚುಗೆಗಳ ಸಮ್ಮಿಶ್ರ ಭಾವವು ತುಂಬಿ ತುಳುಕುತ್ತಿತ್ತು. ನನ್ನ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿದುದರಿಂದ ಹೃದಯವು ಮುದಗೊಂಡಿತ್ತು.

(ಸಶೇಷ)

ವಿಶೇಷ ಸೂಚನೆ: ಚೆಕ್ ಮುಖಾಂತರ ಚಂದಾಹಣವನ್ನು ಕಳಿಸಬಯಸುವವರು ರೂ. ೧೩—೦೦ ಹದಿಮೂರು ಕಳಿಸಬೇಕು. ಬ್ಯಾಂಕ್ ಛಾರ್ಜನ್ನು ಅವರು ಸ್ವೀಕರಿಸುವರು.

—ವ್ಯವಸ್ಥಾಪಕ.

ಧರ್ಮಕ್ರಾಂತಿಯ ದಿವ್ಯಜ್ಯೋತಿ
ಪೂಜ್ಯ ಜಗದ್ಗುರು ಮಾತೆ ಮಹಾದೇವಿ

—ಗೊ. ರು. ಚನ್ನಬಸಪ್ಪ

ಯಾರೂ ಸಾಯದೆ ಇರುವ ಮನೆಯಲ್ಲಿ ಸಾಸಿವೆ ತರಲು ಹೇಳಿದ ಬುದ್ಧ. "ನನ್ನ ಮಗು ಉಳಿಯುವುದಾದರೆ ತರಲು ಸಿದ್ಧ" ಎಂದಳು ಕಿಸಗೌತಮಿ. ಆದರೆ ಅಂತಹ ಮನೆ ಸಿಗಲಿಲ್ಲ; ಆಕೆಯ ಮಗು ಉಳಿಯಲಿಲ್ಲ. ಆದರೂ ತಾಯಿಗೆ ಸಮಾಧಾನ. ಕಾರಣ– ಆಕೆಯಂಥವರು ಬಹಳ ಜನ!

ಆಯುಸ್ಸೋ, ಆಕಸ್ಮಿಕವೋ ? ಸರದಿ ಬಂದಾಗ ಸಾಯುವುದು ಸಹಜ. ಅದಕ್ಕೆ ಮುನ್ನವೇ ಸಾಯಲೆಳಸುವುದು ಆತ್ಮಹತ್ಯೆ. ಈ ಆತ್ಮಹತ್ಯೆಯನ್ನು ಕೆಲವರು ಮಾಡಿಕೊಳ್ಳುತ್ತಾರೆ; ಬಹಳ ಜನ ಬೇಡವೆನ್ನುತ್ತಾರೆ. ಶಾಸ್ತ್ರದ ದೃಷ್ಟಿಯಿಂದ 'ಆತ್ಮಹತೆ' ಅಪರಾಧ ; ಮಹಾ ಅಪರಾಧ !

ಈ ತಿಂಗಳ ಮಂಗಳ ಮೂರ್ತಿ ಅಂತಹ ಓರ್ವ 'ಅಪರಾಧಿ' ಎಂದರೆ 'ಕಲ್ಯಾಣ ಕಿರಣ'ದ ಓದುಗರ ಕುತೂಹಲ ಅರಳಬಹುದು! (ಅಥವಾ ಈ ಲೇಖಕನ ಮೇಲೆ ಕ್ರೋಧದ ಕಿಡಿ ಕೆರಳಬಹುದು. ಆದರೆ ಸತ್ಯ ಹೇಳುವುದು ಧರ್ಮ. ಅದೇ ಈ ಬರೆಹದ ಮರ್ಮ!)

ಇಂದು ನಮ್ಮ ನಾಡಿನ ಧರ್ಮ ಕ್ಷೇತ್ರದಲ್ಲಿ ಪೂಜ್ಯರೆನಿಸಿರುವ ಮಾತೆ ಮಹಾದೇವಿ ಅವರು 'ಆತ್ಮಹತ್ಯೆ' ಮಾಡಿಕೊಂಡುದು ಒಂದೆರಡು ಬಾರಿಯಲ್ಲ ; ಮೂರು ಬಾರಿ ! ವಿಷಯ ಮತ್ತಷ್ಟು ಒಗಟಾಯಿತಲ್ಲವೆ ?

ಆದರೆ, ಸತ್ಯ ಸಂಗತಿ. ಒಮ್ಮೆ ದೈಹಿಕವಾಗಿ, ಇನ್ನೊಮ್ಮೆ ಮಾನಸಿಕವಾಗಿ, ಮತ್ತೊಮ್ಮೆ ಬೌದ್ಧಿಕವಾಗಿ ಅವರ 'ಆತ್ಮಹತ್ಯೆ' ನಡೆದಿದೆ ! ಅಹುದು. ಆದರೆ ಅವರ ಆತ್ಮಹತ್ಯೆಯ ಗುಟ್ಟೇ ಬೇರೆ. ದೈಹಿಕ ಸುಖಾಪೇಕ್ಷೆಗಳು ಬಂದು ಕಾಡುವ ಮುನ್ನವೇ ಕಡಿದು ಹಾಕಿದುದು ಮೊದಲ 'ಆತ್ಮಹತ್ಯೆ' ; ಮಾನಸಿಕ ಚಾಂಚಲ್ಯವನ್ನು ಮುರಿದಿ

ಕ್ಕಿದುದು ಎರಡನೆಯದು ; ಬೌದ್ಧಿಕ ಅಹಂಭಾವನೆಯ ಹುಟ್ಟಡಗಿಸಿದುದು ಮೂರನೆಯ 'ಆತ್ಮಹತ್ಯೆ' !

ಇದಲ್ಲದ ಆತ್ಮಹತ್ಯೆಯಿಂದ ಸತ್ತರೆ ಅಕಾಲ ಮರಣ. (ಬದುಕಿದರೆ ತ್ರಿಕಾಲ ಶರಣ!) ಪೂಜ್ಯ ಮಾತಾಜಿ ಈ 'ಆತ್ಮಹತ್ಯೆ'ಯ ಎಲ್ಲ ಹಂತಗಳನ್ನೂ ಮೀರಿದ್ದಾರೆ. ಕಾಲ–ಕರ್ಮ–ಮಾಯೆಗಳ ಆವರಣ ದಾಟಿ ಬಂದಿದ್ದಾರೆ. ಆತ್ಮವಿದ್ಯೆಯಲ್ಲಿ ಎದ್ದು ನಿಂತಿದ್ದಾರೆ. ಇನ್ನು ಅವರಿಗೆ ಸಾವಿಲ್ಲ,- ಸಾಯುಜ್ಯ ಮಾತ್ರ !

ಓದುಗರಿಗೆ ಇಷ್ಟರಲ್ಲಿ ಸಾಕಷ್ಟು ಸಿಟ್ಟು ಬಂದಿರಬೇಕು. ಮಂಗಳ ಮೂರ್ತಿಯ ಬಗ್ಗೆ ಬರೆಯುವ ಆರಂಭದಲ್ಲೇ ಸಾವಿನ ಸುದ್ದಿ ! (ಈ ಲೇಖಕನದು ಎಂತಹ ಬುದ್ಧಿ?) ಅಮಂಗಳವೇನಿಲ್ಲ. ಈ ಕ್ರಮ ಉದ್ದೇಶಪೂರ್ವಕ. ಕಾರಣ, ಶರಣರ ದೃಷ್ಟಿಯಲ್ಲಿ ಮರಣ ಮಹಾನವಮಿ ! ನಂತರ ತಾನೇ ವಿಜಯ ದಶಮಿ ?

ಸತ್ತರೆ ಮಾತ್ರ ಹುಟ್ಟಿಗೆ ಸಾರ್ಥಕತೆ: ಆದ್ದರಿಂದ ಸಾವಿಗೆ ಮೊದಲ ಆದ್ಯತೆ ! ಸಾವೆಂದರೆ ಭೌತಿಕ ದೇಹ ಅಳಿಯುವುದಲ್ಲ; ದೇಹ ದೌರ್ಬಲ್ಯಗಳು ಅಳಿಯುವುದು. ಇಂತಹ; ಸಾವು ಯಾರಿಗೆ ಬೇಡ ? ಆದುದರಿಂದಲೇ 'ಸಾವಿ'ಗೆ ಮುನ್ನ 'ಸಾಯು'ವುದು ಒಂದು ಸಿದ್ಧಿ. ದೇಹ ದೌರ್ಬಲ್ಯಗಳನ್ನು ಅಳಿಸಿದರೆ ಸಾವನ್ನು ಗೆದ್ದಂತೆ. ಮಾತಾಜಿ ಅವರ ಬದುಕು ಈ 'ಸಾವ' ಗೆಲ್ಲುವ ಪಾಠ !

'ಮಾತಾಜಿ' ಈಗ ಕನ್ನಡ ನಾಡಿಗೆಲ್ಲ ಪರಿಚಿತ. ಪರಿಚಿತರ ಪರಿಚಯವೇಕೆ ? ಉದ್ಭವಿಸಬಹುದಾದ ಸಹಜ ಪ್ರಶ್ನೆ. ಇದು ಪರಿಚಯವಲ್ಲ; ಪ್ರಣಾಮ ಸಲ್ಲಿಕೆ. ಅವರ ಹುಟ್ಟು ಹಬ್ಬಕ್ಕೆ ನುಡಿಕಾಣಿಕೆ !

ಗೃಹ ಬಂಧನ ಬಿಡಿಸಿಕೊಂಡು ಗುರು ಮಂದಿರ ಸೇರಿದ ಈ ಕಾರಣ ಮೂರ್ತಿಯ ಬದುಕೊಂದು ಮಹಾ ಕಾವ್ಯ. ಈ ಕಾವ್ಯದ ಪುಟ ಪುಟವೂ ನವ್ಯ ; ಭವ್ಯ ! ನುಡಿ ನುಡಿಯೂ ಮೃಡವಾಣಿ, ಮತ್ತೆ ಮತ್ತೆ ಓದಬೇಕೆನಿಸುತ್ತದೆ. ವಿಚಾರ ವೈಭವ ಅಲ್ಲಿ ವಿಜೃಂಭಿಸಿರುವ ರಸ ; ವಿಕಾರ ಅಲ್ಲಿ ಕಾಲ ಕಸ !

ಪೂರ್ವಾಶ್ರಮದ ಹೆಸರು ರತ್ನಮ್ಮ. ಜನನ ೧೯೪೬ ರ ಮಾರ್ಚ್ ೧೩ ರಂದು. ನಡು ಹಗಲು ; ಸುಡು ಬಿಸಿಲು ! ಹೆತ್ತ ತಾಯಿ ಗಂಗಮ್ಮ ; ತಂದೆ ಬಸಪ್ಪ. ಇದೂ ಒಂದು ಯೋಗಾಯೋಗ. ಶರಣ ಧರ್ಮದ ಬ್ರಹ್ಮ–ಬಸವಣ್ಣ ; ಅವನ ಧರ್ಮ ಪತ್ನಿ ಗಂಗಾಂಬಿಕೆ. ಅದೇ ಹೆಸರಿನ ದಂಪತಿಗಳೇ ಮಾತಾಜಿಯ ತಂದೆತಾಯಿ !

ವೀರ ಪರಂಪರೆಯ ಚಿತ್ರಕಲ್ ದುರ್ಗವು ಬಸವಧರ್ಮ ಪ್ರಸಾರಕ್ಕೆಂದೇ ಕೊಟ್ಟ ಕಾಣಿಕೆ ಮಾತಾಜಿ. ಬಾಲ್ಯದಲ್ಲೇ ಸಚ್ಚಿದಾನಂದದ ಅರಗಿಳಿಯ ಕರೆದು ಅದರೊಡನೆ

ಆಟವಾಡಿದ ಶಿವಶಿಶು ಮಾತಾಜಿ. ಉಸಿರೆಲ್ಲ ಬಸವ ನಾಮ!

ಯೌವ್ವನದ ಪ್ರಾಂತ್ಯಕ್ಕೆ ಕಾಲಿಡುವಷ್ಟರಲ್ಲೇ ತಂದೆಯ ಅಗಲಿಕೆ. ತಾತನ ಪ್ರೀತಿಯ ರಕ್ಷೆಯಲ್ಲೇ ಕಲಿಕೆ. ಶಾಲಾ ಕಾಲೇಜುಗಳ ಓದು ಲೀಲಾ ಜಾಲ! ಹೊಸ ದಿಗಂತದಲ್ಲಿ ವಿಹರಿಸುವ ಹಂಬಲ.

ಅಷ್ಟರಲ್ಲೇ ಮೈಗೂಡಿಕೊಂಡಿದ್ದ ಸಾಹಿತ್ಯಾಸಕ್ತಿ. ಮಹಾನುಭಾವಿ ಅಕ್ಕಮಹಾ ದೇವಿಯು ಆದರ್ಶಮೂರ್ತಿ. ಭಕ್ತಿ ಸಾಮ್ರಾಜ್ಯದಲ್ಲಿ ಸೇರುವ ಸತ್ಯ ಸಂಕಲ್ಪ. ಮದು ವೆಯ ಮಾತು ಬಂದಾಗ ಆ ಸಂಕಲ್ಪ ಮತ್ತಷ್ಟು ಸ್ಫುಟ. ಮನೆಯವರ ಹಠ ಹೆಚ್ಚಾ ದಾಗ ಮನೆಯಿಂದಲೇ ನಿರ್ಗಮನ! ದಾವಣಗೆರೆಯಲ್ಲಿದ್ದ ವಿಶ್ವಕಲ್ಯಾಣ ಮಂಟಪಕ್ಕೆ ಆಗಮನ—"ಅಣ್ಣನ ಅನುಭವ ಮಂಟಪಕ್ಕೆ ಅಕ್ಕಮಹಾದೇವಿ ಆಗಮಿಸಿದಂತೆ; ಶ್ರೀ ಅರವಿಂದರ ಆಶ್ರಮಕ್ಕೆ ಶ್ರೀ ಮಾತೆ ಬಂದಂತೆ!"

ಮಾತಾಜಿ ಅವರು ಮನೆ ಬಿಟ್ಟಾಗ ಹತ್ತೊಂಭತ್ತು ವರ್ಷ. ತುಂಬು ಹರೆಯ. ಅರಸಿ ಹೊರಟುದು ಭೋಗವನ್ನಲ್ಲ; ಯೋಗವನ್ನು!

ನಿಜ; ಅದು ಶ್ರುತಿ ಮಾಡಿದ ವೀಣೆ. ಆದರೆ ನುಡಿಸಿಕೊಳ್ಳಲಾರದು ತನ್ನಷ್ಟಕ್ಕೆ ತಾನೆ! ಅದನ್ನು ಕೈಯಿಂದ ನುಡಿಸಬೇಕು. ಯಾರೆಲ್ಲ ನುಡಿಸಿದರಾಗದು. ಬಲ್ಲವರು ನುಡಿಸಬೇಕು. ಆಗ ಮಾತ್ರ ಮಧುರನಾದ ಹೊರ ಹೊಮ್ಮೀತು! ಹಾಗೆ ನುಡಿಸಬಲ್ಲ ಕುಶಲ ಕಲೆಗಾರನೇ ಗುರು. ಮಾತಾಜಿಯವರಲ್ಲಿ ಸುಪ್ತವಾಗಿದ್ದ ಸಂಗೀತಕ್ಕೆ, ರಸಾನು ಭೂತಿಗೆ, ಚಿನ್ಮಯ ಬೆಳಕಿಗೆ, ಅನುಭವ ಪರಾಗಕ್ಕೆ ವ್ಯಕ್ತ ಸ್ವರೂಪ ಕೊಡಬಲ್ಲ ಓರ್ವ ಗುರು ಬೇಕಾಗಿತ್ತು. ವಿಶ್ವಕಲ್ಯಾಣ ಮಂಟಪದಲ್ಲಿ ಆ ಗುರು ದೊರೆತರು. ಅವರೇ ಕ್ರಾಂತಿಯೋಗಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು.

ಮಾತಾಜಿಯವರ ಅಂತರಂಗದ ಆತ್ಮಜ್ಯೋತಿಯನ್ನು ಗುರುತಿಸಿದ ಸ್ವಾಮಿಗಳ ವರು ಆ ಜ್ಯೋತಿ ಬೆಳಗಿಸಲು ಆದರಣೆಯ ಶುದ್ಧ ತೈಲ ಎರೆದರು. ಅವರು ನೀಡಿದ ಇಷ್ಟ ಲಿಂಗದೀಕ್ಷೆಯಿಂದ ಮಾತಾಜಿ ಬಾಳಿನಲ್ಲಿ ಹೊಸ ಅಧ್ಯಾಯದ ಆರಂಭ. ಧರ್ಮ ದೀಕ್ಷೆಯಲ್ಲಿ ಅದೊಂದು ವಿಶಿಷ್ಟ ಹೆಜ್ಜೆ. ಪೂಜ್ಯ ಲಿಂಗಾನಂದ ಸ್ವಾಮಿಗಳು ದೀಕ್ಷಾಗುರು ಗಳಾದರು. ಪೂರ್ವಾಶ್ರಮ ತೊರೆದು ಪುನರ್ಜಾತರಾದ ಮಾತಾಜಿ ಅವರು ತಮ್ಮ ದೀಕ್ಷಾ ಗುರುವಿನ ಆಧ್ಯಾತ್ಮ ತಾಯಿಯಾದರು. ಅಂದು 'ಮಾತೆ ಮಹಾದೇವಿ' ಎನಿ ಸಿದರು!

ಅದಮ್ಯ ಚೇತನ, ಅವಿರಳ ಅಭ್ಯಾಸ, ಸಾಧನೆಯ ಸಾಹಸ. ಸಾಲದೆಂಬಂತೆ ಗುರು ಕಾರುಣ್ಯ–ಮಾತೆ ಮಹಾದೇವಿಯವರ ಮುಖದಲ್ಲಿ ಚಿತ್ಕಳೆ ಮೂಡಿತು. ಅವರು

ಸ್ವಯಂ ಓಂಕಾರದ ಉದ್ಗೀತವಾದರು! ಸೃಜನಾತ್ಮಕ ಸಾಹಿತ್ಯದ ಚಿಲುಮೆಯಾದರು. 'ಮಾತೃವಾಣಿ' ಓತಪ್ರೋತವಾಗಿ ಹರಿಯತೊಡಗಿತು!

ಭಕ್ತಿ 'ಅಹಂಕಾರದ ಅಮಲಲ್ಲ; ಅಭಿಮಾನದ ಅಟ್ಟಹಾಸವಲ್ಲ; ಉದಾಸೀನದ ಉಸಿರಲ್ಲ; ಫಲಾಪೇಕ್ಷೆಯ ಫಸಲಲ್ಲ; ಮೋಸದ ಗ್ರಾಸವಲ್ಲ; ಲೋಭದ ಲಾಭವಲ್ಲ" ಹೋಗುತ್ತ ಬರುತ್ತ ಕೊರೆಯುವ ಗರಗಸ! ಆದರೂ ಮಾತೆ ಮಹಾದೇವಿ ಅದನ್ನು ಅಂಗೀಕರಿಸಿದರು. ಇದು ಸಾಮಾನ್ಯ ಮಾತಲ್ಲ.

ಲಿಂಗ ದೀಕ್ಷೆಯ ನಂತರ ಬದುಕಿನಲ್ಲಿ ಮತ್ತೊಂದು ಘಟ್ಟ-ಜಂಗಮದೀಕ್ಷೆ. ಕಾವಿ ಲಾಂಛನ ಧಾರಣೆ. ಪರಮ ಜಂಗಮಮೂರ್ತಿ ಅಕ್ಕಮಹಾದೇವಿಯ ಆದರ್ಶದ ಪ್ರತಿಜ್ಞೆ. ಬಸವ ಧರ್ಮ ಪ್ರಸಾರಕ್ಕೆ ಕಂಕಣ. ಹಿಮಾಚಲದವರೆಗೆ ಪಯಣ. ಪ್ರಸಿದ್ಧ ಧರ್ಮ–ತತ್ವ ಕೇಂದ್ರಗಳ ದರ್ಶನ. ಅನುಭವ–ಅನುಭಾವಗಳ ವಿಸ್ತರಣ.

ಬಸವ ಕಲ್ಯಾಣದಲ್ಲೊಂದು ದಿನ. ೧೯೭೦ರ ಡಿಸೆಂಬರ್ ೨೮. ಬಸವೇಶ್ವರರ ಅಷ್ಟ ಶತಮಾನೋತ್ಸವದ ಆಚರಣೆ. ಮಾನ್ಯರಾದ ವ್ಹಿ. ವ್ಹಿ. ಗಿರಿ, ಸಿದ್ಧವ್ವನಹಳ್ಳಿ ನಿಜಲಿಂಗಪ್ಪ, ಬಸಪ್ಪ ದಾನಪ್ಪ ಜತ್ತಿ ಅವರಂತಹ ಅತಿಥಿಗಳು. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಜಗದ್ಗುರು ಮೂರು ಸಾವಿರ ಮಠಾಧ್ಯಕ್ಷರಂತಹ ಧರ್ಮ ಗುರುಗಳ ನೇತೃತ್ವ. ಮಾತಾಜಿ ಅವರ 'ಬಸವ ತತ್ತ್ವ ದರ್ಶನ' ಅಲ್ಲಿ ಬಿಡುಗಡೆ.

ಅಂದು ಮಾತಾಜಿ ಅವರು ಮಾಡಿದ ಭಾಷಣ ಈ ಶತಮಾನದ ವೀರಘೋಷಣೆ! "ಸ್ತ್ರೀ ಸಮಾನತೆ, ಧಾರ್ಮಿಕ ಸಮತೆಯನ್ನು ಹೇಳಿಕೊಳ್ಳುತ್ತ ಬಂದಿದ್ದರೂ ಯಾವ ಸ್ತ್ರೀಗೂ ಜಗದ್ಗುರುವಾಗಲಿಕ್ಕೆ ಅವಕಾಶವಿತ್ತಿಲ್ಲ. ಅದಕ್ಕಾಗಿ ನಾನು 'ಅಕ್ಕಮಹಾದೇವಿ ಜಗದ್ಗುರು ಪೀಠ'ಸ್ಥಾಪನೆ ಮಾಡುವೆ. ಅದಕ್ಕೆ ಸ್ತ್ರೀಯರೇಜಗದ್ಗುರುಗಳಾಗಬೇಕು." ಇಡೀ ಸಭೆಯಲ್ಲಿ ಮಿಂಚಿನ ಸಂಚಾರ. ಸಮ್ಮತಿಯ ಹರ್ಷೋದ್ಗಾರ! ಆ ತೇಜೋಮೂರ್ತಿಯ ಮುಖದಿಂದ ಹೊರಬಂದ ವೀರವಾಣಿ ಬೀರಿದ ಪರಿಣಾಮ ಅನುಪಮ!

ಮಾತಾಜಿ ಅಂದು ಆಡಿದ ಮಾತಿಗೆ ಮುಂದಿನ ನಾಲ್ಕು ತಿಂಗಳಲ್ಲೇ ಸಿದ್ಧಿ. ಅಕ್ಕನ ಎಂಟು ನೂರನೆಯ ಜಯಂತಿಯಂದು 'ಜಗನ್ಮಾತಾ ಅಕ್ಕ ಮಹಾದೇವಿ ಆಶ್ರಮ'ದ ಉದ್ಘಾಟನೆ. ಸ್ತ್ರೀ ಕುಲದ ಉದ್ಧಾರಕ್ಕಾಗಿ ಆಶ್ರಮದ ಮೇಲೆ ಪಟಸ್ಥಲ ಧ್ವಜದ ವಿಜೃಂಭಣೆ!

ಮತ್ತೆ ಎರಡು ವರ್ಷ ಕಳೆಯುವಲ್ಲಿ 'ಜಗದ್ಗುರು ಅಕ್ಕಮಹಾದೇವಿ ಅನುಭಾವ ಪೀಠ' ಸ್ಥಾಪನೆ. ವಿಶ್ವದ ಧಾರ್ಮಿಕ ಇತಿಹಾಸದಲ್ಲೇ ಅಪೂರ್ವ ಘಟನೆ. ಜಗತ್ತಿನ ಯಾವ ಧರ್ಮ ದವರೂ ಸಾಧಿಸದ ಅದ್ಭುತ ಕ್ರಾಂತಿ! ಪೂಜ್ಯ ಮಾತಾಜಿ ಪೀಠದ ಮೊದಲ ಜಗದ್ಗುರು ಗಳಾಗಿ ಅಧಿಕಾರ ಸ್ವೀಕರಿಸಿದ ದಿನ ಸ್ಮರಣೀಯ! ವಿಶ್ವದ ಪ್ರಪ್ರಥಮ ಮಹಿಳಾ

ಜಗದ್ಗುರುವನ್ನು ನೀಡಿದ ಪುಣ್ಯ ಕನ್ನಡ ನಾಡಿನದು. ಪೀಠಾರೋಹಣ ಸಮಾರಂಭದಲ್ಲಿ ವೈಚಾರಿಕರಿಂದ ಹರ್ಷದ ಅಮೃತ ವರ್ಷ! ಅದೊಂದು ರೋಮಾಂಚಕಾರಿ ಸಮಾರಂಭ.

ಆದರೆ ಕೆಲವು ಹಳೆಯ ತಂಬೂರಿಗಳಿಂದ ಅಪಶ್ರುತಿ. (ಅಸಹನೆಯ ಕಿಚ್ಚಿನಲ್ಲಿ ಸ್ವಯಂ ಆಹುತಿ!) ವಿಚಿತ್ರವೆಂದರೆ, ಶರಣ ಧರ್ಮಿಗಳೆಂದು ಹೇಳಿಕೊಳ್ಳುತ್ತಿದ್ದವರಿಂದಲೇ ಬಂದ ವಿರೋಧ. ಇಂತಹವರನ್ನು ಕಂಡು ಮಹಾಕವಿ ಕುವೆಂಪು ಒಂದು ಮಾತು ಹೇಳುತ್ತಾರೆ—

"ಕತ್ತಿ ಪರದೇಶಿಯಾದರದು ನೋವೆ?
ನಮ್ಮವರೆ ಹದ ಹಾಕಿ ತಿವಿದರದು ಹೂವೆ?"

ಏನಾದರೂ ಮಾತಾಜಿ ಧೃತಿಗೆಡಲಿಲ್ಲ. ಅಕ್ಕನ ಭದ್ರ ರಕ್ಷೆಯಲ್ಲಿ ಮುನ್ನಡೆದರು. ಅವರು ಆಗ ವಿರೋಧಿಗಳಿಗೆ ಕೊಟ್ಟ ಉತ್ತರ ವೈಚಾರಿಕ ಕ್ರಾಂತಿಯ ಅನುಶಾಸನ!

ಮಾತಾಜಿ ಅವರು ಜಗದ್ಗುರು ಪೀಠ ಸ್ಥಾಪಿಸಿದುದು ಸ್ವಂತಕ್ಕಲ್ಲ; ಸಮಾಜಕ್ಕೆ. 'ಜಗದ್ಗುರು' ಬಿರುದಿಗಲ್ಲ; ವಿವೇಕಹೀನ ಪಾರತಂತ್ರ್ಯದಲ್ಲಿರುವ ಸ್ತ್ರೀ ಸಮುದಾಯದ ಸ್ವಾತಂತ್ರ್ಯಕ್ಕೆ. ಹೆಣ್ಣಿನ ಸ್ವಾಭಿಮಾನಕ್ಕೆಸೆದಿದ್ದ ಸವಾಲಿಗೆ ಉತ್ತರ ಅವರು ಏರಿದ ಎತ್ತರ !

ಜಗದ್ಗುರು ಪೀಠವನ್ನೇರಿದ ಮಾತಾಜಿ ಇಂದು ಕನ್ನಡ ನಾಡಿನ ಉದ್ದಗಲಕ್ಕೂ ಪ್ರಸಿದ್ಧ. ಅಗಾಧ ಪಾಂಡಿತ್ಯ, ಅಪೂರ್ವ ಪ್ರತಿಭೆ, ಅದ್ಭುತ ಕ್ರಿಯಾಶಕ್ತಿ, ಕುಗ್ಗದ ಉತ್ಸಾಹಗಳಿಂದ ವಿಚಾರಕ್ರಾಂತಿಯ ಬಿರುಗಾಳಿಯನ್ನೇ ಎಬ್ಬಿಸಿದ್ದಾರೆ! ತಮ್ಮ ವಿಶಿಷ್ಟ ವಿಚಾರಧಾರೆಯಿಂದ ಧರ್ಮಾಭಿಮಾನಿಗಳ ಹೃದಯ ಗದ್ದುಗೆಯಲ್ಲಿ ವಿರಾಜಿಸುತ್ತಿದ್ದಾರೆ!

ಬಿಡುವಿಲ್ಲದ ಪ್ರವಾಸ, ಪ್ರವಚನ.ಎಡೆ ಮಾಡಿಕೊಂಡು ತತ್ತ್ವಜ್ಞಾನದ ಅಭ್ಯಾಸ. ಸ್ನಾತಕೋತ್ತರ ಪರೀಕ್ಷೆಗೆ ಸಿದ್ಧತೆ. ೧೯೬೪ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಎಂ. ಎ. ಪದವಿ. ಪ್ರಥಮ ವರ್ಗದಲ್ಲಿ ತೇರ್ಗಡೆ. ಗಳಿಸಿದ ಪದವಿ ಶ್ರದ್ಧೆ-ಸಾಹಸಗಳ ಸಂಕೇತ!

'ಪ್ರವಚನ' ಶಬ್ದಕ್ಕೆ ಮಾತಾಜಿಯಿಂದ ಒಂದು ಹೊಸ ಕಳೆ. ಪ್ರತಿಯೊಂದು ವಿಷಯವನ್ನೂ ವಿಚಾರದ ಒರೆಗಲ್ಲಿಗೆ ತಿಕ್ಕಿ ನೋಡುವ ಪ್ರಜ್ಞೆ. ಮೂಢ ನಂಬಿಕೆಗಳನ್ನು ಝಾಡಿಸಿ ಜಾಲಾಡುವ ಪ್ರಗತಿಪರ ದೃಷ್ಟಿ. ನುಡಿ ನುಡಿಗೂ ಬಸವ ಸಂದೇಶ. ಮೈ-ಮನ ತುಂಬಿದ ಆವೇಶ. ಆದರೂ ಎಲ್ಲೂ ಎಡವದ ಎಚ್ಚರ!

ಮೈ-ಮನ-ಭಾವಗಳಲ್ಲಿ ಕ್ರಿಯಾ-ಮಂತ್ರ-ಜ್ಞಾನ ಶೀಲಗಳ ಸಿದ್ಧಿ. ಬದುಕಿನ ಬೇವನ್ನೆಲ್ಲ ಬೆಲ್ಲವನ್ನಾಗಿಸಿಕೊಳ್ಳುವ ಮಾಗಿದ ಮನೋಭಾವ. ಇರುಳು ಇಣುಕುವಂತಿಲ್ಲ; ಮರುಳು ಸೋಂಕುವಂತಿಲ್ಲ. ಮಾತಾಜಿ ಒಂದು ಧೀರ ಶಕ್ತಿ; ವೀರ ಚೇತನ !

ಸಾಹಿತ್ಯರಚನೆ, ಸಿದ್ಧಾಂತ ಪ್ರತಿಪಾದನೆ ಅವರ ನಿತ್ಯಕಾಯಕ. ಆ ಕಾಯಕ ಶ್ರದ್ಧೆ ಅದ್ವಿತೀಯ. ಸಾಮಾಜಿಕ ಕಳಕಳಿ, ಸರ್ವೋದ್ಧಾರದ ಆಸಕ್ತಿ ಅಗಾಧ. ಮಾತಾಜಿ ಅವರ ಪ್ರವಚನವೆಂದರೆ ಸಾವಿರ ಸಾವಿರ ಜನಸಂದಣಿ. ಜಾತಿ-ಮತಗಳ ಬೇಧವಿಲ್ಲದ ಶ್ರೋತೃ ಸಮೂಹ. ವಿದ್ವಾಂಸರಿಗೆ ಒಪ್ಪುವ ವಿಶ್ಲೇಷಣೆ. ಅವಿದ್ಯಾವಂತರಿಗೂ ತಿಳಿಯುವ ಉದಾಹರಣೆ. ಆದ್ಯಂತ ರಸಪೂರ್ಣ !

ಅಕ್ಕ ಇಟ್ಟ ಹೆಜ್ಜೆಯಲ್ಲಿ ನಡೆ ; ಅಣ್ಣ ಕೊಟ್ಟ ವಾಣಿಯಲ್ಲಿ ನುಡಿ. ಇವರಿಬ್ಬರಲ್ಲಿ ಅಚಲ ವಿಶ್ವಾಸ. ಶರಣ ಧರ್ಮಕ್ಕಾಗಿ ಅವಿಶ್ರಾಂತ ದುಡಿಮೆ. ಇಪ್ಪತ್ತನೆಯ ಶತಮಾನದಲ್ಲಿ ಧರ್ಮಜ್ಯೋತಿ ಹಿಡಿದು ಸಂಚರಿಸುತ್ತಿರುವ ಮಾತಾಜಿ ಅವರಿಗೆ ಶರಣ ಧರ್ಮವನ್ನು ಬಾನಿನೆತ್ತರಕ್ಕೆ ಏರಿಸಿ ತೋರಿಸುವ ಛಲ !

ಮಾತಾಜಿ ಪ್ರತಿಭಾನ್ವಿತ ಸಾಹಿತಿ. ಅವರ ಲೇಖನಿಗಿರುವುದು ಮಂತ್ರ ಶಕ್ತಿ. ಕವನ, ವಚನ, ಕಾದಂಬರಿ, ಪ್ರಬಂಧ, ವಿಮರ್ಶೆ ಎಲ್ಲ ಪ್ರಕಾರಗಳಲ್ಲೂ ಸಿದ್ಧಿಸಿದ ಬರೆಹ. ಸಮಕಾಲೀನ ಮಹಿಳಾ ಲೇಖಕರಲ್ಲಿ ಇವರಿಗಿರುವ ಸ್ಥಾನ ಅತ್ಯುನ್ನತ.

ಕಾದಂಬರಿ ಜಗತ್ತಿಗೆ ಮಾತೆಯವರಿತ್ತ "ಹೆಪ್ಪಿಟ್ಟ ಹಾಲು" ಮತ್ತು "ತರಂಗಿಣಿ" ಎರಡೂ ಅಮೂಲ್ಯ. ಕಾದಂಬರಿ ಮಾಧ್ಯಮದಲ್ಲಿ ವಚನ ಸಾಹಿತ್ಯವನ್ನು ಅರ್ಥಪೂರ್ಣವಾಗಿ, ಧ್ವನಿಪೂರ್ಣವಾಗಿ ಬಳಸಿಕೊಂಡಿರುವ ಮೊದಲ ಕಾದಂಬರಿಕಾರರು ಮಾತಾಜಿ. ಅವರ ಸಮರ್ಥ ಲೇಖನಿಯಿಂದ ಬಸವಣ್ಣನವರನ್ನು ಕುರಿತ ಕಾದಂಬರಿಯೊಂದು ಬರಬೇಕಾಗಿದೆ.

ಕವಯಿತ್ರಿಯರ ಸಾಲಿನಲ್ಲೂ ಮಾತಾಜಿ ಅವರ ಸ್ಥಾನ ಗಣ್ಯ. 'ವಿರಹ ತರಂಗ'- ಮತ್ತು 'ಗಂಗಾತರಂಗ' ಕೃತಿಗಳು ಭಾವ-ಭಕ್ತಿ ಗೀತೆಗಳ ಸುಂದರ ಕೃತಿಗಳು. ಪ್ರಬಂಧ ಶೈಲಿಯಂತೂ ಪ್ರಭಾವಪೂರ್ಣ. ಅವರ 'Revolution in Kalyana' ಐತಿಹಾಸಿಕ ಕ್ರಾಂತಿಯ ರೋಮಾಂಚಕಾರಿ ಚಿತ್ರಣ !

ಮಾತಾಜಿ ಅವರ ಭಕ್ತಿ ಗೀತೆಗಳಲ್ಲಿ ಅಕ್ಕಮಹಾದೇವಿಯ ವಚನಗಳ ಸತ್ವವಿದೆ ; ಮೀರಾಬಾಯಿಯ ಭಕ್ತಿಯ ಉತ್ಕಟತೆಯಿದೆ. ಸ್ವಯಂ ಕಾವ್ಯ ಕೋಗಿಲೆಯಾಗಿ ಹಾಡುತ್ತಿದ್ದರೆ ಶ್ರೋತೃಗಳು ಮನತುಂಬಿ ಕೇಳುತ್ತಾರೆ. ಅವರ ವಾಣಿಯ ವೈಭವದಲ್ಲಿ ಸಭೆ ಮೈಮರೆಯುತ್ತದೆ. ಗಾನದ ಮಾಧುರ್ಯದಲ್ಲಿ ಹೃದಯ ತುಂಬಿಕೊಳ್ಳುತ್ತದೆ!

ಅವರ ಪ್ರವಚನ ಕಾರ್ಯಕ್ರಮ ಒಂದು ಬೃಹತ್ ಸಮ್ಮೇಳನ. ತಿಂಗಳುಗಟ್ಟಲೆ ಎಡೆಬಿಡದ ಸೇವೆ. ಬೆಂಗಳೂರಿನಂತಹ ಅತ್ಯಾಧುನಿಕ ನಗರದಲ್ಲಿ ಧಾರ್ಮಿಕ ಪ್ರವಚನಗಳಿಗೆ ಜನ ಸೇರುವುದು ಕನಸಿನ ಮಾತು. ಆದರೆ ಮಾತಾಜಿ ಅವರ ಪ್ರವಚನ ಇದಕ್ಕೆ ಅಪವಾದ. ಎಲ್ಲ ಕಡೆಯೂ ಪ್ರಚಂಡ ಯಶಸ್ಸು. ಮಾತಾಜಿಯವರ ಮಾತೆಂದರೆ ವಣಿಕರು, ವೇದಾಂತಿಗಳು, ವಕೀಲರು, ವೈದ್ಯರು, ಅಧ್ಯಾಪಕರು, ವಿದ್ಯಾರ್ಥಿಗಳು, ಕಾರ್ಮಿಕರು–ಹೀಗೆ ಅವರಿವರೆನ್ನದೆ ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರುತ್ತಾರೆ.

ಮಾತಾಜಿ ಅವರದು ನಿರ್ದಾಕ್ಷಿಣ್ಯವಾಗಿ ನುಡಿಯುವ ಕೆಚ್ಚು (ಕಪಟಿಗಳಿಗಿದು ಕಾಡ್ಗಿಚ್ಚು!). ಉರಿ ಬರಲಿ, ಸಿರಿ ಬರಲಿ, ಬೇಕು ಬೇಡೆನ್ನದೆ ಮುನ್ನಡೆವ ಆತ್ಮನಿಷ್ಠೆ. ಲೋಕದ ಕಲ್ಯಾಣಕ್ಕಾಗಿ ಕೆಳಗೆ ಕೈಚಾಚಿ ನೊಂದವರನ್ನು ಮೇಲೆತ್ತಿಕೊಳ್ಳಬೇಕೆಂಬ ಅನುಕಂಪ. ದೇಶಕಾಲಾತೀತವಾದ ಶಾಶ್ವತ ಜೀವನ ಮೌಲ್ಯಗಳಿಗಾಗಿ ದಿಟ್ಟಹೋರಾಟ. ಆಚಾರ–ವಿಚಾರಗಳ ಸಮನ್ವಯ ಸಂಪನ್ನತೆ. ಶೀಲ–ವೃತ–ನಿಯಮಗಳಿಗೆ ತಮ್ಮದೇ ಆದ ಶಸ್ತ್ರಚಿಕಿತ್ಸೆ ನಡೆಸಿ ಹೊಸ ಅರ್ಥ ನೀಡಿದ ದಕ್ಷತೆ!

ಅಕ್ಕಮಹಾದೇವಿ ಮಾತಾಜಿ ಅವರ ಆರಾಧ್ಯ ಮೂರ್ತಿ. ಆ ಮಹಾ ಶರಣೆಯ ಜೀವನವನ್ನು ಚಿತ್ರಿಸಿರುವ 'ತರಂಗಿಣಿ' ಒಂಬೈನೂರು ಪುಟದ ಬೃಹತ್ ಕಾದಂಬರಿ. ಅರವಿಂದರ ಮಹಾಕಾವ್ಯದಲ್ಲಿ 'ಸಾವಿತ್ರಿ' ಮೂಡಿ ಬಂದಂತೆ 'ತರಂಗಿಣಿ'ಯಲ್ಲಿ ಅಕ್ಕ ಮೂಡಿನಿಂತಿದ್ದಾಳೆ. ಆತ್ಮ ವಿಶ್ವಾಸ, ಪ್ರೇಮದ ಮಹತಿ, ಶ್ರದ್ಧೆ-ಕೆಚ್ಚುಗಳನ್ನು ಲೋಕಕ್ಕೆ ತೋರಿಸಲು ಚಿತ್ರಿಸಿದ ದಿವ್ಯ ವ್ಯಕ್ತಿಚಿತ್ರಣ ಸಾವಿತ್ರಿ. ಮಾತಾಜಿ ಅವರ ಲೇಖನಿ ಚಿತ್ರಿಸಿರುವ ಅಕ್ಕಮಹಾದೇವಿಯ ವ್ಯಕ್ತಿತ್ವವೂ ಅಷ್ಟೇ ಪರಿಪಕ್ವ!

ಮಾತಾಜಿಯವರ ಈ ಔನ್ನತ್ಯಕ್ಕೆ ಬೆನ್ನಾಸರೆ ಪೂಜ್ಯ ಶ್ರೀ ಲಿಂಗಾನಂದಸ್ವಾಮಿಗಳು. ಲೋಕದ ಕುಹಕವನ್ನು ಸಹಿಸಿ ತಮ್ಮ ಆಶ್ರಮದಲ್ಲಿ ಆಶ್ರಯಕೊಟ್ಟರು. ಅಂದು ಅವರು ಆಶ್ರಯ ಕೊಡದಿದ್ದರೆ ನಾಡಿನ ಧರ್ಮಕ್ಷೇತ್ರಕ್ಕೆ ಅಪಾರ ನಷ್ಟವಾಗುತ್ತಿತ್ತು. ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಸ್ಥಾಪನೆಯಲ್ಲಿ, ಮಾತಾಜಿ ಅವರನ್ನು ಜಗದ್ಗುರು ಪೀಠಕ್ಕೆ ಏರಿಸುವಲ್ಲಿ, ಸ್ವಾಮೀಜಿ ಅವರು ಇಟ್ಟ ದಿಟ್ಟ ಹೆಜ್ಜೆ ಸಾಮಾನ್ಯವಾದುದಲ್ಲ. ಸುಯಿಧಾನ ಸುಗ್ರಂಥಮಾಲೆ, ವಿಶ್ವಕಲ್ಯಾಣ ಮಿಷನ್–ಒಂದೊಂದೂ ಮಹತ್ವದ ಸಂಘಟನೆ.

ಶ್ರೀ ಸ್ವಾಮಿಗಳು ಈಗ ಮಾತಾಜಿ ಅವರ ಧ್ಯೇಯ ಸಾಧನೆಯಲ್ಲಿ ಸಹಕರಿಸುತ್ತಿರುವ ನಿರಾಭಾರಿ ಜಂಗಮ ಮೂರ್ತಿ. ಅವರಿಂದಲೇ ಮಾತಾಜಿಗೆ ಕೀರ್ತಿ. ಇದು ಹಲವು ದೋಷದ ಕಣ್ಣುಗಳನ್ನು ಕುಕ್ಕಿದೆ; ಅಸಹನೆಯ ಕಿಡಿ ಕಾರಿಸಿದೆ. ಈ ಲೋಕದ ಬಗೆಯೇ ಹೀಗೆಂದು ಕಾಣುತ್ತದೆ.

ವೇಮನ ಹೇಳುವಂತೆ, ಮನೆಯೊಳಗಣ ಜಗಳ, ಚಪ್ಪಲಿಯೊಳಗಣ ಕಲ್ಲು, ಕಿವಿ ಹೊಕ್ಕ ನೊಣ, ಕಣ್ಣಿನೊಳಗೆ ಸೇರಿದ ಕಸ, ಕಾಲಲ್ಲಿ ಚುಚ್ಚಿದ ಮುಳ್ಳು, ಇವುಗಳಿಂದಾಗುವ ಕಿರುಕುಳ ಹಿಂಸಾತ್ಮಕ. ಅಂತೇ ಸಮಾಜದಲ್ಲಿನ ಅಸೂಯಾಪರರು. ಆದರೆ ಮಾತಾಜಿ ಮತ್ತು ಪೂಜ್ಯ ಲಿಂಗಾನಂದ ಸ್ವಾಮಿಗಳಿಗೆ ಬಸವಣ್ಣನ ಶ್ರೀ ರಕ್ಷೆಯಿದೆ: ಎಂತಲೇ ಅವರ ಸಾಹಸ ಯಾತ್ರೆ ಯಶಸ್ವಿಯಾಗೇ ನಡೆದಿದೆ. ಕುಟ್ಟದೇ ಕೈ ನೋಯಿಸಿಕೊಳ್ಳುವ, ಬೀಸದೇ ಬೆನ್ನು ನೋಯಿಸಿಕೊಳ್ಳುವ ಜನರಿಗೆ ಏನು ಮಾಡಲಾದೀತು? ಉದಾಸೀನವೇ ಅದಕ್ಕೆ ಮದ್ದು.

ದಿನಗಳೆದಂತೆ ಮಾತಾಜಿಯವರಲ್ಲಿ ಮಹಾ ಸಂಕಲ್ಪಶಕ್ತಿ ಸಂಚಿತವಾಗುತ್ತಿದೆ. ಬೆಂಗಳೂರಿನಲ್ಲಿರುವ ವಿಶ್ವಕಲ್ಯಾಣ ಮಿಷನ್ನಿನ ಆಶ್ರಯದಲ್ಲಿ ಅವರು ಹಾಕಿಕೊಂಡಿರುವ ಹಲವಾರು ಯೋಜನೆಗಳು ಯಾರಾದರೂ ಸೋಜಿಗಪಡುವಂತಹುವು. ಬಸವಧರ್ಮದ ವಿರಾಟ್ ದರ್ಶನವನ್ನು ಇಡೀ ವಿಶ್ವಕ್ಕೆಲ್ಲ ತೋರಿಸಬೇಕೆಂಬ ಅಖಂಡ ವಿಶ್ವಾಸ. ಅದಕ್ಕಾಗಿ ಪ್ರವಚನಗಳ ವ್ಯವಸ್ಥೆ, ಪ್ರಚಾರಕರ ತರಬೇತಿ, ಗ್ರಂಥ ಪ್ರಕಟಣೆ; ಜೊತೆಗೆ ಆರೋಗ್ಯ ಹಾಗೂ ಶಿಕ್ಷಣದಂತಹ ಸಾಮಾಜಿಕ ಸೇವೆಗಳ ಯೋಜನೆ. ಈ ಉದಾತ್ತ ಉದ್ದೇಶಗಳಿಗೆ ಉಳ್ಳವರೆಲ್ಲ ನೆರವಾಗಬೇಕು.

ಮಾತಾಜಿ ಅವರದು ಅಗಾಧ ಪ್ರತಿಭೆ. ಅದನ್ನು ಅರ್ಥಮಾಡಿಕೊಂಡವರ ಸಂಖ್ಯೆ ಇನ್ನೂ ಕಡಮೆ. ದೈವೀಪ್ರಜ್ಞೆ ಜಾಗೃತವಾಗಿರದಿದ್ದರೆ ಅಂತಹ ಸಂಕಲ್ಪಶಕ್ತಿ ಸಿದ್ಧಿಸಲು ಸಾಧ್ಯವಿಲ್ಲ. ಮಾತಿನಲ್ಲಿ ಮಂತ್ರಶಕ್ತಿ ತುಂಬಿಕೊಳ್ಳಲು ಸಾಧ್ಯವಿಲ್ಲ. ಅರವಿಂದಾಶ್ರಮದ ಶ್ರೀ ಮಾತೆಯವರು ಹೇಳುವ ಪ್ರೇಮ, ಸಹನೆ, ನ್ಯಾಯ, ಸತ. ಮತ್ತು ಶಾಂತಿಗಳ ಪಂಚ ಸಾಧನಗಳನ್ನೇ ಪೂಜ್ಯ ಮಾತಾಜಿ ಧರ್ಮಪ್ರಸಾರ, ಸಾಹಿತ್ಯ ಸೇವೆ, ಸತತ ಪ್ರಯತ್ನ, ಕಾಯಕನಿಷ್ಠೆ, ಸಮಾಜ ಹಿತ–ಎಂಬ ಪಂಚ ಕ್ರಿಯಾ ಸೂತ್ರಗಳನ್ನು ಹೇಳುತ್ತಾರೆ.

ಇಷ್ಟಾದರೂ ಮಾತಾಜಿ ಅವರ ಕಾರ್ಯ ಚಟುವಟಿಕೆಗಳಿಗೆ ಸಾಕಷ್ಟು ಪ್ರಚಾರವಿಲ್ಲ. ಅದು ಅವರಿಗೆ ಅಗತ್ಯವೂ ಇಲ್ಲ. ರೋಗಗಳಿಗೆ ಮಾತ್ರ ಸುದ್ದಿ ಅಗತ್ಯ–ಇತರರಿಗೆ ಮುನ್ನೆಚ್ಚರಿಕೆ ನೀಡಲಿಕ್ಕಾಗಿ. ಆದರೆ ಆರೋಗ್ಯಕ್ಕೆ ಏಕೆ ಪ್ರಚಾರ? ಜನಮನದಲ್ಲಿ ಮಾತಾಜಿ ಅವರಿಗೆ ಇರುವ ಸ್ಥಾನಮಾನವೇ ಸಾಕು!

ವಿಜ್ಞಾನ ಸತ್ಯದ ಮಗು; ಅಜ್ಞಾನ ಅಂಧಶ್ರದ್ಧೆಗಳ ತಾಯಿ–ಎನ್ನುವ ದಾರ್ಶನಿಕರು. 'ಪೂರ್ಣ ಜೀವನ ಕಲೆ'ಯನ್ನು ತೋರಿಸಿ ಕೊಡುತ್ತಿರುವ ಮಹಾ ಮಾತಾಜಿ, ಭಕ್ತರಿಗೆ ಕ್ರಾಂತಿ–ಶಾಂತಿ, ಸತ್ಯ–ಅಸತ್ಯ, ನೀತಿ–ಅನೀತಿಗಳ ವ್ಯಾಖ್ಯಾನವನ್ನು ಅವರ ಮಾತಿನಲ್ಲೇ ಕೇಳಬೇಕು.

ಸನ್ಯಾಸಿನಿಯಾಗಿ ಸಿದ್ಧಿ ಪಡೆದಂತೆ ಸಾಹಿತಿಯಾಗಿ ಪರಮೋನ್ನತಿ ಪಡೆದಿದ್ದಾರೆ ಮಾತಾಜಿ. ವೇದಾಂತ ಸಾಹಿತ್ಯಕ್ಕೆ ನಿಜಗುಣರಿದ್ದಂತೆ, ಶಿವಾದ್ವೈತ ಸಾಹಿತ್ಯಕ್ಕೆ ಮಾಯಿದೇವರಿದ್ದಂತೆ, ಶರಣ ಸಾಹಿತ್ಯಕ್ಕೆ ಮಾತಾಜಿ. ಅವರ ಮಾತು ಮಾತಿನಲ್ಲಿ ಮಹಾಜ್ಯೋತಿ. ಕಲಿತವರ ಬಗೆ ಬೇರೆಯಿರಬಹುದು. ಆದರೆ ಜನ ಸಾಮಾನ್ಯರ ಸಂಖ್ಯೆ ಲಕ್ಷ ಲಕ್ಷ. ಅವರಿಗೆಲ್ಲ ಭರವಸೆಯ ಬೆಳಕು ಮಾತಾಜಿ !

ಬೆಂಗಳೂರಿನ ಕೆಲವು ಪ್ರಮುಖ ಬಡಾವಣೆಗಳಲ್ಲಿ, ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನದಲ್ಲಿ, ವಿಶ್ವ ಹಿಂದೂ ಪರಿಷತ್ತಿನಲ್ಲಿ ಮಾಡಿದ ಭಾಷಣಗಳು ಧಾರ್ಮಿಕ ಸಾಮಾಜಿಕ ರಂಗದಲ್ಲಿ ಸ್ಮರಣೀಯ ದಾಖಲೆಗಳು!

ಅವರಿಗೆ ಸನ್ಮಾನ ಮಾಡಿರುವ ಸಂಘ-ಸಂಸ್ಥೆಗಳು, ಪುರಸಭೆಗಳು ಅನೇಕ. ಅವರು ಪಾಲುಗೊಂಡಿರುವ ಸಭೆ–ಸಮಾರಂಭಗಳು ಅಸಂಖ್ಯಾತ.

ಸ್ವದೇಶದಲ್ಲಿ ಮಾತ್ರವಲ್ಲ; ವಿದೇಶಗಳಲ್ಲೂ ಧರ್ಮ ಡಿಂಡಿಮ ಬಾರಿಸುವ ಆಕಾಂಕ್ಷೆ. ಅದಕ್ಕಾಗಿ ೧೯೭೩ ರಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಭೇಟಿ. ಬ್ರಿಟಿಷ್ ವಿಶ್ವವಿದ್ಯಾಲಯಗಳ ಓರಿಯಂಟಲ್ ಸಂಸ್ಥೆ ಏರ್ಪಡಿಸಿದ್ದ "ಭಾರತೀಯ ಧರ್ಮಗಳ ವಿಚಾರಗೋಷ್ಠಿ"ಗೆ ಮುಖ್ಯ ಅತಿಥಿಯಾಗಲು ಪೂಜ್ಯ ಮಾತಾಜಿಯವರಿಗೆ ಆಮಂತ್ರಣ. ಅಲ್ಲಿ ಅವರ ನಿರರ್ಗಳ ಭಾಷಣ. ವಿದ್ವಾಂಸರಿಂದ ನಿರಂತರ ಕರತಾಡನ. ಮನತಣಿದು ಹೊರಬಂದ ಮೆಚ್ಚುಗೆ. ಆಂಗ್ಲನಾಡಿನ ಅನೇಕ ಯೋಗಕೇಂದ್ರಗಳಲ್ಲಿ ಭಾರತೀಯ ಧರ್ಮ–ಯೋಗಗಳ ಬಗ್ಗೆ ಉಪನ್ಯಾಸ. ಮಾತಾಜಿಯವರ ಅಸ್ಖಲಿತವಾಣಿಯ ಬಗ್ಗೆ ಪ್ರಶಂಸೆಯ ಉದ್ಗಾರ. ಜಾಗತಿಕ ಆಧ್ಯಾತ್ಮಿಕ ಸಂಸ್ಥೆ (World Spiritual Society) ಯವರಿಂದ ಅವರ ಸಮ್ಮೇಳನದಲ್ಲಿ ಅಗ್ರಪೀಠ. ವಿಶ್ವವಿದ್ಯಾಲಯ ಬ್ರಿಟಿಷ್ ಮಹಿಳಾ ಸಂಸ್ಥೆ (British Association of University Women)ಯವರಿಗೆ ಮೊತ್ತ ಮೊದಲ ಮಹಿಳಾ ಜಗದ್ಗುರುವನ್ನು ಕಾಣುವ ತವಕ. ತಾವಲ್ಲಿ ಸ್ತ್ರೀ ಗುರುತ್ವಕ್ಕೆ ಮಾಡುವ ಹೋರಾಟ ಪೂಜ್ಯ ಮಾತಾಜಿಯವರಲ್ಲಿ ಪೂರ್ಣಗೊಂಡಿದ್ದಕ್ಕೆ ಹೆಮ್ಮೆ, ಸಂತೃಪ್ತಿ. ಅದಕ್ಕಾಗಿ ಅವರ ಒಕ್ಕೂಟದ ಪರವಾಗಿ ಪೂಜ್ಯರಿಗೆ ವಿಶೇಷ ಸತ್ಕಾರ. ಭಾರತೀಯ ಸಾಂಸ್ಕೃತಿಕ ಮೌಲ್ಯಗಳ ಪಾಂಚಜನ್ಯವನ್ನೂದಲು ಆಂಗ್ಲನಾಡಿಗೆ ಬಂದ ಮಾತಾಜಿಯವರಿಗೆ ಅಲ್ಲಿಯ ಸನಾತನ ಧರ್ಮ ಮಿರ್ಷನವರಿಂದ ಸನ್ಮಾನ. ಹೀಗೆ ಹೋದಲ್ಲೆಲ್ಲ ಗುಣಗ್ರಾಹಿಗಳಿಂದ ಅಪಾರ ಪುರಸ್ಕಾರ.

ಪೂಜ್ಯ ಮಾತಾಜಿ ನಡೆದ ನೆಲವೆಲ್ಲ ಪಾವನವಾಗುತ್ತಿದೆ. ಹೆಜ್ಜೆ ಇಟ್ಟಲ್ಲಿ ಬೆಳಕು ಮೂಡುತ್ತಿದೆ. ಆ ಬೆಳಕಿನಲ್ಲಿ ಮೈದಳೆದ ಹಣತೆಗಳೆಷ್ಟೋ ! ಮಾತಾಜಿ ಕನ್ನಡ ನಾಡಿನ ಅನುಭವ ಸಂಪತ್ತು !! ಅಸೀಮ ಚೇತನ !!!

**

ಶಿವನ ಮೊಗ್ಗೆಯಲ್ಲಿ ಶಿವಾನುಭವ ಸೌರಭ

—ಶಿವಲಿಂಗದೇವರು. ಬಿ. ಎ.

ಎತ್ತ ನೋಡಿದಡತ್ತ ಹಸಿರು ಸೀರೆಯನ್ನುಟ್ಟ ಸಸ್ಯರಾಣಿ, ಸಾಲುಹಿಡಿದು ಶಿವಯಾತ್ರೆ ಕೈಗೊಂಡ ಬೆಟ್ಟಗಳ ಶ್ರೇಣಿ. ಸೀರೆಯ ಮಧ್ಯೆ ಮಿಂಚುವ ಜರಿಯ ಎಳೆಗಳಂತಹ ತಿಳಿನೀರಿನ ತರಂಗಿಣಿಗಳು, ದಾರಿಯ ಇಕ್ಕೆಲಗಳಲ್ಲೂ ಹಸಿರು ಚೆಲ್ಲುವ ಬತ್ತದ ಗದ್ದೆಗಳು, ಗರ್ವಿಷ್ಠವಾಗಿ ಎದೆ ಏರಿ ನಿಂತ ಕಬ್ಬಿನ ಜಲ್ಲೆಗಳು, ಹಿತವಾಗಿ ಬೀಸುವ ಮಂದ ಮಾರುತ ಸಂಚಾರ–ಇದು ಮಲೆನಾಡಿನ ಸಹಜ ಚಿತ್ರಣ. ಮಲೆನಾಡಿನ ಹೃದಯದಂತಿದೆ ಶಿವಮೊಗ್ಗಾ ನಗರ. ವ್ಯಾಪಾರ–ಉದ್ಯಮ, ವಿದ್ಯೆ–ನಾಗರಿಕತೆ, ಸಂಸ್ಕೃತಿ-ಸಹೃದಯತೆ ಇವುಗಳಿಂದ ತುಂಬಿ ತುಳುಕುವ ಕಳೆಯ ಬೀಡು.

ಚೆಲುವೆ ನಿಸರ್ಗರಾಣಿಯ ಚೊಚ್ಚಲ ಕುಡಿಯಾದ ಶಿವಮೊಗ್ಗ ಒಂದೂವರೆ ತಿಂಗಳಕಾಲ ಧರ್ಮಜ್ಞಾನದ ಹಾಲನ್ನುಂಡು, ತನ್ನ ಭವ್ಯತೆಗೆ ದಿವ್ಯತೆಯನ್ನು ಮೈಗೂಡಿಸಿಕೊಂಡಿತು. ಸಿಹಿಯಾದ ತುಂಗೆಯ ಮಂಗಳೋದಕದಲ್ಲಿ ಮಿಂದು 'ಸಿಹಿಮೊಗೆ' ಎಂದು, ಶಿಸ್ತಿನ ಶೂರ ಶಿವಪ್ಪ ನಾಯಕನ 'ಶಿವರಾಜ್ಯ'ದ ಮಹಾದ್ವಾರವಾಗಿ "ಶಿವಮೊಗ"ವೆಂದು, ಜಗನ್ಮಾತಾ ಅಕ್ಕಮಹಾದೇವಿ, ಶಿವಯೋಗ ಸಾಮ್ರಾಟ ಅಲ್ಲಮಪ್ರಭು, ಅಜಗಣ್ಣ – ಮುಕ್ತಾಯಕ್ಕ, ಸತ್ಯಕ್ಕ–ಪಿಟ್ಟವ್ವೆಯಂಥ ಶಿವಶರಣರಿಂದ ಪುನೀತಗೊಂಡು ಶಿವಾನುಭವ ಸೌರಭ ಬೀರಿದ "ಶಿವಮೊಗ್ಗೆ" ಎಂದು ಪ್ರಸಿದ್ಧಗೊಂಡಿಹ ನಾಡಿನ ಕೇಂದ್ರ ಪಟ್ಟಣ ಶಿವಮೊಗ್ಗದಲ್ಲಿ ವಿಶ್ವಧರ್ಮ ಮಂದ ಮಾರುತ ಸಂಚಾರ ಆರಂಭಗೊಂಡುದು ಡಿಸೆಂಬರ್ 23 ರಂದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ತಮ್ಮ ವಿಶ್ವಧರ್ಮ ಪ್ರವಚನವನ್ನು ಶ್ರೀ ಬಸವ ಸದನದ ಮಾರುಕಟ್ಟೆಯ ವಿಶಾಲವಾದ ಬಯಲಲ್ಲಿ ಆರಂಭಿಸಿದರು. ಪ್ರಾರಂಭೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಜನಪದ ಸಾಹಿತಿ ಕೆ. ಆರ್. ಲಿಂಗಪ್ಪನವರು ಆಗಮಿಸಿ, ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಸಭಾಧ್ಯಕ್ಷತೆಯನ್ನು ಮಾಜಿ ಪುರಸಭಾಧ್ಯಕ್ಷರು, ನಗರದ ಮುಂದಾಳುಗಳೂ ಆದ ಹೆಚ್. ಎಂ. ಲಿಂಗಮರಿಯಪ್ಪನವರು ವಹಿಸಿದರು. ಕಾರ್ಯಕ್ರಮ ದಿನದಿನಕ್ಕೆ ಕಳೆ ಏರುತ್ತಾ ಹೋಗಿ, ಸಹಸ್ರಾವಧಿ ಜನ ಶ್ರೋತೃಗಳು ನೆರೆಯಲಾರಂಭಿಸಿದರು. ಬಸವ ಸದನದ ವಿಶಾಲ ಮೈದಾನ ತುಂಬತೊಡಗಿತು. ವಿದ್ಯಾರ್ಥಿಗಳು – ವಿದ್ವಾಂಸರು, ವಕೀಲರು–ವೈದ್ಯರು, ಮಹಿಳೆಯರು–ಮಕ್ಕಳು, ಪಂಡಿತರು–ಪಾಮರರು ಎಲ್ಲರೂ ಸಮಾವೇಶ ವಾಗತೊಡಗಿದರು. ಸಂಜೆಯಾಗುತ್ತಲೇ ಅದಾವುದೋ ಮೋಡಿಗೊಳ

ಗಾದಂತೆ ಓಡಿ ಬರುವ ಭರವನ್ನು ಕಂಡು ಓರ್ವ "ಅಲ್ಲೇನಾದರೂ ಅನ್ನಸಂತರ್ಪಣೆ
ಯುಂಟಾ?" ಎಂದು ತಾನೂ ಬಂದು, ಅಂದಿನಿಂದ ಬರತೊಡಗಿ ಈ ಜ್ಞಾನ
ಸಂತರ್ಪಣೆಯಲ್ಲಿ ಅರಿವನ್ನುಂಡು ನೆತ್ತಿಯ ಹಸಿವೆ ತಣಿಸಿಕೊಳ್ಳತೊಡಗಿದ.

ಬುರ್ಖಾ ಹೊದ್ದ ಮುಸಲ್ಮಾನ್ ಸ್ತ್ರೀಯರು, ತಾಂಡಾದಿಂದ ಬುಟ್ಟಿಗಳನ್ನೇ
ಹೊತ್ತುಗೊಂಡು ಬಂದು ಕುಳಿತುಕೊಂಬ ಲಂಬಾಣಿ ಸ್ತ್ರೀಯರು, ಎತ್ತಿನ ಗಾಡಿಗಳನ್ನು
ಹೂಡಿಕೊಂಡು, ಟ್ರಾಕ್ಟರ್ ನಡೆಸಿಕೊಂಡು ಗ್ರಾಮೀಣ ಪ್ರದೇಶಗಳಿಂದ ಧಾವಿಸುವ
ಹಳ್ಳಿಗರು–ಹೀಗೆ ಜನ ಜಾತ್ರೆ ನೆರೆಯುತ್ತಿತ್ತು. ಏನೋ ಸಂಭ್ರಮ ಸಡಗರ ಬರು
ವಾಗ; ಹೋಗುವಾಗ ದಿವ್ಯ ಜ್ಞಾನದಲ್ಲಿ ಮಿಂದ ಸಂತೃಪ್ತಿ-ಸಮಾಧಾನ. ಕೆಲವರ
ಆಕ್ಷೇಪಣೆಯೂ ಇರದಿರುತ್ತಿರಲಿಲ್ಲ. "ಈ ಪ್ರವಚನ ಶುರುವಾಗುವುದಿರಲಿ ಸಿನೆಮಾ
ಮಂದಿರಗಳು ತುಂಬುವುದೇ ಇಲ್ಲ" ಎಂಬ ಕಳವಳ. "ಕಾಣಿಕೆ ಕೊಟ್ಟಿಡಿ. ಪ್ರವಚನ
ಮುಗಿಸಲಿ." ಎಂದು ಸಿನೆಮಾ ಮಾಲಿಕರಿಗೆ ಕೆಲವರ ತಮಾಷೆ. ಅಂತೂ ಸಂತೋಷಿ
ಸದ ಜನರೇ ಇಲ್ಲವೆಂಬಂತಹ ಹೃತ್ಪೂರ್ವಕ ಅಭಿಪ್ರಾಯ.

"ನಮ್ಮ ಹೆಂಡಂದಿರು ಈಗ ಮಾತೇ ಕೇಳಲ್ಲ. 'ನೀವೇನಾರಾ ಮಾಡಿ ಪ್ರವ
ಚನ ಮುಗಿಯೋತನ್ಕ ಕೈಯಾರೆ ನೀಡ್ಕೊಂಡು ಊಟ ಮಾಡಿ ಮಾಡಿಟ್ಟ ಅಡಿಗೇನ'
ಎಂದು ಹೋಗೇ ಬಿಡ್ತಾರೆ ಪ್ರವಚನಕ್ಕೆ" ಎಂಬ ಗಂಡಸರ ಆಕ್ಷೇಪ. "ಕೃಷ್ಣನ ಕೊಳಲ
ದನಿಗೆ ಹುಚ್ಚೆದ್ದು ಬರುವ ಗೋಪಿಯರಂತಾಗಿದೆ ಮಾತಾಜಿ ನಿಮ್ಮ ನುಡಿಯ ಪ್ರಭಾವ.
ಸೂರ್ಯನು ಮರೆಯಾಗುತ್ತಲೇ ಹೃದಯ ಇತ್ತ ಸೆಳೆಯತೊಡಗುತ್ತದೆ" ಓರ್ವ ಕುಲೀನ
ಪ್ರೌಢ ಹೆಂಗಳೆಯ ಅಭಿಪ್ರಾಯ.

"ಮಾತಾಜಿ, ತಮ್ಮ ಪ್ರವಚನ ಮನೋರೋಗಿಗಳಿಗೆ ಒಂದು ಚಿಕಿತ್ಸೆಯಂತೆ,
ಆರೋಗ್ಯಯುಕ್ತ ಮೆದುಳಿಗೆ ವ್ಯಾಯಾಮದಂತೆ. ನನ್ನಲ್ಲಿ ಬರುವ ಅನೇಕ ರೋಗಿ
ಗಳಿಗೆ ತಪ್ಪದೇ ಪ್ರವಚನ ಕೇಳಲು ತಿಳಿಸುತ್ತಿರುವೆ. ಅರ್ಧದಷ್ಟು ರೋಗಿಗಳು ಅಲ್ಲಿಗೆ
ಬರುವರು. ಅವರಲ್ಲಿ ತೀವ್ರ ಬದಲಾವಣೆಯಾಗಿ, ಸಮಾಧಾನ ಹೊಂದಿದ್ದಾರೆ. ಇದು
ನಿಜಕ್ಕೂ ಉಪಕಾರದ ಕೆಲಸ." ಎಂದು ಮನೋರೋಗ ವೈದ್ಯರಾದ ಡಾ॥ ಪೈ
ಉದ್ಗರಿಸಿದರು.

ಪ್ರವಚನ ಮುಗಿದಾಗ ಓಡುವ ಜನಸಂದಣಿ ನೋಡಿದಾಗ, ತುಂಗೆಯ ಪ್ರವಾ
ಹದ ನೆನಪಂತೆ ಶಿವಮೊಗ್ಗಾ ಜನತೆಗೆ. ದಿನದಿನಕ್ಕೆ ದ್ವಿಗುಣಿತಗೊಂಡು ಸೇರಿದ ಜನ
ತೆಯ ಮನದಲ್ಲಿ ಅಚ್ಚೊತ್ತಿದ ಮತ್ತೊಂದು ಸಮಾರಂಭ ಸಾಮೂಹಿಕ ಪೂಜೆ. ರವಿ
ವಾರದಂದು ಸಾಮೂಹಿಕ ಪ್ರಾರ್ಥನೆಗೈದಾಗ ಶ್ರೀ ವೀರಶೈವ ಕಲ್ಯಾಣ ಮಂದಿರ
ತುಂಬಿ ತುಳುಕಿತು. ಮತ್ತೊಮ್ಮೆ ಶ್ರೀ ಕನ್ನಿಕಾ ಪರಮೇಶ್ವರಿ ಅಮ್ಮನವರ ದೇವಾ
ಲಯದಲ್ಲಿ. ಇನ್ನೊಮ್ಮೆ ಶ್ರೀ ರುದ್ರಾರಾಧ್ಯ ಸಭಾಂಗಣದಲ್ಲಿ. ಕಡೆಯವಾರ ಇಟ್ಟಿ

ಸಾಮೂಹಿಕ ಪೂಜೆಗೆ ಯಾವ ಸಭಾ ಮಂದಿರವೂ ಸಾಕಾಗದೆಂದಾಗ ವಿಶಾಲ ಬಯಲಲ್ಲಿ
ದೊಡ್ಡ ಶಾಮಿಯಾನ. ಪ್ರಮುಖ ಕಾಂಟ್ರಾಕ್ಟರ್ ವಿ. ಲಕ್ಕಣ್ಣನವರು, ಭರತರಾಜ
ಶೆಟ್ಟರು ಒಂದೂವರೆ ಸಾವಿರ ಜನಕ್ಕಾಗುವಷ್ಟು ಶಾಮಿಯಾನ ನಿರ್ಮಿಸಿದರು. ಶ್ರೀಮತಿ
ನಾಗಮ್ಮ ಮತ್ತು ಶ್ರೀಮತಿ ಸಾಧನಾ ಧಿವೇಕರ್‌ರವರು ಪ್ರಸಾದಕ್ಕೆ ಸಹಾಯ ಸಲ್ಲಿಸಿ
ದರು. ಅಂದು ಸಾಮೂಹಿಕ ಪೂಜೆ ಮಾಡಲು ಮತ್ತು ನೋಡಲು ಸೇರಿದ ಜನ
ಒಂದೂವರೆ ಸಾವಿರ. ಸುಪ್ರಭಾತದ ಏಳೂವರೆಗೆ ಓಂಕಾರೋಪಾಸನೆ, ಷಡಕ್ಷರಿಯ
ಮಂತ್ರ ಜಪ ಒಕ್ಕೊರಲಿನಿಂದ ಬಂದಾಗ ದಿವಿಯು ಭುವಿಗಿಳಿದಿದೆಯೋ ಭುವಿಯೇ
ದಿವಿಯಾಗಿದೆಯೋ ಎಂಬ ಸಂದೇಹ. ಎಲ್ಲರೂ ಸಾಮೂಹಿಕವಾಗಿ ಕುಳಿತು ಮಾಡಿದ
ಪೂಜೆ ಪ್ರತ್ಯಕ್ಷ ಕೈಲಾಸದ ಪ್ರತಿರೂಪ. ಇದರ ಬಗ್ಗೆ ಉದಯವಾಣಿ ಪತ್ರಿಕೆಯು
ಭಾವಚಿತ್ರದೊಡನೆ ಫೆಬ್ರುವರಿ 5 ರಂದು ಹೀಗೆ ಬರೆದಿದೆ :

'ಕ್ರಾಂತಿಕಾರಿ' ಸಾಮೂಹಿಕ ಲಿಂಗಾರಾಧನೆ

ಶಿವಮೊಗ್ಗ, ಫೆ 4. ಇಲ್ಲಿಯ ಗಾಂಧೀ ಮಂದಿರದ ಪಕ್ಕದ ಬಸವೇಶ್ವರ ಮೈದಾನ
ದಲ್ಲಿ ಸಂಜೆಯಾಗುತ್ತಲೇ ಜನಸಂದಣಿ ಕಿಕ್ಕಿರಿಯುತ್ತದೆ. ಕಳೆದ ನಲವತ್ತು ದಿನಗಳಿಂದ
ಇದೊಂದು ದಿನಚರಿಯಾಗಿದೆ. ಧಾರವಾಡದ ಮಾತೆ ಮಹಾದೇವಿ ಅವರಿಂದ ಪ್ರತಿದಿನ
ಸುಮಾರು ಮೂರು ಗಂಟೆಗಳ ಧಾರ್ಮಿಕ ಪ್ರವಚನ. ಎತ್ತರದ ವೇದಿಕೆಯಲ್ಲಿ ಪದ್ಮಾಸನ
ಹಾಕಿ ಕಂಚಿನ ಕಂಠದಿಂದ ತರ್ಕಬದ್ಧವಾಗಿ, ವಿಚಾರ ಪೂರ್ಣವಾಗಿ ಮಾತನಾಡುವ
ವೈಖರಿ. ಆರಂಭದ ದಿನಗಳಲ್ಲಿ ಅಲ್ಪ ಸಂಖ್ಯೆಯ ಶ್ರೋತೃವರ್ಗ. ನಿರಾಶರಾಗಲಿಲ್ಲ
ಮಾತೆ ಮಹಾದೇವಿ. ಮೊದಲ ದಿನ ಪ್ರವಚನ ಕೇಳಿದವರು ಮಾರನೆಯ ದಿನ ತಪ್ಪದೇ
ಹಾಜರ್. ಇದೀಗ ಸ್ಥಳ ಸಿಗಲಾರದೆಂದು ಧಾವಿಸಿ ಬರುವ ಶ್ರೋತೃವರ್ಗದಿಂದ
ಮೈದಾನ ತುಂಬಿ ತುಳುಕುತ್ತಿದೆ. ಮಾತೆಯವರ ಪ್ರವಚನ ಕೇವಲ ಉಪದೇಶ ಮಾತ್ರ
ವಲ್ಲ, ಆಚರಣೆಯಲ್ಲಿಯೂ ಇರುವುದು ಹಲವರನ್ನು ಆಕರ್ಷಿಸಿದ ಸಂಗತಿ. ಅವರ
ಹೆಸರು ಜಗದ್ಗುರು ಮಾತೆ ಮಹಾದೇವಿ ಎಂದಿದ್ದರೂ ಎಲ್ಲರೂ ಅವರನ್ನು ಮಾತಾಜಿ
ಅಂದು ಎಂದೇ ಕರೆಯುವುದು.

ಮೊದಮೊದಲು ಕೇವಲ ಲಿಂಗಾಯತರ ಪ್ರಚಾರಕ್ಕಾಗಿ ಈ ಕಾರ್ಯಕ್ರಮ ಅಂದು
ಕೊಂಡವರು ಪ್ರತ್ಯಕ್ಷವಾಗಿ ಭಾಗವಹಿಸಿದಾಗ ಇದು ವಿಶ್ವಧರ್ಮ ಪ್ರಸಾರವೆಂದು
ಅಂದು ಕೊಳ್ಳುವ ಹಂತಕ್ಕೆ ಬಂದಿದ್ದಾರೆ.

ಲಿಂಗಾಯತ ಪ್ರಮುಖರೋರ್ವರಲ್ಲಿ ಮಾತಾಜಿಯವರ ವಾಸ್ತವ್ಯವಾದರೂ
ಕರೆದವರ ಮನೆಗೆ ಹೋಗುತ್ತಾರೆ. ಕೇವಲ ಪ್ರವಚನವೊಂದೇ ಇವರ ಕಾರ್ಯಕ್ರಮವಲ್ಲ

ಪ್ರತಿ ಭಾನುವಾರ ಸಾಮೂಹಿಕ ಭಜನೆ ನಡೆಸುತ್ತಾರೆ. ಅದಕ್ಕೂ ಅಧಿಕ ಸಂಖ್ಯೆಯ ಭಜಕರು ಬರುತ್ತಾರೆ. ಹರಿಜನ ಕೇರಿಗೆ ತೆರಳಿ ಅಲ್ಲಿಪಾದಯಾತ್ರೆ ಪ್ರವಚನ ಮಾಡಿದರು; ಭಜನೆ-ಪ್ರಾರ್ಥನೆ ಕ್ರಮವನ್ನು ಅಲ್ಲಿಯ ನಿವಾಸಿಗಳಿಗೆ ತಿಳಿಹೇಳಿದರು.

ಎಲ್ಲರ ಕುತೂಹಲ ಕೆರಳಿಸಿದ ಕಾರ್ಯಕ್ರಮವೆಂದರೆ ಮೊನ್ನೆ ನಡೆದ ಸಾಮೂಹಿಕ ಲಿಂಗಾರಾಧನೆ. ಲಿಂಗಾಯತರು ಧರಿಸುವ ಲಿಂಗವನ್ನು ಬೇರೆಯವರ ಮುಂದೆ ಅದನ್ನು ತೆರೆಯಬಾರದು, ದೋಷ ಬರುತ್ತದೆ, ಮೈಲಿಗೆಯಾಗುತ್ತದೆ, ಎನ್ನುವ ಭಾವನೆ ಹಲವರದು. ಆದರೆ ಅಂದು ಸಾರ್ವಜನಿಕ ಸ್ಥಳವೊಂದರಲ್ಲಿ ನಡೆದ ಸಾಮೂಹಿಕ ಲಿಂಗ ಪೂಜೆಯಲ್ಲಿ ಎಲ್ಲರೂ ಮಾತೆ ಮಹಾದೇವಿಯವರನ್ನು ಅನುಸರಿಸಿದರು. ಸಾವಿರಕ್ಕೂ ಮಿಕ್ಕಿದ ಜನಸ್ತೋಮ. ಮಹಿಳೆಯರ ಸಂಖ್ಯೆಯೇ ಜಾಸ್ತಿ. ಸಂಕೋಚವಿಲ್ಲದೆ ಮಾತಾಜಿ ಹೇಳಿದಂತೆ ಅಂಗೈಯಲ್ಲಿ ಲಿಂಗ ಇರಿಸಿ, ಪುಷ್ಪ ಏರಿಸಿ ಅವರು ಹೇಳಿದಂತೆ ಮಂತ್ರವನ್ನು ಸ್ಪಷ್ಟವಾಗಿ ಉಚ್ಚರಿಸಿ, ತೋರಿಸಿದಂತೆ ಪೂಜಾ ವಿಧಾನವನ್ನು ಕೈಗೊಂಡು ಪೂಜೆ ಸಲ್ಲಿಸಿದರು. ಸೇರಿದ್ದ ಜನ ಸಮೂಹ ತಂದಿದ್ದ ಹೂಗಳಿಂದ ಮಾತೆಯುವರಿಗೆ ಪುಷ್ಪವೃಷ್ಟಿಗರೆದರು. ಈ ಸಾಮೂಹಿಕ ಲಿಂಗಪೂಜೆ ಅಭೂತವಾಗಿ ನಡೆಯಿತು. ಅಷ್ಟೇ ಕ್ರಾಂತಿಕಾರೀ ಕಾರ್ಯಕ್ರಮವೂ ಎಂದೆನಿಸಿತು.

ಫೆಬ್ರುವರಿ ಐದರವರೆಗೆ ಮಾತಾಜಿಯವರ ಪ್ರವಚನ ಕಾರ್ಯಕ್ರಮವಿದೆ. ಅಪೇಕ್ಷೆ ಹೆಚ್ಚಿದರೆ ವಿಸ್ತರಿಸಲೂ ಬಹುದು. ಏನೇ ಆದರೂ ದಿನವಹಿ ಅಷ್ಟು ಹೊತ್ತು ಧಾರ್ಮಿಕ ವಿಚಾರ ಬೋಧಪ್ರದ ಪ್ರವಚನ ಜೀವನದ ಸದುಪಯೋಗವೆನ್ನುವುದು ಸಾರ್ವತ್ರಿಕವಾಗಿ ಕೇಳಿ ಬರುತ್ತಿರುವ ಮಾತು.

ನಲವತ್ತೈದು ದಿನಗಳ ಕಾರ್ಯಕ್ರಮದ ಮಧ್ಯೆ ಸುಪ್ರಸಿದ್ಧ ಜನಪದ ಸಾಹಿತಿಗಳು ಅಪೂರ್ವ ವಾಗ್ಮಿಗಳೂ ಆದ ಗೊ. ರು. ಚನ್ನಬಸಪ್ಪನವರು ಆಗಮಿಸಿ ಭಾಷಣ ಮಾಡಿದರು. ಶಿವಮೊಗ್ಗಾದಲ್ಲಿ ಪೂಜ್ಯ ಮಾತೆಯವರು ನಡೆಸಿದ ಇನ್ನೊಂದು ಸ್ಮರಣಾರ್ಹ ಕಾರ್ಯಕ್ರಮವೆಂದರೆ ಕ್ಷೇತ್ರ ಸಂದರ್ಶನ. ಎರಡುಬಸ್ಸುಗಳನ್ನು ಮಾಡಿಕೊಂಡು ಅಕ್ಕ ಮಹಾದೇವಿಯ ಜನ್ಮಸ್ಥಳ ಉಡುತಡಿ, ಪ್ರಭುದೇವರ ಜನ್ಮಸ್ಥಳವಾದ ಬಳ್ಳಿಗಾವಿ, ಸತ್ಯಕ್ಕ ಸಮಾಧಿ ಇರುವ ಹಿರೇಜಂಬೂರು, ಪ್ರಭುದೇವ ಮಾಯಾದೇವಿಯರ ಭೇಟಿಯಾದ ಬನವಾಸಿಗಳನ್ನು ಸದ್ಭಕ್ತರಿಗೆ ತೋರಿಸಿಕೊಂಡು ಬಂದರು. ಸಂಜೆ ಬನವಾಸಿಯಲ್ಲಿ ವರದಾನದಿಯ ದಂಡೆಯ ಮೇಲೆ ತಂಗಾಳಿಯಲ್ಲಿ ಕುಳಿತು ಮಾಡಿದ ಸಾಮೂಹಿಕ ಲಿಂಗಪೂಜೆ ಅತ್ಯಂತ ಚಿರಸ್ಮರಣೀಯ.

ಮುಕ್ತಾಯ ಸಮಾರಂಭದಂದು ಜನರು ಹತ್ತಾರು ಸಹಸ್ರ ಸಂಖ್ಯೆಯಲ್ಲಿ ಕಿಕ್ಕಿರಿದಿದ್ದರು. ಇರುವೆ ಸರಿಯಲೂ ತೆರವಿಲ್ಲದಷ್ಟು ದಟ್ಟವಾಗಿ ಬಯಲನ್ನು ಆಕ್ರಮಿಸಿದ್ದರು. ಸಂಜೆ ಆರೂವರೆ ಗಂಟೆಗೆ ಆರಂಭವಾದ ಸಭೆ ಹತ್ತೂವರೆಗೆ ಮುಕ್ತಾಯಗೊಂಡಿತು. ಶರಣ ಹೆಚ್. ಎಂ. ಲಿಂಗಮರಿಯಪ್ಪನವರು ಅಧ್ಯಕ್ಷರಾಗಿರುವ ಶ್ರೀ ಬಸವೇಶ್ವರ ವೀರ ಶೈವ ಸಮಾಜಸೇವಾ ಸಂಘವು ಭಕ್ತಿ-ಗೌರವ ಪೂರ್ವಕವಾಗಿ ಬಿನ್ನವತ್ತಳೆಯನ್ನರ್ಪಿಸಿತು.

ವಿಶ್ವಧರ್ಮ ಪ್ರಸಾರಕರೂ, ಸಮತಾವಾದಿಗಳೂ, ಕ್ರಾಂತಿಯೋಗಿಣಿಯರೂ ಅಭಿನವ ಅಕ್ಕಮಹಾದೇವಿಯವರೂ, ವಿಶ್ವದ ಪ್ರಥಮ ಮಹಿಳಾ ಜಗದ್ಗುರುಗಳೂ ಆದ

ಶ್ರೀ ಪೂಜ್ಯ ಮಾತೆ ಮಹಾದೇವಿ

ಅವರಿಗೆ ಶಿವಮೊಗ್ಗ ನಗರದ ಶ್ರೀ ಬಸವೇಶ್ವರ ವೀರಶೈವ ಸಮಾಜ ಸೇವಾ ಸಂಘದವರು ಭಕ್ತಿಪೂರ್ವಕವಾಗಿ ಸಮರ್ಪಿಸಿದ

ಬಿ ನ್ನ ವ ತ್ತ ಳೆ

ಧಾರ್ಮಿಕ ಕ್ರಾಂತಿ ದೀಪ್ತಿಯನ್ನು ಹರಡುತ್ತಿರುವ ಜಗದ್ಗುರು ಮಾತೆ ಮಹಾದೇವಿಯವರೇ,

ಈ ಸಿಹಿಮಗೆ ಸಹ್ಯಾದ್ರಿಯ ಮಡಿಲಲ್ಲಿ, ತುಂಗೆಯ ತಡಿಯಲ್ಲಿ ರಾರಾಜಿಸುವ ಸಾಹಿತ್ಯ ಕ್ಷೇತ್ರ ಕ್ಷೇತ್ರವು ಧಾರ್ಮಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ತನ್ನಗಳಲ್ಲಿ ತನ್ನದೇ ಆದ ವೈಶಿಷ್ಟತೆಯನ್ನು ಪಡೆದು ಕನ್ನಡನಾಡಿನ ಕಣ್ಮಣಿಯಾಗಿದೆ - ಹಿರಿಮೆ ಗರಿಮೆಗಳಿಂದ.

ಅಲ್ಲಮ, ಅಕ್ಕಮಹಾದೇವಿ, ಮಾಂಡವ್ಯರಂತಹ ಜ್ಞಾನಿಗಳ, ಋಷಿವರೇಣ್ಯರ ತಪೋಭೂಮಿಯಿದು. ಸಂತ ಹೆಳವನಕಟ್ಟೆ ಗಿರಿಯಮ್ಮ, ವೀರಾಗ್ರಣಿ ಕೆಳದಿ ಚೆನ್ನಮ್ಮನವರ ನೆಲೆಯಿದು. ಬಳ್ಳಿಗಾವೆ, ತಾಳಗುಂದ, ಮಳವಳ್ಳಿ, ಬಂದಳಿಕೆ, ಉಡುತಡಿ, ಚಂದ್ರಗುತ್ತಿ, ಹೊಂಬುಚ, ಕೇದಾರೇಶ್ವರ ಮಠ, ಮಂಡಳಿ ಮರುಳಸಿದ್ಧೇಶ್ವರ ಮಠ, ಹಿರೇಕಲ್ಮಠ ಮುಂತಾದ ವಿದ್ಯಾ ಹಾಗೂ ಧರ್ಮ ಕೇಂದ್ರಗಳನ್ನು ಒಳಗೊಂಡಿರುವ ಪುಣ್ಯಭೂಮಿಯಿದು. ಕೆಳದಿ, ಇಕ್ಕೇರಿ ಅರಸರು ವೈಭವದಿಂದ ಅರಸೊತ್ತಿಗೆಯನ್ನು ಮೆರೆಸಿದ, ಕಲೆ ಸಾಹಿತ್ಯಕ್ಕೆ ಕನ್ನಡಿಯಂತಿರುವ, ರಾಷ್ಟ್ರಕವಿ ಕುವೆಂಪುರವರಿಗೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಅದ್ವಿತೀಯರೆನಿಸಿಕೊಂಡ ಮಹಾಪುರುಷರಿಗೆ ಜನ್ಮನೀಡಿದ ತಾಣವಿದು. ಬೆಳಕು ನೀಡುವ ಶರಾವತಿ, ಜಗತ್ಪ್ರಸಿದ್ಧ ಸೂರ್ಯಾಸ್ತ ತಾಣವಾದ ಆಗುಂಬೆ, ಕನ್ನಡ ನಾಡಿನ ಜಮ್‌ಷಡ್‌ಪುರವೆನಿಸಿದ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಮತ್ತು ವಿವಿಧ ಕೈಗಾರಿಕೆಗೆ ನೆಲೆಯಾದ ನಾಡು ನಮ್ಮದು. ಇಂತಹ ವೈವಿಧ್ಯಪೂರ್ಣ

ಮಹತ್ವವಿರುವ ಶಿವಮೊಗ್ಗೆಗೆ ತಾವು ಆಗಮಿಸಿ ದಿನಾಂಕ ೨೩--೧೨--೧೯೭೭ ರಿಂದ ದಿನಾಂಕ ೫--೨--೧೯೭೮ ನೇ ಭಾನುವಾರದ ಸುದೀರ್ಘ ಕಾಲದ ವರೆವಿಗೂ ಇಲ್ಲಿಯ ಶರಣ-ಶರಣೆಯರಿಗೆ ಧಾರ್ಮಿಕೋಪನ್ಯಾಸವನ್ನು ನೀಡುವುದರ ಮೂಲಕ ಸರ್ವರ ಮನ-ಮನೆಗಳಲ್ಲೂ ನೀವೇ ಕಾಣುತ್ತಿದ್ದೀರೆಂದು ಹೇಳುವುದಕ್ಕೆ ಅತೀವ ಆನಂದವಾಗುತ್ತದೆ.

ದಿನಾಂಕ ೧೩-೩-೧೯೪೬ ರಲ್ಲಿ ಚಿತ್ರದುರ್ಗದಲ್ಲಿ ಜನಿಸಿ, ಬಾಲ್ಯದಲ್ಲಿಯೇ ಶಿವನ ಕರುಣೆಗೆ ಪಾತ್ರರಾಗಿ, ತಮ್ಮ ವಿದ್ಯಾರ್ಥಿ ಜೀವನದಲ್ಲಿ ಅಪ್ರತಿಮ ಪ್ರತಿಭೆಯನ್ನು ತೋರಿ ಸರ್ವರ ಮೆಚ್ಚುಗೆಗೆ ಪಾತ್ರರಾಗಿ, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದಲ್ಲಿ ಎಂ. ಎ. ಪದವಿಯನ್ನು ಉನ್ನತ ದರ್ಜೆಯಲ್ಲಿ ಮೊದಲಿಗರಾಗಿ ಪಡೆದಿರಿ. ರಸಋಷಿ ಕುವೆಂಪು, ಭಾರತದ ಪುರುಷಸಿಂಹ ಸ್ವಾಮಿ ವಿವೇಕಾನಂದರಂಥ ಮಹಂತರ ಮಹಾನ್ ಕೃತಿಗಳಿಂದ ಪ್ರಭಾವಿತರಾದ ತಾವು, ಜೀವನದ ಮುಕ್ತಿಯ ಮಹಾ ಸೋಪಾನವಾದ ಸನ್ಯಾಸ (ಜಂಗಮ) ದೀಕ್ಷೆಯನ್ನು ೧೯೬೬ ರಲ್ಲಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಜಿಯವರಿಂದ ಪಡೆದಿರಿ.

ಪ್ರಪ್ರಥಮ ಮಹಿಳಾ ಜಗದ್ಗುರುವಾಗಿ :

೧೯೭೦ ರಲ್ಲಿ ಗದುಗಿನ ಶಿವಾನಂದ ಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳಿಂದ ಧಾರವಾಡದಲ್ಲಿ ಜಗದ್ಗುರು ಪೀಠವನ್ನು ಅಲಂಕರಿಸಿದಿರಿ.

ಸುಯಿಧಾನ ಸುಗ್ರಂಥಮಾಲೆ : ಜಗನ್ಮಾತಾ ಅಕ್ಕ ಮಹಾದೇವಿ ಆಶ್ರಮವನ್ನು ಧಾರವಾಡದಲ್ಲಿ ಸ್ಥಾಪಿಸಿ ಈ ಗ್ರಂಥಮಾಲೆಯ ಮೂಲಕ ತಾವು ಸುಮಾರು ಮೂವತ್ತು ಕೃತಿಗಳನ್ನು ರಚಿಸಿ - ಪ್ರಕಟಿಸಿರುವಿರಲ್ಲದೆ, ಇತರ ಸಾಹಿತ್ಯ ಕೃತಿಗಳು ಸಹ ಬೆಳಕಿಗೆ ಬರಲು ನೆರವಾಗುವಂತೆ ಕಾರ್ಯ - ನಿರ್ವಹಿಸುತ್ತಿರುವಿರಿ. ತಾವು ರಚಿಸಿದ, 'ಹೆಪ್ಪಿಟ್ಟ ಹಾಲು' ಗ್ರಂಥವು ರಾಜ್ಯ ಸಾಹಿತ್ಯ ಅಕ್ಯಾಡಮಿಯಿಂದ ಬಹುಮಾನಿತವಾಗಿದೆ. 'ತರಂಗಿಣಿ' ಗ್ರಂಥವು ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಪುರಸ್ಕೃತವಾಗಿರುವುದು ಹೆಮ್ಮೆಯ ವಿಷಯವಾಗಿದೆ. ಅಲ್ಲದೆ 'ಕಲ್ಯಾಣ ಕಿರಣ' ಎಂಬ ಧಾರ್ಮಿಕ, ಸಾಹಿತ್ಯಕ ಹಾಗೂ ನೈತಿಕ ಮೌಲ್ಯಗಳನ್ನು ಒಳಗೊಂಡಿರುವ ಮಾಸ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸುತ್ತಿರುವುದು ಕನ್ನಡ ಸ್ತ್ರೀ ಕುಲಕ್ಕೆ ಕಳಶಪ್ರಾಯವಾಗಿದೆ. ಈ ನಿಮ್ಮ ದಿಟ್ಟ ಹೆಜ್ಜೆಯು ಪತ್ರಿಕೋದ್ಯಮ ರಂಗದಲ್ಲೇ ಒಂದು ಸವಾಲಾಗಿದೆಯೆಂದರೆ ತಪ್ಪಾಗಲಾರದು. ತಮ್ಮ ಧರ್ಮ ಪ್ರಚಾರಕ್ಕೆ ಈ ಸಾಹಿತ್ಯ ಸೇವೆಯು ಪೂರಕವಾಗಿ, ಕನ್ನಡನಾಡಿನಲ್ಲೇ ಒಂದು ವಿಶಿಷ್ಟ ಸ್ಥಾನವನ್ನು ತಾವು ದೊರಕಿಸಿಕೊಂಡಿರುತ್ತೀರಿ.

ಬೆಂಗಳೂರಿನಲ್ಲಿ '**ವಿಶ್ವ ಧರ್ಮ ಪ್ರವಚನ ಸಮಿತಿ**' ಯನ್ನು ತಾವು ರಚಿಸಿ

ಇದರ ಮೂಲಕ ನಾಡಿನಾದ್ಯಂತ ಧರ್ಮಜಾಗೃತಿಯನ್ನುಂಟುಮಾಡುತ್ತಿರುವಿರಿ. ಈ ಸಂಸ್ಥೆಯಲ್ಲಿ, ಇಷ್ಟಪಟ್ಟ ಎಲ್ಲಾ ಜಾತಿಯ ಮುಮುಕ್ಷುಗಳಿಗೂ ಸಮಾನಾವಕಾಶ ಕೊಟ್ಟು ನಮ್ಮ ನಾಡಿನ ಧಾರ್ಮಿಕ ಜೀವನಕ್ಕೆ ಭದ್ರ ಬುನಾದಿಯನ್ನು ಹಾಕುತ್ತಿರುವಿರ-ಲ್ಲದೆ, ಧಾರವಾಡದಲ್ಲಿ "ಜಗನ್ಮಾತಾ ಅಕ್ಕ ಮಹಾದೇವಿ ಆಶ್ರಮ" ವನ್ನು ತೆರೆದು ಹೆಣ್ಣು ಮಕ್ಕಳಿಗೆ ಆಶ್ರಯವನ್ನು ಮತ್ತು ಸಂಸ್ಕಾರವನ್ನು ನೀಡುತ್ತಿರುವಿರಿ.

'**ದಿವ್ಯಾನುಭವ ಶಿಬಿರ**' ವನ್ನು ಪ್ರತಿವರ್ಷ ನಡೆಸುತ್ತ ನಾಡಿನ ಭಕ್ತಾಗ್ರೇಸರರಿಗೆ ತಮ್ಮನ್ನು ತಾವು ಕಂಡುಕೊಳ್ಳುವಂತೆ ಮಾಡಿರುತ್ತೀರಿ.

ಬೊಂಬಾಯಿ ನಗರದಲ್ಲಿ ನಡೆದ ಬಸವೇಶ್ವರರ ಎಂಟನೇ ಶತಮಾನ ಸಮಾರಂಭದಲ್ಲಿ ತಾವು ವಿಶೇಷ ಆಹ್ವಾನಿತರಾಗಿ ಉಪನ್ಯಾಸ ಮಾಡಿ ಭಕ್ತಾದಿಗಳ ಮನಸ್ಸನ್ನು ಗೆದ್ದಿರುತ್ತೀರಿ. ಉಡುಪಿಯಲ್ಲಿ ನಡೆದ ವಿಶ್ವ ಹಿಂದೂ ಪರಿಷತ್ತು, ಅಖಿಲ ಭಾರತ ವೀರಶೈವ ಮಹಾಸಭೆಗಳಲ್ಲಿ ಭಾಗವಹಿಸಿ, ತಮ್ಮ ಅಮೃತವಾಣಿಯಿಂದ ಭಕ್ತಾದಿಗಳನ್ನು ಆಕರ್ಷಿಸಿರುತ್ತೀರಿ. ೧೯೭೬ ರಲ್ಲಿ ಲಂಡನ್ನಿನಲ್ಲಿ ನಡೆದ ಪ್ರೌಢ ಧಾರ್ಮಿಕಗೋಷ್ಠಿಯಲ್ಲಿ ಭಾರತವನ್ನು ಪ್ರತಿನಿಧಿಸಿರುವುದು ಕನ್ನಡ ನಾಡಿಗೇಕೆ ಭಾರತಕ್ಕೂ ಹೆಮ್ಮೆ ತರುವ ವಿಷಯವಾಗಿದೆ.

ಸಾಹಿತ್ಯ ಪ್ರಚಾರ :

ತಾವು ಪ್ರವಚನ ಮಾಡುವಾಗ ಗ್ರಂಥವನ್ನು ಕೊಂಡು ಓದಲು ಜನರನ್ನು ಪ್ರೇರೇಪಿಸುವುದು ಸಾಮಾನ್ಯವಾದ ಸಾಧನೆಯಲ್ಲ - ಅದೊಂದು ಅಮೋಘ ಕಾರ್ಯ. ತಮ್ಮ ಕೃತಿಗಳನ್ನೇ ಅಲ್ಲದೆ ಇತರರ ಪುಸ್ತಕಗಳನ್ನೂ ಮಾರಿಸುತ್ತಿರುವುದು ತಾವು ಕವಿ ಹಾಗೂ ಸಾಹಿತಿಗಳಿಗೆ ನೀಡುತ್ತಿರುವ ಪುರಸ್ಕಾರವೇ ಆಗಿದೆ. ಇದರಿಂದ ಆಗುತ್ತಿರುವ ಕನ್ನಡ ಸಾಹಿತ್ಯ ಪ್ರಸಾರ ವ್ಯಾಪಕವಾದುದಾಗಿದೆ.

ತಾವೇ ಒಂದು ಚಲಿಸುವ ಗ್ರಂಥಾಲಯವಾಗಿರುತ್ತೀರಿ. ನಿಮ್ಮ ಮಾತು ಹಸಿಗೋಡೆಯಲ್ಲಿ ಎಸೆದ ಕಲ್ಲಿನಂತೆ. ಅದರ ಪರಿಣಾಮ- ಭಕ್ತರಿಗೆ ಜೀವನದಲ್ಲಿ ನಾನಾ ಸಮಸ್ಯೆಗಳನ್ನು ದಿಟ್ಟವಾಗಿ ಎದುರಿಸಲು ಸಹಾಯಕ. 'ತಾವು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಕೊಡುತ್ತಿರುವ ಉಪನ್ಯಾಸ ಎಂತಹ ಹೇಡಿಯನ್ನೂ, ಜೀವನದಲ್ಲಿ ಜಿಗುಪ್ಸೆಗೊಂಡವನನ್ನೂ ಸಹ ಹುರಿದುಂಬಿಸುತ್ತದೆ, ಮುಕ್ತಿಗೆ ಮಾರ್ಗದರ್ಶನವನ್ನೀಯುತ್ತದೆ.

ನಾಡಿನಲ್ಲಿ ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ತಮ್ಮ ಸೇವೆ

ಅವಿರಳವಾಗಿ ಸಾಗಲೆಂದು, ತಮಗೆ ದಯಾಮಯನಾದ ಪರಮಾತ್ಮನು ಸುದೀರ್ಘ ಆಯುಷ್ಯವನ್ನು ಮತ್ತು ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸಿ, ತಾವು ನಮ್ಮ ನಗರಕ್ಕೆ ಆಗಮಿಸಿ, ಧರ್ಮ ಜ್ಞಾನದ ಔತಣವನ್ನಿತ್ತು, ಸನ್ಮಾರ್ಗದೆಡೆಗೆ ದಾರಿ ತೋರಿಸಿದ ಮಹತ್ಕಾರ್ಯಕ್ಕಾಗಿ ಮತ್ತೊಮ್ಮೆ ತಮ್ಮನ್ನು ಅಭಿವಂದಿಸಿ, ಈ ಸನ್ಮಾನ ಪತ್ರವನ್ನು ಅರ್ಪಿಸುತ್ತೇವೆ.

ಇತಿ, ಭಕ್ತಾದಿಗಳು, ಅಧ್ಯಕ್ಷರು, ಕಾರ್ಯಕಾರೀ ಸಮಿತಿ ಸದಸ್ಯರು.

ದಿನಾಂಕ : ೫-೨-೧೯೭೮. **ಶ್ರೀ ಬಸವೇಶ್ವರ ವೀರಶೈವ ಸಮಾಜ ಸೇವಾಸಂಘ,**

ಸ್ಥಳ : ಬಸವ ಸದನದ ಆವರಣ,
ನೆಹರು ರಸ್ತೆ.

ಶಿವಮೊಗ್ಗ ನಗರ.

ಬೀಳ್ಕೊಡುಗೆ

ಫೆಬ್ರವರಿ ೬ನೇ ತಾರೀಖು ಮಧ್ಯಾಹ್ನ ವಿದಾಯ ಸಮಾರಂಭ, ಪೂಜ್ಯ ಮಾತೆಯವರನ್ನು ಬೀಳ್ಕೊಡಲು. ಮಂಗಳವನ್ನು ಹಾಡಿ ಬೀಳ್ಕೊಡಲು ಬಂದಿದ್ದರೂ ಯಾರ ಮೊಗದಲ್ಲೂ ನಗೆ ಇಲ್ಲ. ತಮ್ಮ ಹೃದಯವನ್ನು ಹೊರಗಿರಿಸುವ ದುಃಸಾಹಸದಂತೆ ಮಾತೆಯವರ ಅಗಲಿಕೆ. ಪ್ರತಿಯೋರ್ವರ ಮುಖಾರವಿಂದದಲ್ಲಿ ಮಾತೆಯವರ ಬಗ್ಗೆ ಅಚ್ಚೊತ್ತಿದ ತುಂಬುಗೌರವದೊಡನೆ, ಅಗಲಲೇ ಬೇಕಾದ ವಿಷಾದದ ಛಾಯೆ. ತೀರಾ ಬಡವಳಾಗಿ, ದಿನನಿತ್ಯ ಗಮಗಮಿಸುವ ಮಲ್ಲಿಗೆಯನ್ನು ಮಾತೆಯವರ ಪೂಜೆಗೆ ಅರ್ಪಿಸುತ್ತಿದ್ದ ಓರ್ವ ನಿಮ್ನ ವರ್ಗದ ಸ್ತ್ರೀ ಸಭೆಯಲ್ಲೇ ಅಳುತ್ತಾ, "ತಾಯಿ ಮಕ್ಕಳನ್ನು ತೊರೆವಂತೆ ನಮ್ಮನ್ನು ಅನಾಥ ಮಾಡುವಿರಿ" ಎಂದು ಬಿಕ್ಕಿದಾಗ, ಎಲ್ಲರ ದುಃಖದ ಕಟ್ಟೆಯೊಡೆಯಿತು.

"ನೀವು ನಮಗೆ ಹುಚ್ಚು ಹಿಡಿಸಿದ್ದೀರಿ. ನಿಮ್ಮ ವಿಶಾಲ ವಾತ್ಸಲ್ಯ ನಮ್ಮನ್ನು ಮಂತ್ರ ಮುಗ್ಧರನ್ನಾಗಿ ಮಾಡಿದೆ. ಈಗ ನಮ್ಮ ಮನೆ-ಮನ ಬರಿದು ಮಾಡಿ ಹೋಗುತ್ತಿದ್ದೀರಿ........" ಪುರುಷ-ಸ್ತ್ರೀಯರೆನ್ನದೆ ಅಶ್ರು ಬಿಂದುಗಳ ಮುತ್ತಿನ ಹಾರವನ್ನು ಮಾತಾಜಿಯವರಿಗೆ ಸಮರ್ಪಿಸಿತು ಜನತೆ. ಈ ಅಸೀಮ ಪ್ರೇಮ-ಭಕ್ತಿ ಕಂಡು ಗದ್ಗದಿತರಾದ ಮಾತಾಜಿ ಮಾತನಾಡಲಸಮರ್ಥರಾಗಿದ್ದು ಕಡೆಯ ಸಂದೇಶ ನೀಡಿದರು : "ನಮ್ಮ ಬಾಳು ಹರಿವ ನದಿಯಂತೆ. ಅದು ಹರಿದಷ್ಟೂ ಲೋಕೋದ್ಧಾರ. ನಿಮ್ಮಂತೆ ಅಸಂಖ್ಯಾತರಿಗೆ ಜ್ಞಾನಾಮೃತವನ್ನೆರೆಯ ಬೇಕಾಗಿದೆ. ನಲವತ್ತೈದು ದಿವಸ ಕಾಲ,

ಮಳೆಗಾಲದ ಸತ್ವಭರಿತ ಧಾರೆಯಂತೆ ಸುರಿದ ಪ್ರವಚನ ಕೇಳಿದ್ದೀರಿ. ನಮ್ಮ ಸಾಹಿತ್ಯವೆಂಬ ಆಣೆಕಟ್ಟಿನಲ್ಲಿ ಸಂಗ್ರಹಿಸಿದ ಜ್ಞಾನ ನಿಮಗೆ ಕೊಟ್ಟಿರುವೆ, ನಾನಿಲ್ಲದಾಗ ಉಪಯೋಗಿಸಿಕೊಳ್ಳಲು. ಪ್ರತಿ ತಿಂಗಳೂ ಕಲ್ಯಾಣ ಕಿರಣದ ಕಾಲುವೆಯೂ ಜ್ಞಾನಾನುಭವದ ಗಂಗೆಯನ್ನು ಹೊತ್ತು ಬರುತ್ತದೆ ನಿಮ್ಮ ಮನೆ ಬಾಗಿಲಿಗೆ. ಈ ಎಲ್ಲದರ ಸಹಾಯದಿಂದ ಅರಿವನ್ನೇ ಗುರುವನ್ನಾಗಿ ಮಾಡಿಕೊಂಡು, ಆತ್ಮಾನುಭೂತಿ ಪಡೆದು, ಧೀಮಂತ ಪ್ರಜೆಗಳಾಗಿ, ಶ್ರೀಮಂತ ರಾಷ್ಟ್ರವನ್ನು ಕಟ್ಟಿರಿ."

ಸುಮಂಗಲಿಯರು ಆರತಿ ಮಾಡಿ, ಕೊರಳು ಜಗ್ಗುವಂತೆ ಹೂಮಾಲಾರ್ಪಣೆ ಮಾಡಿ ಮಾತೆಯವರನ್ನು ಬೀಳ್ಕೊಟ್ಟಾಗ ಎಲ್ಲರಿಗೆ "ಜೈ ಜೈ" ಮಾಡಿ ಮಾತೆಯವರು ಕಾರಿನಲ್ಲಿ ನಿರ್ಗಮಿಸಿದರು. ಒಟ್ಟಾರೆ ಪ್ರವಚನದ ಪ್ರಭಾವದ ಬಗ್ಗೆ ಉದ್ದುದ್ದ ಲೇಖನ, ಪತ್ರ, ಅಭಿಪ್ರಾಯ ಸಾಕಷ್ಟು ಬಂದಿದ್ದರೂ ಓರ್ವ ಸಾಮಾನ್ಯ ಗೃಹಿಣಿಯ ಒಂದು ಪುಟಾಣಿ ಪತ್ರದೊಡನೆ ನನ್ನ ವರದಿಗೆ ವಿದಾಯ ಹಾಡುವೆ.

ಪೂಜ್ಯ ಮಾತೃಶ್ರೀ ಮಾತಾಜಿ,

ಶ್ರೀಪಾದಕ್ಕೆ ಅನಂತ ನಮನ. ನಿಮ್ಮ ಅಮೋಘ ಪಾಂಡಿತ್ಯ, ವಾಕ್‌ಧಾರೆ ನೋಡಿದರೆ ದೈವಕೃಪೆ ನಿಮಗಾಗಿದೆ ಎಂಬುದರಲ್ಲಿ ಸಂದೇಹವಿಲ್ಲ ಎನಿಸುತ್ತೆ. ಮಹಿಳಾ ಕುಲಕ್ಕೆ ಇದೊಂದು ಹೆಮ್ಮೆಯ ವಿಷಯ. ಮೋಹಿನಿಯು ಅಮೃತವನ್ನು ಹಂಚುವಾಗ ದುಷ್ಟರಿಗೆ ಸಿಕ್ಕಿದರೆ ಕೇಡುಂಟಾದೀತೆಂದು ಬರೀ ದೇವತೆಗಳಿಗೆ ಹಂಚಿದಳು. ಆದರೆ ತಾವಾದರೋ ದಿನಾಲೂ ಹಂಚುವ ಈ ಜ್ಞಾನಾಮೃತ ಆ ಅಮೃತಕ್ಕಿಂತ ಶ್ರೇಷ್ಠವಾಗಿರುವುದೇ ಅಲ್ಲದೆ ದುಷ್ಟರನ್ನೂ ಸಜ್ಜನರಾಗಿ ಪರಿವರ್ತಿಸುವ ದಿವ್ಯ ಸಂಜೀವಿನಿಯಾಗಿದೆ. ನಮ್ಮಂತಹ ಅಸಂಖ್ಯಾತ ದುಃಖಿತರ ಹೃದಯಕ್ಕೆ ಸಾಂತ್ವನ ನೀಡಲೆಂದೇ ತಾವು ಧರೆಗಿಳಿದು ಬಂದಂತಿದೆ. ಸ್ತ್ರೀ ಸ್ವಾತಂತ್ರ್ಯದ ಹಂಬಲ, ನಮ್ಮಂತಹರ ಅನಿಸಿಕೆಗಳೇ ಇಂದು ನಿಮ್ಮಾಕಾರದಲ್ಲಿ ಸಾವಯವಗೊಂಡಂತಾಗಿದೆ ಎಂಬ ನಂಬಿಗೆ-ಸಮಾಧಾನ ನಮಗೆ.

ಹೃತ್ಪೂರ್ವಕ ನಮಸ್ಕಾರಗಳೊಡನೆ,

ಶ್ರೀ ಮತಿ. ವೈ. ಎಸ್. ನಾಗವೇಣಮ್ಮ, ಶಿವಮೊಗ್ಗ.

ಕಲ್ಯಾಣ ಕಿರಣದ ಓದುಗರಿಗೆ ಸೂಚನೆ.

ದೊಡ್ಡವರ ಜೀವನದ ವಿಶೇಷ ಪ್ರಸಂಗಗಳು, ನಗೆಹನಿಗಳು ಮುಂತಾದವನ್ನು ಸಂಗ್ರಹಿಸಿ ಕಳಿಸಿರಿ. ನಿಮ್ಮ ಜೀವನದ ವಿಶೇಷ ಘಟನೆಗಳು, ತಮಾಷೆಯ ಪ್ರಸಂಗಗಳಿದ್ದರೆ ಒಂದು ಪೋಸ್ಟ್‌ಕಾರ್ಡ್‌ಗೆ ಮೀರದಂತೆ ಬರೆದು ಕಳಿಸಿರಿ.

—ಸಂಪಾದಕರು

ಗ್ರಂಥ ವಿಮರ್ಶೆ

"ತರಂಗಿಣಿಯ ತರಂಗಗಳು"

ಪನ್ನಗವೇಣಿ, ಮುದಿಗುಂಡ.

ಕರ್ನಾಟಕದ ಕೀರ್ತಿ ಶಮಂತಕ ಮಣಿಯಾದ ಮಾತಾಜಿಯವರ ಪಾದಪದ್ಮಂಗಳಿಗೆ ಮಾಡುವ ಭಕ್ತಿಪೂರ್ವಕವಾದ ಶಿರಸಾಷ್ಟಾಂಗ ನಮಸ್ಕಾರಗಳು.


ಜನನೀ : — ಹಲವು ದಿನಗಳಿಂದ ನನ್ನ ಮನಸ್ಸಿನಲ್ಲಿ ಮುಳುಗೇಳುತ್ತಿದ್ದ ಭಾವನೆಗಳ ಹೊತ್ತಿಗೆಯನ್ನು ಕಾಗದದ ದೋಣಿಯಲ್ಲಿ, ಲೇಖನಿಯ ಚುಕ್ಕಾಣಿಯ ಸಹಾಯದಿಂದ ತಮಗೆ ಕಳುಹಿಸಬೇಕೆಂಬ ಹಂಬಲ ಮಿಡಿಯುತ್ತಿತ್ತು. ಆದರೆ ಧೈರ್ಯ ಸಾಲದೆ ಮನಸ್ಸು ಡೋಲಾಯಮಾನವಾಗಿತ್ತು. ಫೆಬ್ರವರಿ ಕಲ್ಯಾಣ ಕಿರಣ ಪತ್ರಿಕೆಯಲ್ಲಿ ಗ್ರಂಥವಿಮರ್ಶೆಯ ಪತ್ರವನ್ನು ಓದಿದ ನಂತರ ಬಾಯಾರಿ ಬಸವಳಿದೆನಗೆ ಹಾಲ್ಜೇನು ಸಿಕ್ಕಂತಾಯಿತು. ದಾರಿ ತಿಳಿಯದೆ ತೊಳಲುತ್ತಿದ್ದ ಎನಗೆ ನೇರ ದಾರಿ ದೊರೆತಂತಾಯಿತು.

ಅಜ್ಞಾನಿ ಶಿಶುಗಳ ಜ್ಞಾನ ಗುರುವೇ :— ನಿಮ್ಮ ದರ್ಶನ ಪಡೆದ ಭಾಗ್ಯ ನನ್ನದಲ್ಲವಾದರೂ ಪಡೆದವರ ಮತ್ತು ತಮ್ಮ ಪ್ರವಚನ ಸುಧೆಯನ್ನು ಈಂಟಿದವರಲ್ಲಿ ಎರವಲು ಪಡೆದ ಅತೃಪ್ತೆ. ಆದರೆ ತಮ್ಮ ಬೃಹತ್‌ಕೃತಿ "ತರಂಗಿಣಿ" ಕಾದಂಬರಿಯನ್ನು ಓದಿ ಅದರಲ್ಲಿರುವ ಕರ್ತೃ ಕೃತಿಗಳ, ಭಾವ ಚಿತ್ರಗಳ ನಿರೂಪಣೆಯಿಂದ ನೀವು ಮತ್ತು ಅಕ್ಕನವರು ಸದಾಕಾಲವೂ ನನ್ನ ಮನದಲ್ಲಿ ಪೂಜಿಸಿ, ಧ್ಯಾನಿಸುವ ಆರಾಧ್ಯ ಮೂರ್ತಿಯಾಗಿ ಸ್ಥಿರಗೊಂಡಿದ್ದೀರಿ. ಒಂದು ಮುಖದ ಎರಡು ಕಣ್ಣುಗಳಂತೆ, ಒಂದು ಲತೆಯ ಎರಡು ಕುಡಿಗಳಂತೆ (ಮಾತೃವಾಣಿಯಲ್ಲಿ ಓದಿದ) ಅಂದು ಅಕ್ಕನಾಗಿ ಇಂದು ಮಾತೆಯಾಗಿ ಶರಣರ, ಭಕ್ತರ ಮನೆ-ಮನಗಳ ಮಂಗಳ ಮೂರ್ತಿಯಾಗಿದ್ದೀರಿ.

ಜಗನ್ಮಾತೆಯೇ :— "ತರಂಗಿಣಿ" ಕಾದಂಬರಿಯನ್ನು ಎರಡು ಬಾರಿ ಓದಿ, ನನ್ನ ಅಜ್ಜಿ ಮತ್ತು ಅಕ್ಕಪಕ್ಕದವರಲ್ಲಿ ನೀವೇ ಹೇಳಿರುವಂತೆ (ಕಟ್ಟಿ ಕಾನ್ಫರೆನ್ಸ್) ಪ್ರವಚನ ಮಾಡಿದರೂ ಮತ್ತೊಮ್ಮೆ ಮಗದೊಮ್ಮೆ ಓದಬೇಕೆಂಬಾಸೆ. ಮುಗಿಯುವವರೆಗೂ ಇಹಪರ ಯೋಚನೆ ಇಲ್ಲದೆ, ಊಟ ನಿದ್ರೆ ಯಾವುದನ್ನೂ ಇಚ್ಛಿಸದೆ ಮನಸ್ಸು ಮೋಡಿಗೆ ಒಳಗಾದಂತೆ ತನ್ಮಯವಾಗಿರುತ್ತಿತ್ತು. ಕೇಳುಗರಾದ ನನ್ನ ಅಜ್ಜಿ ಇತರರಿಗೂ ಅದೇ ಅನುಭವ. ಅಕ್ಕನವರು ಕೌಶಿಕನ ಅರಮನೆಯಲ್ಲಿದ್ದೂ ಇಂದ್ರಿಯ ಚಾಪಲ್ಯವನ್ನು ನಿಗ್ರಹಿಸಿ ಮಾಯೆಯನ್ನು ಮೆಟ್ಟಿ, ಅವನು ಕೊಡುವ ಕಿರುಕುಳವನ್ನು ಓದುವಾಗ ಸಿಟ್ಟು ಉದ್ವೇಗಗಳಿಗೆ ವಶರಾಗಿ ಹಲ್ಕಡಿದು ರಾಜನಿಗೆ ಹಿಡಿಶಾಪ ಹಾಕುವುದಾದರೆ, ಮತ್ತೆ ಮೋಸದ ಭೈರಾಗಿಗೆ ಥಳಿಸಿ ಮಾನಸಂರಕ್ಷಿಸಿಕೊಂಡು ಸ್ಮಶಾನದಲ್ಲಿ ಇರುಳನ್ನು ಕಳೆದು ಭಿಕ್ಷೆ ಬೇಡುವಲ್ಲಿಗೆ ಬಂದಾಗ ಒತ್ತರಿಸಿ ಬಂದ ದುಃಖವನ್ನು ಹತೋಟಿಗೆ ತರಬೇಕಾದರೆ ಬಹಳ ಪ್ರಯಾಸವೇ ಆಯಿತು. ನನ್ನ ಇಷ್ಟು ದಿನದ ಜೀವಿತದಲ್ಲಿ ಇಂಥ ಭಕ್ತಿರಸ ಮೋಕ್ಷಪ್ರಧಾನವಾದ, ಹೃದಯ ಸ್ಪರ್ಶಿಯಾದ ಕೃತಿಯನ್ನು ಓದಿಯೇ ಇಲ್ಲ.

ಭವರೋಗ ವೈದ್ಯೆಯೇ :— ಭವಿತ್ವದಿಂದ ಬಳಲುತ್ತಿರುವ ನನ್ನಂತಹ ಅಸಂಖ್ಯಾತ ಮುಗ್ಧ ಮಾನವ ಜಡ ದೇಹಿಗಳನ್ನು ತಮ್ಮ ಕೃತಿ "ತರಂಗಿಣಿ" ಯೆಂಬ ಸಿರಿಂಜ್ ಮೂಲಕ ಭಕ್ತಿ-ಮುಕ್ತಿ ಪ್ರಸಾದದ ಔಷಧವನ್ನು ಚುಚ್ಚಿ ಚೇತನ ಗೊಳಿಸಿದ್ದೀರಿ. ಲಿಂಗಮ್ಮ-ಓಂಕಾರ ದಂಪತಿಗಳ ಭಕ್ತಿ, ಸಾತ್ವಿಕ ಮೂರ್ತಿ ಅಕ್ಕನ ನಿಲುವು, ಹಲವು ಶರಣರ ನಡತೆ, ಇವುಗಳಿಂದ ಪ್ರಪಂಚದಲ್ಲಿರುವ ಸಿಂಗಾರಮ್ಮ-ಬಂಗಾರಮ್ಮನಂತಹ ಕುತ್ಸಿತ ಬುದ್ಧಿಯುಳ್ಳವರು ಸ್ವಲ್ಪ ಮಾತ್ರವಾದರೂ ಸೌಜನ್ಯದ ಹಾದಿಗಿಳಿಯಲು ಮಾರ್ಗದರ್ಶಕ. ಮನಸ್ಸನ್ನು ಎಷ್ಟು ಪಾರಮಾರ್ಥಿಕದ ಕಡೆ ಹರಿಯಬಿಟ್ಟರೆ ಅಷ್ಟು ಶೀಘ್ರದಲ್ಲಿಯೇ ಮುಕ್ತಿಯನ್ನು ಪಡೆಯಬಹುದು. ಉದಾ: ಕಾಮಿನಿ ಕಾಂಚನಗಳ ಒಡೆಯ ಕೌಶಿಕನ ಪರಿವರ್ತನೆಯಿಂದ ಮಾನವ ಜನ್ಮ ಕೇವಲ ಭೋಗಕ್ಕಾಗಿಯೇ ಅಲ್ಲ ಎಂದು ತಿಳಿಯುವಂತಾಯಿತು. ಚೆನ್ನಮಲ್ಲಿಕಾರ್ಜುನನ ಚೆನ್ನಸತಿಯ ಕೃತಿ ಓದಿ ಭವ ಸಾಗರದಲ್ಲಿ ಮುಳುಗೇಳುತ್ತಿದ್ದ ನನ್ನ ಮನ ಬಂಗಾರದ ನೌಕೆಯಲ್ಲಿ ತೇಲುವಂತಾಯಿತು. ಜ್ಞಾನ ಗುರುವಿಗೆ ಹೆಚ್ಚಿಗೆ ಬರೆಯಲು ಶಕ್ತಳಲ್ಲ. ಅದೇ ತಾನೇ ಹೆಜ್ಜೆ ಇಡಲು ಕಲಿತು ತಪ್ಪುಹೆಜ್ಜೆಗಳನ್ನಿಡುತ್ತಾ ಬಿದ್ದೇಳುವ ಶಿಶುವಿನ ರೀತಿಯಂತಿದೆ ಈ ನಿಮ್ಮ ಶಿಷ್ಯೆಯ ಬರವಣಿಗೆ. ಇದರಲ್ಲೇನಾದರೂ ತಪ್ಪು ಒಪ್ಪುಗಳಿದ್ದರೆ ಸರಿಪಡಿಸುವಿರೆಂದು ಬೇಡಿ, ನನ್ನ ಭಾವನೆಗಳ ಲೇಖನಿಯನ್ನು ನಿಲ್ಲಿಸುವೆ. ★

ನಿಮ್ಮ ಅನಿಸಿಕೆ



೧.

ಸಂಪಾದಕರ ಸಮುಕ್ಷಮಕ್ಕೆ,

ನಿಮ್ಮ ಪತ್ರಿಕೆ ಇತ್ತೀಚೆಗೆ ನೋಡಿದೆ. ಧಾರ್ಮಿಕ ಪತ್ರಿಕೆಗಳಲ್ಲಿ ಅತ್ಯುತ್ತಮ ಸ್ಥಾನ ಪಡೆಯುತ್ತದೆ. ಇದೇ ಪ್ರೌಢ ಮಟ್ಟವನ್ನು ಮುದ್ರಣ ಮತ್ತು ವಸ್ತು ವಿಷಯದಲ್ಲಿ ಇರಿಸಿಕೊಂಡು ಮುಂಬರಿದರೆ ಅತ್ಯಂತ ಜನಪ್ರಿಯ ಮಾಸಪತ್ರಿಕೆಯಾಗುವುದರಲ್ಲಿ ಸಂದೇಹವಿಲ್ಲ.

ಎ. ವೃಷಭೇಂದ್ರಾಚಾರ್, ಲೆಕ್ಚರರ್
ಸೊಂಡೂರು.

೨.

ಕಲ್ಯಾಣ ಕಿರಣ ಪತ್ರಿಕೆ ಮೈದಾಳಿದ ಐದು ಮಾಸಗಳಿಂದಲೂ ಓದುತ್ತಲಿರುವ ನನ್ನ ಮನ, ರೆಕ್ಕೆ-ಪುಕ್ಕ ಬಲಿದು ಹಾರುವ ಹಕ್ಕಿಯಂತಾಗಿದೆ. ಪ್ರತಿ ತಿಂಗಳ ಪಾರಿಜಾತವನ್ನು ಆಘ್ರಾಣಿಸುವವರೆಗೆ ಯಾರನ್ನೋ ಅಗಲಿದ ವ್ಯಥೆ; ಯುಗ ಯುಗಗಳ ಅಂತರದ ಭಾಸ. ಸುಖ-ದುಃಖ, ನೋವು-ನಲಿವುಗಳ ಸಮರಾಂಗಣವಾದ ಬಾಳಿನಲ್ಲಿ ನವ ಜಾಗೃತಿ, ನವ ಚೈತನ್ಯ ತುಂಬುವ ಈ ಸಂಜೀವಿನಿಯು ಚಿರಕಾಲ ವರ್ಧಿಸಲಿ. ಪ್ರತಿಯೊಂದು ಮನೆ-ಮನಗಳ ಬೆಳಗುವ ನಂದಾದೀವಿಗೆಯಾಗಲಿ. ಮನದ ವಿಕಾರಕ್ಕೆ ಪುಟ ಹಾಕುವ ಸಿನಿಮಾ ನೋಡಿ, ಮತ್ತು ಕಾಮಪ್ರಚೋದಕ ಕಥೆಗಳನ್ನೋದಿ ಮನಸ್ಸನ್ನು ಕಲುಷಿತ ಮಾಡಿಕೊಳ್ಳುವ ಜನ ಇಂಥ ಮಾಸಪತ್ರಿಕೆಯ ರಸಗವಳ ಭುಂಜಿಸಿ ಧನ್ಯರಾಗುವ ಸದ್ಬುದ್ಧಿ ಬರಲೆಂದು ನನ್ನ ಪ್ರಾರ್ಥನೆ, ದೇವಾಧಿದೇವನಲ್ಲಿ.

ಮುಡಿಗುಂಡ **ಜಿ. ಆರ್. ಪನ್ನಗವೇಣಿ**

೩.

ಪೂಜ್ಯರೆ,

ನಾನು ಕಲ್ಯಾಣ ಕಿರಣದ ಬೆಳಕಿನಿಂದ ಧರ್ಮ, ಆಧ್ಯಾತ್ಮ, ತತ್ತ್ವಜ್ಞಾನಗಳ ಬಗ್ಗೆ ಇರುವ ಸಂದೇಹಗಳೆಂಬ ಕತ್ತಲೆಯನ್ನು ಹೋಗಲಾಡಿಸಿಕೊಳ್ಳುತ್ತಿದ್ದೇನೆ. "ಕಲ್ಯಾಣ ಕಿರಣ"ದ ಜ್ಞಾನವಾಹಿನಿ ಸುಲಲಿತವಾಗಿ ಹರಿದು ದಾಹಗೊಂಡ ಹೃದಯಗಳನ್ನು ತಣಿಸುತ್ತಿದೆ. ಹೀಗೇ ಚಿರಕಾಲ ಹರಿಯಲಿ ಎಂದು ಅಪೇಕ್ಷಿಸುವೆ.

ಹೆಚ್. ಆರ್. ವೇಣುಗೋಪಾಲನ್
ತರೀಕೆರೆ.

ವಿಶ್ವಕಲ್ಯಾಣ ಮಿಷನ್ನಿಗೆ ಧನಸಹಾಯ ಸಲ್ಲಿಸಿ ಪೋಷಕರಾದ ಶಿವಮೊಗ್ಗಾ ಸದ್ಭಕ್ತರು

1. ಶ್ರೀ ಹೆಚ್. ಎಂ. ಲಿಂಗಮರಿಯಪ್ಪ ಮತ್ತು ನಾಗಮ್ಮನವರು
2. ಶ್ರೀ ವ್ಹಿ. ಲಕ್ಕಣ್ಣನವರು, ಕಾಂಟ್ರಾಕ್ಟರ್, ಟ್ಯಾಂಕ್ ಮೊಹಲ್ಲ
3. ಶ್ರೀಮತಿ ಹಾಲಮ್ಮ ಟಿ. ಚನ್ನಬಸಪ್ಪ, ತಿಲಕ್‌ನಗರ
4. ಶ್ರೀ ಭರತರಾಜಶೆಟ್ಟಿ, ಮಂಜುನಾಥ ಟ್ರೇಡಿಂಗ್ ಕಂಪೆನಿ
5. ಶ್ರೀಮತಿ ಲಿಂಗಮ್ಮ ಮತ್ತು ಮಕ್ಕಳು, ವಿನಾಯಕ ಟಾಕೀಸ್
6. ಶ್ರೀಮತಿ ಕಮಲಾಕ್ಷಮ್ಮ ಚನ್ನಮಲ್ಲಪ್ಪ
7. ಶ್ರೀಮತಿ ಮಂದಾಕಿನಿ ರಾಮನಾಥ, ಟ್ಯಾಂಕ್ ಮೊಹಲ್ಲ
8. ಶ್ರೀಮತಿ ಹೆಚ್. ಸಿ. ಲಕ್ಷ್ಮಿದೇವಮ್ಮ ಎಸ್. ಪಿ. ಎಂ. ರೋಡ್
9. ಶ್ರೀ ಮೂಸಪ್ಪ ಕಂಟ್ರಾಕ್ಟರ್, ಮಿಳಘಟ್ಟ
10. ಶ್ರೀಮತಿ ಭೂಪಾಳಂ ಶಕುಂತಲಮ್ಮ
11. ಶ್ರೀಮತಿ ಚನ್ನಬಸಮ್ಮ ಮತ್ತು ಶ್ರೀ ಎಂ. ಬಿ. ಕಾಸೆಟ್ಟಿ
12. ಶ್ರೀಮತಿ ಸಾಧನಾದೇವಿ ಗೋಪಾಲಕೃಷ್ಣ ದಿವೇಕರ್
13. ಶ್ರೀ ವಾಸವಿ ಮಂಡಳಿ
14. ಶ್ರೀಮತಿ ಬಸವಣ್ಣೆಮ್ಮ ಬಸವರಾಜ, ಗೌರಿಶಂಕರ್ ಆಟೋ ಡೀಲರ್ಸ್
15. ಶ್ರೀ ವ್ಹಿ. ವೆಂಕಟಗಿರಿಯಪ್ಪ, ಗಾರ್ಡನ್ ಏರಿಯಾ
16. ಶ್ರೀಮತಿ ಮಂಗಳಮ್ಮ, ಕೆ. ಪಿ. ಮಹಾದೇವಪ್ಪ
17. ಶ್ರೀ ಎ. ವೀರಪ್ಪ, ಹಿತ್ತಲ, ಶಿಕಾರಿಪುರ ತಾಲ್ಲೋಕು
18. ಶ್ರೀಮತಿ ವಿಜಯಲಕ್ಷ್ಮಿ ಆತ್ಮಾರಾಮ, ಚಿಕ್ಕನಾಯಕನ ಹಳ್ಳಿ
19. ಶ್ರೀಮತಿ ನಂಜಮ್ಮ, ಬ್ಯಾಲಕೆರೆ, ತಾ. ಚಿಕ್ಕನಾಯಕನ ಹಳ್ಳಿ

ಕಲ್ಯಾಣ ಕಿರಣದ ಆಜೀವ ಸದಸ್ಯರು, ಶಿವಮೊಗ್ಗಾ

೧. ಶ್ರೀಮತಿ ಎಂ. ಎಲ್. ಲೀಲಾವತಮ್ಮ, ದುರ್ಗಿಗುಡಿ.
೨. ಶ್ರೀಮತಿ ನಾಗವೇಣಿ ಶಾಂತಕುಮಾರ
೩. ಶ್ರೀಮತಿ ಸೀತಾಬಾಯಿ ಸಿ. ಗೌಡ
೪. ಶ್ರೀ ವೈ. ಟಿ. ವೆಂಕಟಕೃಷ್ಣ ಜೋಯಿಸ್
೫. ಶ್ರೀ ವ್ಹಿ. ಲಕ್ಕಣ್ಣ, ಕಂಟ್ರ್ಯಾಕ್ಟರ್
೬. ಶ್ರೀ ಭರತರಾಜಶೆಟ್ಟಿ, ಮಂಜುನಾಥ ಟ್ರೇಡಿಂಗ್ ಕಂಪೆನಿ
೭. ಶ್ರೀಮತಿ ಸುಂದರಲಕ್ಷ್ಮಮ್ಮ ಅಶ್ವತ್ಥ ನಾರಾಯಣ ಶೆಟ್ಟಿ
೮. ಶ್ರೀ ಡಿ. ಎಸ್. ಜಯಪ್ಪ, ಕೆ. ಆರ್. ಪುರಂ
೯. ಶ್ರೀಮತಿ ಲಕ್ಷ್ಮಮ್ಮ ವೆಂಕಟರಮಣ ಶಾಸ್ತ್ರಿ

೧೦. ಶ್ರೀಮತಿ ಎ. ಶಾಂತಾಬಾಯಿ, ಗುರುಕೃಪ
೧೧. ಶ್ರೀಮತಿ ಭೂಪಾಳಂ ಸುಮಿತ್ರಮ್ಮ
೧೨. ಶ್ರೀಮತಿ ಸುವರ್ಣಮ್ಮ ಬಸಪ್ಪ
೧೩. ಶ್ರೀಮತಿ ಚಂದ್ರಪ್ರಭಾ ಜಿ. ವಿ. ತಮ್ಮಯ್ಯ
೧೪. ಶ್ರೀಮತಿ ನಾಗಮ್ಮ ಎಚ್. ಎಂ. ಲಿಂಗಮರಿಯಪ್ಪ
೧೫. ಶ್ರೀ ಜೆ. ಶಾಂತಪ್ಪ, ಹೊಸಮನೆ ಬಡಾವಣೆ (ಕಂತಿನ ಆಜೀವ ಸದಸ್ಯರು)
೧೬. ಶ್ರೀ ಎಂ. ಮಹಾಲಿಂಗಯ್ಯ, ಅಡ್ವೋಕೇಟ್, ಚಿಕ್ಕನಾಯಕನಹಳ್ಳಿ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ
(ರಿಜಿಸ್ಟರ್ಡ್ ಟ್ರಸ್ಟ್)

ಅಕ್ಕಮಹಾದೇವಿ ಶಿಶು ವಿಹಾರ


ಸಹೃದಯರಾದ ಪಾಲಕರೇ,

ಪರಮ ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರು ಸಂಸ್ಥಾಪಿಸಿರುವ ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಯು ಆದರ್ಶ ಶಿಕ್ಷಣ ನೀಡುವ ಶಿಶು ವಿಹಾರಗಳನ್ನು ತೆರೆದಿದ್ದು, ತಮ್ಮ ಮಕ್ಕಳನ್ನು ಕಳಿಸಲು ಸುವರ್ಣಾವಕಾಶವು ಒದಗಿದೆ.


ನರ್ಸರಿ ತರಗತಿ ಕೆ. ಜಿ. 1 ಮತ್ತು ಕೆ. ಜಿ. 2 ಕ್ಕೆ ಮೂರರಿಂದ ಐದು ವರ್ಷಗಳ ವರೆಗಿನ ಮಕ್ಕಳನ್ನು ಕಳುಹಿಸಬಹುದು. **ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮಗಳು** ಎರಡೂ ಲಭ್ಯವಿವೆ. ಆದಷ್ಟು ಬೇಗನೇ ಮಕ್ಕಳ ಪ್ರವೇಶ ದೊರಕಿಸಿಕೊಳ್ಳಿರಿ. ಈ ಸಂಸ್ಥೆಯ ಎರಡು ಶಿಶು ವಿಹಾರಗಳು ಕಾರ್ಡ್ ರೋಡಿನ ಪೂರ್ವ ಮತ್ತು ಪಶ್ಚಿಮಕ್ಕಿವೆ. ನಿಮಗೆ ಸನಿಹವಿರುವಲ್ಲಿ ಕಳಿಸಿರಿ.

ವಿ. ಸೂ. : ಫೀಸು, ವೇಳೆ, ಪ್ರವೇಶ, ಇತ್ಯಾದಿ ವಿವರಗಳಿಗೆ ಬೆಳಗಿನ 9 ರಿಂದ 1-30 ರ ವರೆಗೆ ಮತ್ತು ಮಧ್ಯಾಹ್ನ 3-30 ರಿಂದ 5-00 ರ ವರೆಗೆ ಸಂದರ್ಶಿಸಿರಿ.

ಅಕ್ಕಮಹಾದೇವಿ ಶಿಶು ವಿಹಾರ
ಬಸವ ಮಂಟಪ, ನಂ. 24.
2 ನೇ ಬ್ಲಾಕ್, ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು-560010.



ಶಿವಮೊಗ್ಗೆಯಲ್ಲಿ ನಡೆದ ಸಾಮೂಹಿಕ ಲಿಂಗಪೂಜಾ ಸಮಾರಂಭ



ಪ್ರಪ್ರಥಮ ಮಹಿಳಾ ಜಗದ್ಗುರು, ಕ್ರಾಂತಿಯೋಗಿಣಿ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

Phone : 82335

Correspond to :—

Basava Mantapa

No. 24, Chord Road, II Block, Rajajinagar

BANGALORE-560010